1960 S. S. L. C. KANNADA NON-DETAILED TEXT

ಮಣಿಸರ

ಕುಮಾರರಿಗಾಗಿ

★

ಪ್ರಕಾಶಕರು:

ಯು. ಆರ್. ಶೆಣೈ ಎಂಡ್ ಸನ್ಸ್

ಮಂಗಳೂರು.

ಮಣಿಸರ

★

ಬರೆದವರು :
ಆರ್. ನಿರ್ಮಲಾದೇವಿ.

1959

ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.
U. R. SHENOY & SONS,
Registered Publishers, Mangalore.

ಕ್ರಯ : 0—85 ನಪೈ.] [Price: 0—85 nP.

ಅರಿಕೆ

★

ನಾನು ಸಾಹಿತ್ಯವನ್ನು ಓದುವಾಗ ನನ್ನ ಕಣ್ಣಿಗೆ ಹಲವೊಂದು ಮಣಿಗಳು ಗೋಚರವಾದುವು. ಅವುಗಳಲ್ಲಿ ಕೆಲವನ್ನು ಈ ಮಣಿಸರದಲ್ಲಿ ಕೋದಿದ್ದೇನೆ. ಈ ಸರದಲ್ಲಿರುವವೆಲ್ಲಾ ಮಣಿಗಳೆಂದೇ ನನ್ನ ಭಾವನೆ. ಅವುಗಳಲ್ಲಿ ಕೆಲವನ್ನು ಹೊರನಾಡುಗಳಿಂದ ಎತ್ತಿ ಇರಿಸಿಕೊಂಡಿದ್ದೇನೆ. ಇದರಿಂದ ನಮ್ಮ ನಾಡಿನ ಎಳೆಯರಿಗೆ ಹೊರನಾಡುಗಳ ಆಕಾಂಕ್ಷೆಗಳು ಗೋಚರವಾಗಿ, ಅವರ ಸಾಹಿತ್ಯದ ಮೇಲೆ ಪ್ರೇಮವುಂಟಾಗಬಹುದೆಂದು ನನ್ನ ಹಾರೈಕೆ.

ಈ ಮಣಿಸರವನ್ನು ಅಚ್ಚುಹಾಕಿಸಿ, ಪ್ರಕಟಿಸಲು ಒಪ್ಪಿಕೊಂಡ ಯು. ಆರ್. ಶೆಣೈ ಎಂಡ್ ಸನ್ಸಿನ ವ್ಯಾಪಲಕರಾದ ಶ್ರೀ. ರಘುನಂದನ ಶೆಣೈಯವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಆರ್. ನಿರ್ಮಲಾ ದೇವಿ.

ಅನುಕ್ರಮಣಿಕೆ

೧. ಜೀವಕ.

ಕೃಷ್ಣಪಕ್ಷದ ನವಮಿಯ ದಿನ. ಚೈತ್ರದ ಚೆಂಗದಿರನು ಚೆಂಬಿಸಿಲ ಚೆಂಡುಡಿಗೆಯನ್ನು ವಿಂಧ್ಯೆಯ ಗಿರಿಶಿಖರಗಳಿಗೆ ತೊಡಿಸುತ್ತಿದ್ದಾನೆ. ಬಿಂಬಿಸಾರನ ಬೆಳ್ಗೊಡೆಯ ನೆಳಲಿನಾಸರೆಯಲ್ಲಿ ಮಗಧ ರಾಜ್ಯವು ನೆಮ್ಮದಿಯನ್ನು ಪಡೆಯುತ್ತಿದೆ.

ಆಗ ವಿಂಧ್ಯಾಪರ್ವತದ ತಪ್ಪಲಲ್ಲಿ ಓರ್ವ ಅಗ್ನಿಹೋತ್ರಿಯು ತನ್ನ ಮನೆಯ ಜಗುಲಿಯಲ್ಲಿ ಕುಳಿತು ಎಳನೇಸರು ಮೂಡುವೆಟ್ಟವನ್ನೇರುವ ಸಂಭ್ರಮವನ್ನು ನೋಡುತ್ತಾ ಮೈಮರೆತಿದ್ದನು. ಅವನ ಮನೆಯ ಮುಂದಿನ ರಾಜರಸ್ತೆಯು ಹೊತ್ತಾರೆಯ ತಂಗಾಳಿಯ ತಂಪಿನಿಂದ ಮರವಟ್ಟುಹೋಗಿತ್ತು.

ಆ ಹಾರುವನು ಸೂರ್ಯೋದಯದ ದೃಶ್ಯವನ್ನು ನೋಡುತ್ತಿದ್ದಂತೆಯೇ ಅವನ ದೃಷ್ಟಿಯು ಯಾಕೋ ತೆಂಕು ದಿಕ್ಕಿಗೆ ತಿರುಗಿತು. ಆಗ ಒಬ್ಬ ಪ್ರಯಾಣಿಕನು ರಾಜರಸ್ತೆಯಲ್ಲಿ ನಡೆದು ಬರುತ್ತಿದ್ದನು. ಸ್ವಲ್ಪ ಸಮಯದಲ್ಲಿಯೇ ಆ ದಾರಿಗನು ಹಾರುವನ ಮನೆ ಮುಂದೆ ನಿಂತನು. ಅವನ ಕೈಯ ಕೋಲು, ಬೆನ್ನ ಮೇಲಿನ ಮೂರಾವು, ಅವನ ಮೈಕೈಗಳಲ್ಲಿದ್ದ ದೂಳು, ಅವನು ಬಹುದೂರದ ದಾರಿ ನಡೆದವನೆಂದು ಸಾರುತಿದ್ದುವು. ಅವನ ಮೋರೆಯಲ್ಲಿ ಒಂದು ವಿಧದ ಬೆಳಗು ಬೆಳಗುತಿತ್ತು. ಅವನು ತೆಂಕನಾಡಿನಿಂದ ಮಗಧ ರಾಜಧಾನಿಯಾದ ಗಿರಿವ್ರಜಕ್ಕೆ ಹೋಗುವವನಂತೆ ತೋರಿತು.

ದಾರಿಗನು ವಿಪ್ರನಿಗೆ ನಮಸ್ಕರಿಸಿ, ಯೋಗಕ್ಷೇಮ ವಿಚಾರಿಸಿದನು. ಹಾರುವನೂ ಅವನನ್ನು ಆದರದಿಂದ ಬರಮಾಡಿಕೊಂಡು, ತಕ್ಕ ಆತಿಥಿ ಸತ್ಕಾರಗಳನ್ನು ಮಾಡಿದನು. ದಾರಿಗನು ತುಸು ದಣುವಾರಿಸಿಕೊಂಡು ಹಾರುವನ ಪಕ್ಕದಲ್ಲಿಯೇ ಜಗಲಿಯಲ್ಲಿ ಕುಳಿತು, ಸರಸಸಲ್ಲಾಪಗಳಿಗೆ ತೊಡಗಿದನು. ರಾಮಾಯಣಾದಿ ಪುರಾಣಗಳು ಮೊದಲು ಅವರ ಮಾತುಗಳಿಗೆಡೆ ಕೊಟ್ಟವು. ಅನಂತರ ಆಧ್ಯಾತ್ಮಿಕವೂ ಪ್ರವೇಶಿಸಿತು. ಹಾರುವನಿಗಾಗ ಆ ದಾರಿಗನ ಪೂರ್ವ ವೃತ್ತಾಂತವನ್ನೆಲ್ಲಾ

ಕೇಳಲು ಕುತೂಹಲವುಂಟಾಯಿತು. ಅವನು ಆಗಂತುಕನನ್ನುದ್ದೇಶಿಸಿ—'ಎಲೈ ತರುಣನೇ, ನಿನ್ನ ಬರವು ಯಾವ ದೇಶದಿಂದಾಯಿತು? ನಿನ್ನ ಪಯಣವೆತ್ತ ಸಾಗಬೇಕಾಗಿದೆ" ಎಂದು ಕೇಳಿದನು.

ಆದಕ್ಕಾಹೊಸಬನು "ವಿಪ್ರವರ್ಯಾ! ನನ್ನ ಕತೆಯು ವಿಚಿತ್ರವಾಗಿದೆ. ನನ್ನೂರು ಗಿರಿವ್ರಜ. ಇಪ್ಪತ್ತು ವರ್ಷಗಳ ಹಿಂದೆ, ನನ್ನ ತಾಯ್ತಂದೆಯರನ್ನೂ, ಬಂಧುಬಳಗವನ್ನೂ ಬಿಟ್ಟು ಜ್ಞಾನಾರ್ಜನೆಗಾಗಿ ತೆಂಕು ನಾಡಿಗೆ ಹೋದವನು, ಈಗ ಮನೆಕಡೆಗೆ ಹೊರಟಿದ್ದೇನೆ" ಎಂದನು.

ಹಾರುವನಿಗೆ ಈ ಮಾತುಗಳನ್ನು ಕೇಳಿ ಕುತೂಹಲವು ಇಮ್ಮಡಿಯಾಯಿತು. "ವಯಸ್ಯಾ! ನೀನು ಇಪ್ಪತ್ತು ವರ್ಷ ಕಾಲ ಏನು ಮಾಡಿದೆ? ನಿನ್ನ ಆತ್ಮಕಥೆಯನ್ನು ಕೇಳಲು ತುಂಬಾ ಆತುರನಾಗಿದ್ದೇನೆ. ಎಲ್ಲವನ್ನೂ ತಿಳಿಸಿದರೆ ನನಗೆ ತುಂಬಾ ಸಂತೋಷವಾಗುವುದು" ಎಂದನು. ದಾರಿಗ ನಾಗ ತನ್ನ ಕಥೆಯನ್ನಾರಂಭಿಸಿದನು.

"ನನ್ನ ತಂದೆಯು ಕ್ಷತ್ರಿಯ ಕುಲತಿಲಕನು. ಅವನ ಮೂವರು ಗಂಡುಮಕ್ಕಳಲ್ಲಿ ನಾನು ಕಿರಿಯನು. ನಾನು ಬಿಲ್ಲು ವಿದ್ಯಾವಿಶಾರದನಾಗಬೇಕೆಂದು ನನ್ನ ತಂದೆಯ ಬಯಕೆಯಾಗಿತ್ತು. ನನ್ನ ಅಣ್ಣಂದಿರು ಧನುರ್ವಿದ್ಯೆಯಲ್ಲಿ ನಿಪುಣರಾದರು, ಭೋಗವಿಲಾಸಗಳಲ್ಲಿ ಮಗ್ನರಾದರು. ಆದರೆ ನನಗದಾವುದೂ ರುಚಿಸಲಿಲ್ಲ. ಆದ್ದರಿಂದ ಅವರ ಸಂಗವನ್ನು ಬಯಸದೆ ಒಬ್ಬೊಂಟಿಗನಾಗಿಯೇ ಕಾಲಕಳೆಯುತ್ತಿದ್ದೆನು. ನನ್ನ ನೋಟವು ಹರಿಯುವ ಹೊಳೆಕಡೆ, ಮಿನುಗುವ ಚುಕ್ಕಿಗಳ ಕಡೆ, ಓಡುತ್ತಿತ್ತು. ನನಗೆ ಬೀದಿಗಿಳಿದು ಜನರ ನಡೆನುಡಿಗಳನ್ನು ತಿಳಿದುಕೊಳ್ಳಲು ಆಸೆ; ಅವರ ಕಷ್ಟ ಸಂಕಷ್ಟಗಳಿಗೆ ಕಿವಿಗೊಡಲು ನನಗಾತುರ; ಕಣ್ಣಿಗೆ ಬಿದ್ದ ಪ್ರತಿಯೊಂದು ವಸ್ತುವನ್ನು ಪರಿಶೀಲಿಸುವುದೆಂದರೆ ನನಗೆ ಪ್ರೀತಿ. ಆದರೇನು? ನನ್ನ ಇಷ್ಟದಂತೆ ನಡೆಯಲು ನನಗೆ ಅವಕಾಶ ಎಲ್ಲಿ? ಆದ್ದರಿಂದ ಸೆರೆಮನೆ ಸೇರುವೆ ನನಗಾದಂತೆ, ನಾನು ಒಬ್ಬೊಂಟಿಗನಾಗಿಯೇ ಕಾಲಕಳೆಯುತ್ತಿದ್ದೆ.

"ಆಗ ನನ್ನ ತಂದೆಗೆ ನನ್ನ ನಡತೆಯು ವಿಲಕ್ಷಣವಾಗಿ ತೋರಿರಬೇಕು. ಅವನೂ ಚಿಂತಾಮಗ್ನನಾದನು; ಯೋಗ್ಯ ಗುರುಗಳನ್ನು

ನೇಮಿಸಿ ನನಗೆ ಯೋಗ್ಯವಾದ ವಿದ್ಯಾಭ್ಯಾಸದ ಏರ್ಪಾಡು ಮಾಡಿದನು ಆದರೆ ಹಸಿವಿಲ್ಲದವನಿಗೆ ಉಣಬಡಿಸಿದರೇನು ಫಲ? ನನಗೆ ಬೇಕಾಗಿದ್ದುದು ವಂಶ ಪ್ರತಿಷ್ಠೆಯಲ್ಲ. ಜ್ಞಾನ ಪ್ರತಿಷ್ಠೆ! ಶಸ್ತ್ರಬಲದಿಂದ ಜನತೆಯನ್ನು ಬಗ್ಗಿಸಿ ಕಾಡುವ ಅಧಿಕಾರ ನನಗೆ ಬೇಕಾಗಿರಲಿಲ್ಲ ಜನತಾ ಸೇವೆಯಿಂದ ಜನರನ್ನೊಲಿಸಿಕೊಳ್ಳುವ ಶಾಸ್ತ್ರದ ಅರಿವು ನನಗೆ ಬೇಕಾಗಿತ್ತು. ಆದ್ದರಿಂದ ಗುರುವಿನ ಬೋಧನೆಯು ಪರಿಣಾಮಕಾರಿಯಾಗಲಿಲ್ಲ. ನನ್ನ ವರ್ತನೆಯು ಬದಲಾಗಲಿಲ್ಲ."

ಆಗ ವಿಪ್ರನು "ನಿನ್ನ ತಂದೆ ನಿನಗೆ ಶಿಕ್ಷೆ ವಿಧಿಸಲಿಲ್ಲವೇ?" ಎಂದು ಕೇಳಿದನು.

ದಾರಿಗನು—"ಇಲ್ಲ, ಇಲ್ಲ. ನನ್ನ ತಂದೆ ವಿಚಾರವಂತ. ಅವನು ಒಮ್ಮೆ ನನ್ನನ್ನು ಕರೆಯಿಸಿಕೊಂಡು ನನ್ನ ನಡತೆಯನ್ನು ಟೀಕಿಸಿದನು. ಅನೇಕ ಹಿತೋಕ್ತಿಗಳನ್ನು ಹೇಳಿದನು. ಅವನು ಹೇಳಿದುದನ್ನು ಮೌನವಾಗಿ ಕೇಳಿದೆನು. ಆದರೆ ಬಾಯನ್ನು ತೆರೆಯಲೇ ಇಲ್ಲ. ಆಗ ನನ್ನ ತಂದೆಯು ನನ್ನ ಹಟಮಾರಿತನವನ್ನು ತಿಳಿದು ನಯದಿಂದ—"ಮಗುವೇ! ನಿನ್ನ ಮನಸ್ಸಿನಲ್ಲಿರುವುದೇನು? ಸ್ಪಷ್ಟವಾಗಿ ತಿಳಿಸು. ನಿನ್ನ ಜೀವನದ ಮಹದಾಕಾಂಕ್ಷೆ ಏನು? ನಿನ್ನ ಅಣ್ಣಂದಿಯರಂತೆ ಕ್ಷತ್ರಿಯರಿಗೊಪ್ಪುವ ಬೇಟೆ, ಶಸ್ತ್ರಾಭ್ಯಾಸ ಮೊದಲಾದುವುಗಳಲ್ಲಿ ಯಾಕೆ ಶ್ರದ್ಧೆಯನ್ನು ತೋರುವುದಿಲ್ಲ? ನಿನ್ನೆದೆಯನ್ನು ಬಿಚ್ಚಿ ಹೇಳು" ಎಂದನು.

"ನನಗಾಗ ಸಂತೋಷವೂ, ದುಃಖವೂ ಒಮ್ಮೆಯೇ ತೋರಿದುವು. ನನ್ನ ಕಣ್ಣುಗಳಲ್ಲಿ ನೀರು ಸುರಿಯಿತು. ನಾನು ಜನ್ಮದಾತನನ್ನು ತಬ್ಬಿಕೊಂಡು, ನನ್ನ ತಲೆಯನ್ನು ಅವನ ಎದೆಯ ಮೇಲಿಟ್ಟು "ಓ! ಪಿತನೇ ಕ್ಷಮಿಸು. ಜನರ ಕಷ್ಟಸಂಕಷ್ಟಗಳನ್ನು ನೋಡಿ ನನಗೆ ಜೀವನದಲ್ಲಿ ಬೇಸರವುಂಟಾಗಿದೆ. ಅವರಳಲನ್ನು ನಿವಾರಿಸಲು ನನ್ನೆದೆಯು ಆತುರಪಡುತ್ತಿದೆ. ಅಶ್ವಿನೀ ಕುಮಾರರಂತೆ ಆಯುರ್ವೇದವನ್ನು ಕಲಿತು, ಧನ್ವಂತರಿಯಂತೆ ಎಲ್ಲಾ ರೋಗಗಳನ್ನು ನಿರ್ಮೂಲ ಮಾಡಿ, ವೈದ್ಯರಾಜನೆನಸಿಕೊಳ್ಳಬೇಕೆಂದಿರುವೆನು" ಎಂದು ಮೆಲುಮಾತಿನಿಂದ ನುಡಿದೆನು.'

"ನನ್ನ ಮಾತನ್ನು ಕೇಳಿ ನನ್ನ ತಂದೆಗೆ ಸಿಟ್ಟು ಬಂತು. ತನ್ನ

ಅಸಮ್ಮತಿಯನ್ನು ತೋರಲೆಂದೇ "ಕ್ಷತ್ರಿಯರು ವೈದ್ಯರಾಗರು" ಎಂದನು. ನಾನಾಗ—"ಕ್ಷತ್ರಿಯರು ವೈದ್ಯರಾಗದಿದ್ದರೆ ವೈದ್ಯಜ್ಞಾನ ಸಂಪಾದಿಸ ಕೂಡದೇ? ಜ್ಞಾನ ಸಂಪಾದನೆಯು ಮನುಷ್ಯ ಜೀವನದ ಗುರಿ" ಎಂದೆನು. ನನ್ನ ತಂದೆಗಾಗ ನನ್ನ ಹಟಮಾರಿತನವು ಪ್ರತ್ಯಕ್ಷವಾಯಿತು—"ನದಿಯ ಪ್ರವಾಹವನ್ನು ಹಿಂದಿರುಗಿಸಿ ನದಿ ಮೂಲಕ್ಕೊಯ್ಯಲು ಸಾಧ್ಯವಿಲ್ಲ. ಮಗುವೇ ನಿನ್ನಿಷ್ಟದಂತೆ ಮಾಡು. ಆದರೆ ನೀನಿನ್ನೂ ಎಳೆಯನು. ವಯಸ್ಸು ಬರೇ ಹನ್ನೆರಡು. ನಿನ್ನಣ್ಣಂದಿಯರಂತೆ ನಿನ್ನ ವೈರಿಯ ಎಚ್ಚರ ನೀನು ತೆಗೆದುಕೊಳ್ಳಲಾರೆ. ಯೋಗ್ಯವಾದ ಭೋಗ ವಿಲಾಸಾದಿಸುಖ ಗಳನ್ನು ಅನುಭವಿಸಿದ ಮೇಲೆ ನಿನ್ನಿಷ್ಟದಂತೆ ಮಾಡಬಹುದಾಗಿತ್ತು" ಎಂದು ಹೇಳಿ ತಂದೆಯು ನಿಟ್ಟುಸಿರನ್ನು ಬಿಟ್ಟನು. ನನಗಾಗ ಧೈರ್ಯ ಎಲ್ಲಿಂದಲೋ ಬಂತು. "ನನ್ನ ಸತ್ವ ಪರೀಕ್ಷೆಯ ಕಾಲ ಬಂದಿದೆ. ಸಿಂಹದ ಮರಿಗಳಿಗೆ ಇತರರ ಸಹಾಯ ಬೇಕೇ? ನನ್ನ ವಿಷಯ ನನಗೆಚ್ಚರಿಕೆ ತೆಗೆದುಕೊಳ್ಳಲು ಶಕ್ತಿಯಿದೆ. ಪಿತನೇ, ನಮ್ಮ ವಂಶಕ್ಕೆ ಕಳಂಕವನ್ನು ನಾನು ತರಲಾರೆ. ನಿನ್ನ ಕೀರ್ತಿಯನ್ನು ಬೆಳಗಿಸುವೆ. ಆದರೂ ಸ್ವಲ್ಪ ಜ್ಞಾನ ಸಂಪಾದನೆಗಾಗಿ ಅಜ್ಞಾತ ವಾಸಮಾಡುವೆನು. ಆ ಮೇಲೆ ಮುಗಿಲ ಮರೆಯನ್ನು ಕಳೆದು ಚಂದ್ರಮನು ಶರತ್ಕಾಲದಲ್ಲಿ ಮೈದೋರುವಂತೆ, ನಾನು ಜ್ಞಾನ ಸಂಪೂರ್ಣ ನಾದಾಗ ತಮ್ಮ ಮುಂದೆ ಬರುವೆನು. ಈಗ ನನ್ನ ಮನಸ್ಸಿನ ಬಯಕೆ ಯನ್ನು ಪೂರೈಸಲು ಅನುಮತಿಯನ್ನು ದಯಪಾಲಿಸಬೇಕು" ಎಂದು ಹೇಳಿ ತಂದೆಯ ಕಾಲುಗಳ ಮೇಲೆ ನನ್ನ ಹಣೆಯನ್ನು ಇಟ್ಟೆನು.

"ನನ್ನ ತಂದೆಯು ನನ್ನನ್ನು ಹಿಡಿದೆತ್ತಿ, ನನ್ನ ತಲೆಯನ್ನು ಸವರಿ, "ಮಗುವೇ, ಜ್ಞಾನಾರ್ಜನೆಯು ಶ್ರೇಷ್ಠವಾದ ಕೆಲಸವಾದರೂ ಅದನ್ನು ಕಷ್ಟದಿಂದ ಸಾಧಿಸಬೇಕಾಗಿದೆ. ನಿನ್ನಿಷ್ಟದಂತೆ ಮಾಡಲು ಅನುಮತಿ ಯನ್ನು ಕೊಟ್ಟಿದ್ದೇನೆ. ನೀನೆಲ್ಲಿಗೆ ಬೇಕಾದರೂ ಹೋಗಬಹುದು. ಆದರೆ ಹೋದೆಡೆ ಮರ್ಯಾದೆಯನ್ನು ಮೀರಿ ನಡೆಯಬೇಡ. ನಿನ್ನ ಗೌರವವನ್ನು ಕಾಪಾಡಿಕೊಂಡಿರು. ದಾರಿಯಲ್ಲಿ ಹೆಜ್ಜೆಯಿಡುವಾಗ ನಿನ್ನ ಕಣ್ಣುಗಳೂ, ಕಿವಿಗಳೂ ತೆರೆದಿರಲಿ. ನಿನಗೆ ಮಂಗಳವಾಗಲಿ" ಎಂದು ಹರಸಿದನು.

ನನಗಾಗ ಮೈಹಿಡಿಸದಷ್ಟು ಸಂತೋಷವಾಯಿತು. ನಾನು ತಂದೆಗೆ

ಪ್ರದಕ್ಷಿಣೆ ಮಾಡಿದೆನು. ತಿರುಗಿ ಕಾಲಿಗೆ ಬಿದ್ದು ನಮಸ್ಕರಿಸಿ, ಪಾದರಜವನ್ನು ನನ್ನ ತಲೆಯ ಮೇಲೆ ಸಿಂಪಿಸಿ, ಮೂಗ್ದಾಣವನ್ನು ಕಿತ್ತುಕೊಂಡ ಹೋರಿ ಕರುವಿನಂತೆ, ನನ್ನ ಮನೆಗೆ ಓಡಿಹೋದೆನು. ಊಟ ತೀರಿಸಿ ಮಲಗಿದೆನು. ಆದರೆ ನನಗೆ ನಿದ್ದೆಯೇ ಬರಲಿಲ್ಲ. ಹಾಸಿಗೆಯ ಮೇಲೆ ಹೊರಳಾಡಿದೆನು ಕಡೆಗೆ ಅಂದೇ ರಾತ್ರಿ ಹೊರಡಲು ನಿಶ್ಚಯ ಮಾಡಿಕೊಂಡೆನು. ವೇಷ ಮರೆಯಿಸಿ ನಟ್ಟಿರುಳು ಹುಟ್ಟೂರನ್ನು ಬಿಟ್ಟೆನು. ಒಬ್ಬೊಂಟಿಗನಾಗಿಯೇ ನಾನು ಹೊರಟು, ಊರು, ಪುರ, ಪಟ್ಟಣ, ಮಠ ಆಶ್ರಮಗಳನ್ನೆಲ್ಲಾ ಸಂದರ್ಶಿಸಿ, ಸ್ವಲ್ಪ ಜ್ಞಾನ ಸಂಪಾದನೆ ಮಾಡಿರುವೆನು" ಎಂದು ಆ ದಾರಿಗನು ಹೇಳಿದನು.

ದಾರಿಗನ ಕತೆಯನ್ನು ಸಾವಧಾನ ಚಿತ್ತದಿಂದ ಕೇಳಿದ ಬ್ರಾಹ್ಮಣನು, ಆವನ ಜ್ಞಾನದ ಮಟ್ಟವನ್ನು ಪರೀಕ್ಷೆ ಮಾಡಬೇಕೆಂದು ನಿರ್ಧರಿಸಿ—"ಗೆಳೆಯನೆ, ನಿನ್ನ ಜ್ಞಾನವನ್ನು ಪ್ರಯೋಗದ ಓರೆಗಲ್ಲಿಗೆ ಹಚ್ಚಬೇಕೆಂದಿರುವೆನು. ಏನನ್ನುವೆ?"

ದಾರಿಗ:—"ಅಡ್ಡಿಯಿಲ್ಲ. ಮಹಾ ಸಂತೋಷ."

ವಿಪ್ರ:—ಹಾಗಾದರೆ, ನೀನು ಬರುವುದಕ್ಕಿಂತ ಮುಂಚೆ ನನ್ನ ಮನೆಯ ಮುಂದೆ ಏನ್ನೆಲ್ಲಾ ನಡೆದಿದೆ?

ದಾರಿಗನ ಮೋರೆಯಲ್ಲೊಂದು ಮುಗುಳ್ನಗೆ ಮಿಂಚಿತು. ಅವನು ಕೂಡಲೇ ಮುಂಗಡೆಯ ರಸ್ತೆಯಲ್ಲಿ ಸ್ವಲ್ಪ ದೂರ ನಡೆದುಹೋದನು ಅನಂತರ ನಿಧಾನವಾಗಿ ಹಿಂದಿರುಗಿ ಬಂದು, ಆ ಹಾರುವನ ಪಕ್ಕದಲ್ಲಿಯೇ ಕುಳಿತು ಬಹು ನಮ್ರತೆಯಿಂದ ಹೀಗಂದನು:—"ಈ ದಿನ ಪ್ರಾತಃಕಾಲ ಒಬ್ಬ ಮನುಷ್ಯನು ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು ಈ ದಾರಿಯಲ್ಲಿ ಹೋಗಿದ್ದಾನೆ. ಆ ಹೊರೆಯು ಬಲು ಭಾರವಿದ್ದಿರಬೇಕು. ಆ ಕಾಲದಲ್ಲಿ ಅವನು ಕುಳ್ಳನಿದ್ದ. ಬಲವಿಲ್ಲದವನಾಗಿದ್ದ. ಆ ಮೇಲೆ ಒಂದು ಆನೆಯು ಇದೇ ದಾರಿಯಲ್ಲಿ ಹೋಗಿದೆ. ಅದನ್ನು ಒಬ್ಬಳು ಹೆಂಗುಸು ನಡೆಯಿಸಿಕೊಂಡು ಹೋಗುತ್ತಿದ್ದಳು. ಆದರ ಬಲಗಣ್ಣು ಕುರುಡಾಗಿತ್ತು. ಎಡಗಾಲು ಕುಂಟುತಿತ್ತು. ಸ್ವಲ್ಪ ಸಮಯದನಂತರ ಒಂದು ಗಾಡಿಯು ಹೋಗಿದೆ. ಗಾಡಿ ಹೊಡೆಯುವವನು ಆತುರಪಟ್ಟಂತೆ ತೋರುತ್ತಿದೆ.

ಅವನು ಬಹಳ ಅವಸರದಿಂದ ಗಾಡಿಯನ್ನು ಹೊಡೆದುಕೊಂಡು ಹೋಗಿದ್ದಾನೆ. ಎತ್ತುಗಳು ಬೇಗ ಹೋಗುವಂತೆ ಅವನು ಚಾಟಿಯನ್ನು ಹೆಚ್ಚಾಗಿ ಉಪಯೋಗಿಸಿದ್ದಾನೆ. ಅಲ್ಲದೆ ಅವನ ಸಂಗಡವಿದ್ದ ಒಂದು ನಾಯಿಯೂ ಬೊಗಳುತ್ತಾ ಅತ್ತಿತ್ತ ನೆಗೆದು ಎತ್ತುಗಳನ್ನು ಬೆದರಿಸಿ ಓಡಿಸುತಿತ್ತು"— ಎನ್ನುವಷ್ಟರಲ್ಲಿ ಹಾರುವನು ಆಶ್ಚರ್ಯದಿಂದ "ಅಷ್ಟೇ ಅಲ್ಲವೇ? ಇನ್ನೇನೂ ನಿನಗೆ ಕಾಣಲಾರದು" ಎಂದನು. ಇಷ್ಟು ವಿಷಯಗಳನ್ನು ಬ್ರಾಹ್ಮಣನು ಕಣ್ಣಾರೆ ಕಂಡಿದ್ದನು. ಆಗ ದಾರಿಗನು ಮುಗುಳ್ನಗೆಯಿಂದ "ಅಷ್ಟೇ ಅಲ್ಲ! ಒಬ್ಬ ಕಳ್ಳನೂ ಹೋಗಿದ್ದಾನೆ. ಅವನು ಈ ಪಕ್ಕದ ಕಾಡಿನಿಂದ ಹೊರಬಿದ್ದನು, ನಿನ್ನನ್ನು ಕಂಡು ಹೆದರಿದನು. ಕೆಲವು ನಿಮಿಷಗಳ ವರೆಗೆ ನಿಂತು ನಿನ್ನನ್ನು ಚೆನ್ನಾಗಿ ನೋಡಿದನು. ನೀನು ಧ್ಯಾನಮಗ್ನನಾಗಿ ಕಣ್ಮುಚ್ಚಿಕೊಂಡಿದ್ದುದನ್ನು ತಿಳಿದು ಆ ಮೇಲೆ ಅವನು ಕಾಲಿಗೆ ಬುದ್ಧಿ ಹೇಳಿದನು. ಆದರೆ ನೀನು ಅವನನ್ನು ಕಾಣಲೇ ಇಲ್ಲ. ಬಹುಶಃ ಅವನು ಹೆಚ್ಚು ದೂರ ಹೋಗಿರಲಾರನು ಅವನಿಗೆ ಗಾಯವಾಗಿದೆ; ನೋವಿನಿಂದ ನರಳುತ್ತಿರಬಹುದು" ಎಂದನು.

ಈ ಮಾತುಗಳನ್ನು ಕೇಳಿ ಹಾರುವನಿಗೆ ನಗು ಬಂತು. "ನಿನ್ನ ಮಾತುಗಳಿಗೆ ಆಧಾರವೇನಿದೆ?" ಎಂದು ದಾರಿಗನನ್ನು ಪ್ರಶ್ನಿಸಿದನು. ದಾರಿಗನು ಬಾಯ್ದೆರೆಯುವುದರೊಳಗಾಗಿ ಮೂರು ಸೈನಿಕರೂ, ಸೈನ್ಯಾಧಿಪತಿಯೊಬ್ಬನೂ ಪಕ್ಕದ ಕಾಡಿನಿಂದ ಓಡಿ ಬಂದು, ಹಾರುವನ ಮುಂದೆ ನಿಂತರು. ಆ ದಾರಿಗನಾಗ—"ಇವರು ಅರಮನೆಯ ಕಾವಲುಗಾರರು, ಕಳ್ಳನನ್ನು ಬೆನ್ನಟ್ಟಿ ಬಂದಿದ್ದಾರೆ. ಅವರೇ ಕಳ್ಳನಿಗೆ ಬಾಣಹೊಡೆದು ಗಾಯ ಮಾಡಿರಬೇಕು. ಆದರೆ ಅವನು ಎಲ್ಲಿಯೋ ಅಡಗಿ ನಿಂತು, ಅವರ ಕಣ್ಣು ಮರೆಯಿಸಿ, ಗಾಯಕ್ಕೆ ಬಟ್ಟೆಯನ್ನು ಕಟ್ಟಿ ತಲೆ ತಪ್ಪಿಸಿಕೊಂಡನು" ಎಂದನು.

ಸೈನಿಕರು ಸುತ್ತುಮುತ್ತ ನೋಡಿದರು. ಆ ಮೇಲೆ ಬ್ರಾಹ್ಮಣನನ್ನುದ್ದೇಶಿಸಿ—"ಈ ದಾರಿಯಲ್ಲಿ ಯಾರಾದರೂ ಹೋದರೋ;" ಎಂದು ಒಮ್ಮೆಯೇ ಕೇಳಿದನು. ಬ್ರಾಹ್ಮಣನು ತಾನು ಯಾರನ್ನೂ ನೋಡಲಿಲ್ಲವೆಂದು ಸನ್ನೆಯಿಂದ ಸೂಚಿಸಿದನು. ದಾರಿಗನು ಮಾತ್ರ ಸುಮ್ಮನಿರದೆ,

"ಸ್ವಲ್ಪ ಹೊತ್ತಿಗೆ ಮುಂಚೆ ಒಬ್ಬ ಕಳ್ಳನು ಹೋಗಿದ್ದಾನೆ. ನಿಮ್ಮ ಬಾಣದ ಏಟಿನಿಂದ ಅವನಿಗೆ ಗಾಯವಾಗಿದೆ. ನಿಮ್ಮೊಡ ಬಡಿಯ ಹಾದಿಯನ್ನು ಹಿಡಿದು ಹೋದರೆ ಅವನು ಕಾಣಸಿಗುವನು", ಎಂದು ಹೇಳಿ ದೂರದಲ್ಲಿ ಹಾಳು ಬಿದ್ದ ಮನೆಗಳ ಕಡೆ ತನ್ನ ಬಲಗೈಯೆತ್ತಿ ತೋರಿಸಿದನು.

ಸೈನಿಕರಿಗೆ ಈ ಮಾತುಗಳು ಆಶ್ಚರ್ಯವನ್ನುಂಟುಮಾಡಿದುವು. ಅವರ ಸೈನ್ಯಾಧಿಪತಿಯು ವಿನಯದಿಂದ ಆ ಕಳ್ಳನ ವಿಚಾರವು ಹೇಗೆ ತಿಳಿಯಿತೆಂದು ಅವನನ್ನು ಕೇಳಿದನು. ಆ ಪ್ರಶ್ನೆಗೆ ಉತ್ತರ ಕೊಡದೆ, ಆ ದಾರಿಗನು—"ನೀವೀಗಲೇ ಬೇಗನೆ ನಡೆದು ಹೋದರೆ ಅವನು ನಿಮ್ಮ ಕೈಗೆ ಸಿಕ್ಕುವನು. ಇಲ್ಲವಾದರೆ ತಪ್ಪಿಸಿಕೊಂಡು ಹೋಗಲೂ ಸಾಕು" ಎಂದು ಬಿಟ್ಟನು. ಆ ಕಳ್ಳನ ಪರಿಚಯ ದಾರಿಗನಿಗೆ ಗೊತ್ತೆಂದು ಸೈನಿಕರು ಊಹಿಸಿದರು. ಅವನೂ ತಮ್ಮ ಸಂಗಡ ಬರಬೇಕೆಂದು ಕೇಳಿಕೊಂಡರು. ದಾರಿಗನು ಅನಿಚ್ಛೆಯಂತೆ ಅವರೊಡನೆ ಹೊರಟನು. ಮೌನವಾಗಿ ಅವರು ನಡೆದು ಹೋಗಲು ಸ್ವಲ್ಪ ಸಮಯದಲ್ಲಿ ಒಂದು ಹಾಳುಮನೆಯು ತೋರಿತು; ಕಳ್ಳನಲ್ಲಿಯೇ ಇದ್ದಾನೆಂದು ದಾರಿಗನು ಕೈ ಸಂಕೇತದಿಂದ ಸೂಚಿಸಿದನು.

ಸೈನಿಕರು ಜಾಗ್ರತೆಯಾಗಿ ಮನೆಯನ್ನು ನುಗ್ಗಿದರು. ಗಾಯದ ನೋವನ್ನು ತಾಳಲಾರದೆ ನೆಲದ ಮೇಲೆ ಮಲಗಿಕೊಂಡಿದ್ದ ಕಳ್ಳನು ಸೈನಿಕರನ್ನು ಕಂಡ ಕೂಡಲೇ ಏಳಲು ಪ್ರಯತ್ನಿಸಿದನು. ಆದರೆ ಅವರು ಅವನನ್ನು ಹಿಡಿದು ಕೈಗಳನ್ನು ಕಟ್ಟಿ ಹೊರಗೆ ಕರತಂದು, ಅವನ ಶರೀರ ಶೋಧನೆಯನ್ನು ಮಾಡಿದರು. ಆಗ ಅವರ ಸೈನ್ಯಾಧಿಪತಿಯ ಮೋರೆಯಲ್ಲಿ ನಿರಾಶೆಯೇ ಮೊಳೆಯಿತು. ದಾರಿಗನು ಅವನೇಕೆ ನಿರಾಶನಾದನೆಂದು ಕೇಳಲು, ಕಳ್ಳನು ರತ್ನವೊಂದನ್ನು ಅಪಹರಿಸಿದನೆಂದೂ, ಅದು ಅವನಲ್ಲಿ ಕಾಣಬರಲಿಲ್ಲವೆಂದೂ ಹೇಳಿದನು. ದಾರಿಗನು ಸ್ವಲ್ಪ ಹೆಚ್ಚು ಆಲೋಚಿಸಿ ಕಳ್ಳನನ್ನು ನೋಡಿ ಅರಮನೆಯಿಂದ ಅಪಹರಿಸಿದ ರತ್ನವು ಎಲ್ಲಿದೆ? ಎಂದು ಕೇಳಿದನು. ಆ ಕಳ್ಳನು—ಮೋರೆಯನ್ನು ಸಪ್ಪಗೆ ಮಾಡಿ, ಅತಿ ವಿನಯ, ಭಯಭಕ್ತಿಯಿಂದ, "ಎಲೈ ತಂದೆಯೇ, ನನಗಾವ ರತ್ನವೂ ಗೊತ್ತಿಲ್ಲ. ನಾನು ನಿರಪರಾಧಿ, ನನ್ನನ್ನೇಕೆ ಬಂಧಿಸಿ ಕಾಡುತ್ತೀರಿ? ನಾನು ಕಾರಣಾಂತರದಿಂದ

ಇನ್ನೊಂದೂರಿಗೆ ಹೋಗಲು ಹೊರಟು, ನಿನ್ನೆ ಸಾಯಂಕಾಲವಾಗುವಾಗ ಅರಣ್ಯದಲ್ಲಿಯೇ ತಂಗಬೇಕಾಯಿತು. ನಾನೊಂದು ಮರದಡಿಯಲ್ಲಿ ಮಲಗಿ ನಿದ್ದೆ ಹೋಗುತ್ತಿದ್ದಾಗ ಸೈನಿಕರ ಆರ್ಭಟೆಯು ಕೇಳಿಸಿತು. ನಾನೆಚ್ಚತ್ತು ಸುತ್ತು ಮುತ್ತು ನೋಡುತ್ತಿದ್ದಾಗ ಸೈನಿಕರು ಬಾಣವನ್ನೆಸೆಯುತ್ತಿದ್ದರು. ಅವರು ಬೇಟೆಯಾಡಲು ಬಂದಿರಬಹುದೆಂದೂ ನನ್ನನ್ನು ಮೃಗವೆಂದೆಣಿಸಿ ಬೇಟೆಯಾಡಿ ಘಾತಿಸಬಹುದೆಂದೆಣಿಸಿ ಅಲ್ಲಿಂದೆದ್ದು ಓಡಿದೆನು. ಅಪಾಯದಿಂದ ತಪ್ಪಿಸಿಕೊಳ್ಳಲು ಓಡುತ್ತಿದ್ದವನನ್ನು ಬಾಣದಿಂದ ಗಾಯಪಡಿಸಿದರು. ಆತ್ಮರಕ್ಷಣೆಗಾಗಿ ನಾನಿಲ್ಲಿ ಬಂದು ವಿಶ್ರಮಿಸುತ್ತಿದ್ದೆ. ನಿರಪರಾಧಿಯಾದ ನನ್ನಲ್ಲಿ ದೋಷವನ್ನೇಕೆಣಿಸುತ್ತೀರಿ?' ಎಂದು ಹೇಳಿದನು.

ಈ ಮಾತುಗಳಿಂದ ಸೈನಿಕರ ಸಂಶಯವು ದೂರವಾಯಿತು. ಅವರು ಕಳ್ಳನ ಹೇಳಿಕೆಯನ್ನೊಪ್ಪಿಕೊಂಡು ಅವನನ್ನು ಬಿಡಲುದ್ಯುಕ್ತರಾದರು. ದಾರಿಗನು ಮಾತ್ರ ನಂಬಲಿಲ್ಲ. ಅವನು ಕಳ್ಳನ ಹತ್ತಿರ ಹೋಗಿ ಅವನ ಮೈ ಕೈ ಕಾಲುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದನು. ಅವನ ಗಾಯಕ್ಕೆ ಸುತ್ತಿದ್ದ ಬಟ್ಟೆಯನ್ನು ಪರಿಶೀಲಿಸಿ ನೋಡಿದನು. ಆ ಮೇಲೆ ಪಕ್ಕದ ಕಾಡಿನಿಂದ ಒಂದು ಮೂಲಿಕೆಯನ್ನು ತಂದು ಅದರ ರಸವನ್ನು ಗಾಯಕ್ಕೆ ಎರೆಯಲು ಅದು ಕೂಡಲೇ ಗುಣವಾಯಿತು. ಕಳ್ಳನ ಸಂತೋಷವನ್ನು ಹೇಳತೀರದು. ಅವನು ದಾರಿಗನ ಕಾಲ ಮೇಲೆ ಬಿದ್ದು ನಮಸ್ಕರಿಸಿದನು. ಬಾಯ್ತುಂಬಾ ಹೊಗಳಿದನು. "ನೀನು ನನ್ನ ದೇವರು, ನನ್ನನ್ನು ಕಾಪಾಡು" ಎಂದನು. ಸೈನಿಕರು ಇದನ್ನೆಲ್ಲಾ ನೋಡಿ ತಮ್ಮ ಕಣ್ಣನ್ನೇ ನಂಬದಾದರು ಅವರ ಸೈನ್ಯಾಧಿಪತಿಯು ಆ ದಾರಿಗನಿಗೆ ಆ ಕಳ್ಳನ ಪರಿಚಯವಿತ್ತೋ ಎಂದು ಕೇಳಿದನು. "ದಾರಿಗನು, ಇವನು ನಿಮಗೆಷ್ಟು ಪರಿಚಿತನೋ ಅಷ್ಟೇ ನನಗೂ ಪರಿಚಿತನು." ನಾನು ಇವನನ್ನು ಕಂಡದ್ದು ಇದೇ ಮೊದಲು. ಆದರೆ ಇವನ ಚರಿತ್ರೆಯನ್ನು ಹೇಳಬಹುದು.

" ಈ ಮನುಷ್ಯ ಜಾತಿಯಲ್ಲಿ ಕುಂಬಾರ. ಅರಮನೆಗೆ ಮಡಕೆಗಳನ್ನು ಒಯ್ಯುತ್ತಿದ್ದು ಗುಪ್ತಹಾದಿಗಳನ್ನೆಲ್ಲಾ ಗೊತ್ತು ಮಾಡಿಕೊಂಡಿದ್ದನು. ನಿನ್ನೆ ರಾತ್ರಿ ಕಳ್ಳಗಂಡಿಗಾಗಿ ಅರಮನೆಯ ಹೂದೋಟವನ್ನು ಹೊಕ್ಕು ಒಂದು ಅಶೋಕವೃಕ್ಷವನ್ನೇರಿ ಕುಳಿತು, ಜನ ಸುಳಿವು ನಿಂತ ನಂತರ, ಅರಮನೆಯ

ಸೇವಕರ ಮನೆಗಾಗಿ ಅರಮನೆಯನ್ನು ಪ್ರವೇಶಿಸಿದನು. ಅನಂತರ ಉಪ್ಪರಿಗೆಯಲ್ಲಿ ರಾಣಿಯರ ಒಡವೆಗಳನ್ನಿಡುವ ಕೋಣೆಗೆ ಹೋದನು. ಆ ಕೋಣೆಯಲ್ಲಿ ಜಿಂಕೆಯ ಚರ್ಮಗಳನ್ನು ನೆಲದ ಮೇಲೆ ಹಾಸಿದ್ದರು. ಇವನು ಅಮೂಲ್ಯವಾದ ರತ್ನವೊಂದನ್ನೆತ್ತಿಕೊಂಡು ಉಪ್ಪರಿಗೆಯ ಗವಾಕ್ಷವನ್ನು ತೆರೆದು ಒಂದು ಹೂ ಬಳ್ಳಿಯನ್ನು ಹಿಡಿದು ಕೆಳಗಿಳಿಯುತ್ತಿರಲು ಅದು ಕಡಿದುಹೋಯಿತು. ಇವನು ನೆಲದ ಮೇಲೆ ಬಿದ್ದುಬಿಟ್ಟನು. ಬಿದ್ದ ರಭಸಕ್ಕೆ ಇವನು ಮೂರ್ಛೆಹೊಂದಿದನು. ಸ್ವಲ್ಪ ಸಮಯದಲ್ಲಿ ಅರಮನೆಯಲ್ಲಿಯೇ ಗದ್ದಲವೆಂದರೆ ಗದ್ದಲ! ಇವನಿಗಾಗ ಮೂರ್ಛೆ ತಿಳಿಯಿತು. ಕೂಡಲೇ ಇವನೆದ್ದು ಪ್ರಾಗಾರವನ್ನೇರಿ ಪಕ್ಕದ ಅರಣ್ಯದ ಕಡೆಗೆ ಓಡಿದನು.

ಅಷ್ಟರಲ್ಲಿ ಚಂದ್ರೋದಯವಾಯಿತು. ನೀವು ಕಳ್ಳನನ್ನು ಹುಡುಕಲಾರಂಭಿಸಿದಿರಿ, ಕಾಡಿನಲ್ಲಿ ಇವನು ನಿಮ್ಮ ಕಣ್ಣಿಗೆ ಬಿದ್ದನು. ನೀವು ಅವನ ಮೇಲೆ ಬಾಣದ ಮಳೆಯನ್ನು ಸುರಿಸಿದರೂ ಒಂದು ಮಾತ್ರ ಇವನ ತೊಡೆಗೆ ತಾಗಿತು. ಆಗ ಇವನು ಅಲ್ಲಿಂದ ಪೊದರುಗಳ ಮರೆಯಲ್ಲಿ ಅವಿತು, ನಿಮಗೆ ಕಣ್ಮರೆಯಾದನು. ನೀವು ಮುಂದೆ ಹೋದ ಮೇಲೆ ಇವನು ಪಂಚೆಯನ್ನು ಹರಿದು, ಚೂರು ಬಟ್ಟೆಯನ್ನು ತೆಗೆದು ಅದನ್ನು ಗಾಯಕ್ಕೆ ಬಿಗಿದು ಅರಣ್ಯದ ದಾರಿ ಹಿಡಿದು ಓಡಿ ಹೋದನು. ಈ ದಿನ ಮುಂಜಾನೆ ಅರಣ್ಯದಿಂದ ಹೊರಬಿದ್ದು ಈ ರಾಜರಸ್ತೆಗೆ ಕಾಲಿಟ್ಟು, ಮುಂದೆ ಬರಲು ಆ ಹಾರುವನನ್ನು ಕಂಡು ಬೆಚ್ಚಿದನು. ಅನಂತರ ಅವನು ಧ್ಯಾನಮಗ್ನನಾಗಿದ್ದನೆಂದು ತಿಳಿದು ಆ ಮನೆಯನ್ನು ದಾಟಿಹೋದನು. ಅಷ್ಟರಲ್ಲಿ ಗಾಯಕ್ಕೆ ಸುತ್ತಿದ್ದ ಬಟ್ಟೆಯು ಸಡಿಲವಾಗಿ ಹೋಗಲು ಅದನ್ನು ಬಿಚ್ಚಿ ತಿರುಗಿ ಸರಿಯಾಗಿ ಕಟ್ಟಿದನು. ಆದರೆ ರಕ್ತಸ್ರಾವದಿಂದ ಬಲಗುಂದಿದವನಾಗಿದ್ದುದರಿಂದ ಮುಂದೆ ಹೋಗಲು ಸಾಧ್ಯವಾಗದೆ ಈ ಹಾಳು ಮನೆಯಲ್ಲಿ ಅಡಗಿಕೊಂಡನು. ತನ್ನ ಕೈಯಲ್ಲಿದ್ದ ರತ್ನವನ್ನು ಆವೆ ಮಣ್ಣಿನ ಹಳ್ಳದಲ್ಲಿ ಹೂತಿಟ್ಟಿದ್ದಾನೆ" — ಎಂದನು.

ಈ ವೃತ್ತಾಂತವನ್ನು ಕೇಳಿ ಕಳ್ಳನ ಮುಖ ಬೆಳ್ಳಗಾಯಿತು. ಸೈನಿಕರ ಮೋರೆಯಲ್ಲಿ ಸಂತೋಷವು ತೋರಿತು. ಕಳ್ಳನು ಅಸಹ್ಯತೆಯನ್ನು ತೋರಲು ಆ ದಾರಿಗನಿಗೆ "ನೀನು ಜೋಯಿಸನೇ ಸರಿ" ಎಂದು ಬಿಟ್ಟನು. ದಾರಿಗನು ಮುಗುಳ್ನಗೆಯನ್ನು ತೋರಿ ಗಂಭೀರವಾಣಿಯಿಂದ "ಈಗ ಆ

ರತ್ನವನ್ನು ಅಡಗಿಸಿಟ್ಟಿರುವ ಸ್ಥಳವನ್ನು ತೋರಿಸು, ಇಲ್ಲವಾದರೆ ಪರಿಣಾಮವು ಒಳ್ಳೆಯದಾಗದು” ಎಂದನು. ಕಳ್ಳನು ಹಿಂದುಮುಂದು ನೋಡಿದನು; ತಪ್ಪಿಸಿಕೊಳ್ಳುವ ಹಾದಿಯನ್ನು ಕಾಣದಾದನು. ಸೈನಿಕರು ಶಸ್ತ್ರಸಜ್ಜಿತರಾಗಿ ನಿಂತಿದ್ದರು. ಕಳ್ಳನು ಅವರನ್ನು ಮನೆಯ ಹಿಂಗಡೆಯಿದ್ದ ಒಂದು ಆನೆ ಮಣ್ಣಿನ ಹಳ್ಳಕ್ಕೆ ಕರೆದೊಯ್ದು ಅಲ್ಲಿದ್ದ ಒಂದು ಕಲ್ಲನ್ನೆತ್ತಿದನು. ಕೂಡಲೇ ಬಾಲಸೂರ್ಯನ ಪ್ರಕಾಶವನ್ನು ಧಿಕ್ಕರಿಸುತ್ತಿದ್ದ ರತ್ನವು ತೋರಿತು. ಆ ರತ್ನವನ್ನೆತ್ತಿ ಆ ದಾರಿಗನು ಸೈನ್ಯಾಧಿಪತಿಗೆ ಕೊಟ್ಟನು. ಅನಂತರ ಅವರೆಲ್ಲರೂ ಹಾರುವನ ಮನೆಗೆ ಬಂದರು. ಆ ಹಾರುವನು ಸೈನ್ಯಾಧಿಪತಿಯನ್ನು ಕುರಿತು “ಕಳ್ಳನು ಸಿಕ್ಕಿದನೇ” ಎಂದು ಕೇಳಿದನು. “ಅಹುದು ಈ ತರುಣನ ಸಹಾಯದಿಂದ ಕಳ್ಳನನ್ನು ಹಿಡಿಯಲು ಸಾಧ್ಯವಾಯಿತು,” ಎಂದು ಸೈನ್ಯಾಧಿಪತಿಯು ಹೇಳಿದನು. ಹಾರುವನಿಗೆ ಆಶ್ಚರ್ಯವಾಯಿತು. ಆಗ ಆ ಸೈನ್ಯಾಧಿಪತಿಯು ದಾರಿಗನ ಹೆಸರನ್ನು ಕೇಳಿದನು. “ನನ್ನನ್ನು ಜನಮಿತ್ರನೆಂದು ಕರೆಯುವರು” ಎಂದು ಹೇಳಿದನು. ಸೈನಿಕರು ಜನಮಿತ್ರನಿಗೂ ಹಾರುವನಿಗೂ ನಮಸ್ಕರಿಸಿ ಕಳ್ಳನೊಡನೆ, ಬಂದ ದಾರಿಯಲ್ಲಿ ಹಿಂದೆ ಹೋದರು.

ಆದರೆ ಹಾರುವನಿಗೆ ಕಳ್ಳನನ್ನು ಹಿಡಿಯಲು ಹೋದಾಗ ನಡೆದ ವಿಷಯಗಳನ್ನು ಕೇಳಲು ಆತುರವುಂಟಾಯಿತು. ಜನಮಿತ್ರನನ್ನು ಪಕ್ಕದಲ್ಲಿಯೇ ಕುಳ್ಳಿರಿಸಿ ಹಾಳುಮನೆಯಲ್ಲಿ ನಡೆದ ವಿಷಯಗಳನ್ನರುಹಬೇಕೆಂದು ಕೇಳಿಕೊಂಡನು. ಆ ಕ್ಷತ್ರಿಯ ಕುಮಾರನು ನಡೆದ ವಿಷಯಗಳನ್ನೆಲ್ಲಾ ವಿವರಿಸಿದನು. ಆಗ ಹಾರುವನಿಗೆ ಅವನ ಮೇಲೆ ಅಭಿಮಾನವುಂಟಾಯಿತು. ತನ್ನ ಹೆಮ್ಮೆಯ ಕೋಡು ಮುರಿಯಿತೆಂದು ಮನಸ್ಸಿನಲ್ಲೇ ಎಣಿಸಿದನು. ಆ ಮೇಲೆ ಬ್ರಾಹ್ಮಣನು ಆ ರಾತ್ರಿಯಲ್ಲಿ ನಡೆದ ವಿಷಯಗಳೆಲ್ಲವೂ ಜನಮಿತ್ರನಿಗೆ ಹೇಗೆ ಗೊತ್ತಾಯಿತೆಂದು ತಿಳಿಯಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಂಡನು.

ಆ ಕ್ಷತ್ರಿಯ ಕುಮಾರನು:—‘ ಪರಿಶೋಧನಾ ಜ್ಞಾನಾನುಭವದಿಂದ ಅವೆಲ್ಲವನ್ನೂ ತಿಳಿದೆನು. ಸೂಕ್ಷ್ಮವಾಗಿ ಪರಿಶೋಧಿಸುವುದೇ ನನ್ನ

ಪದ್ಧತಿ. ಈ ರಸ್ತೆಯೇ ಒಂದು ಜ್ಞಾನಭಂಡಾರ. ಪರಿಶೋಧನೆಯಿಂದ, ಪ್ರತ್ಯಕ್ಷಾನುಭವದಿಂದ ಜ್ಞಾನವು ಬಯಲಾಗುತ್ತದೆ. ಜ್ಞಾನಸಂಗ್ರಹಕ್ಕೆ ಹೊರೆ ಹೊರೆ ಪುಸ್ತಕಗಳನ್ನು ಓದಬೇಕಾಗಿಲ್ಲ. ಕಣ್ಣುಕಿವಿಗಳು ತೆರೆದು ಅನುಭವ ಪಡೆದರೆ ಸಾಕು. ಆ ರಸ್ತೆಯನ್ನು ಸೂಕ್ಷ್ಮವಾಗಿ ನಾನು ಪರಿಶೀಲನೆ ಮಾಡಿದೆನು; ಮೊದಲು ಸೌದೆ ಹೊರೆಯನ್ನು ಹೊತ್ತುಕೊಂಡು ಹೋಗಿದ್ದ ಮನುಷ್ಯನ ಹೆಜ್ಜೆಗಳನ್ನು ಕಂಡೆನು. ಹೆಜ್ಜೆಯ ಹಿಂಭಾಗವು ಆಳವಾಗಿತ್ತು. ಆದ್ದರಿಂದ ಅವನ ಹಿಮ್ಮಡಿಯನ್ನು ಒತ್ತಿ ನಡೆದಿದ್ದನು ಎಂದು ನಿಶ್ಚಯಿಸಿದೆ. ಹಿಮ್ಮಡಿಯನ್ನು ಸ್ಥೂಲ ಪ್ರಕೃತಿಯ ಮನುಷ್ಯರು ಒತ್ತುವುದಿಲ್ಲ, ಆದ್ದರಿಂದ ಅವನು ತೆಳ್ಳಗಿರಬೇಕೆಂದು ನಿರ್ಧರಿಸಿದೆನು. ಆವನು ನಡೆಯುವಾಗ ಬದಿಯಿಂದ ಬದಿಗೆ ವಾಲುತ್ತಾ ನಡೆದ ಹೆಜ್ಜೆಗಳು ತೋರಿದುವು. ತಾನು ಹೊತ್ತ ಹೊರೆಯು ಭಾರವಾಗಿದ್ದುದರಿಂದ ಹಾಗೆ ಮಾಡಬೇಕಾಯಿತು. ಅವನು ಹೋದ ದಾರಿಯಲ್ಲಿ ಮರದ ತೊಗಟೆಯ ಪುಡಿಯು ಹರಡಿತ್ತು. ಆದ್ದರಿಂದ ಆವನು ಹೊತ್ತಿದ್ದ ಹೊರೆಯು ಸೌದೆಯೆಂದೇ ನಿಶ್ಚಯವಾಯಿತು", ಎಂದನು.

ಬ್ರಾಹ್ಮಣ:—"ಆ ಮೇಲೆ ಆನೆಯು ಬಂತೆಂದು ನಿನಗೆ ಹೇಗೆ ಗೊತ್ತಾಯಿತು?"

ಜನಮಿತ್ರ:—"ಆ ಮನುಷ್ಯನ ಹೆಜ್ಜೆಯ ಮೇಲೆ ಆನೆಯ ಹೆಜ್ಜೆಗಳು ತೋರಿದುವು."

ಬ್ರಾಹ್ಮಣ:—"ಹಾಗಾದರೆ ಆ ಆನೆ ಹೆಣ್ಣಾನೆಯೆಂದು ಹೇಗೆ ಗೊತ್ತಾಯಿತು?"

ಜನಮಿತ್ರ:—ಗಂಡಾನೆಯ ಹೆಜ್ಜೆಯು ವೃತ್ತಾಕಾರವಾಗಿರುತ್ತದೆ. ಹೆಣ್ಣಾನೆಯ ಪಾದವು ರವಷ್ಟು ಉದ್ದವಾಗಿರುವುದು. ಈ ಆನೆಯ ಹೆಜ್ಜೆ ರವಷ್ಟು ಉದ್ದವಾಗಿತ್ತು.

ಬ್ರಾಹ್ಮಣ:—"ಆನೆಯ ಎಡಗಾಲು ಕುಂಟಾಗಿತ್ತೆಂದೂ ಬಲಗಣ್ಣು ಕುರುಡಾಗಿತ್ತೆಂದೂ ಹೇಗೆ ತಿಳಿಯಿತು?"

ಜನಮಿತ್ರ:—"ಆನೆಯು ಎಡಗಾಲಿನಿಂದ ಹೆಜ್ಜೆಯನ್ನು ತೆಳ್ಳಗೆ ಒತ್ತಿತ್ತು. ಆದ್ದರಿಂದ ಆ ಕಾಲಿನಲ್ಲಿ ಗಾಯವಿದ್ದಿರಬೇಕು. ಅದು ಕುಂಟು

ಗಾಲು ಆಗಿರಬೇಕು. ನಡೆದು ಹೋಗುತ್ತಾ ಅದು ಹುಲ್ಲನ್ನು ತಿನ್ನುತ್ತಾ ಹೋಗಿತ್ತು. ಅದು ಎಡಬದಿಯಲ್ಲಿ ಮಾತ್ರ ಹುಲ್ಲನ್ನೂ ಮರದೆಲೆಗಳನ್ನೂ ತಿಂದಿದೆ. ಹೆಂಗುಸು ಅದನ್ನು ಬಲಗಡೆಗೆ ನಡೆಯಿಸಿಕೊಂಡು ಹೋದಾಗ ಅದು ಹುಲ್ಲನ್ನು ಕತ್ತರಿಸಿರುವುದಿಲ್ಲ. ಕೊಂಬೆಗಳನ್ನು ಮುರಿದಿರುವುದಿಲ್ಲ ಬಲಗಣ್ಣು ಕುರುಡಾಗಿದ್ದರಿಂದ ಹಾಗೆ ಮಾಡಿರಬೇಕು."

ಬ್ರಾಹ್ಮಣ:—ಇದಷ್ಟು ವಿಶೇಷವಲ್ಲ. ಆ ಆನೆಯನ್ನು ನಡೆಯಿಸಿಗೊಂಡು ಹೋಗುತ್ತಿದ್ದ ವ್ಯಕ್ತಿ ಹೆಂಗುಸೆಂದೂ, ಗಾಡಿಯು ಆನೆ ಹೋದ ನಂತರ ಬಂತೆಂದೂ ಗಾಡಿ ಹೊಡೆಯುವವನು ಆತುರದಿಂದ ಗಾಡಿ ಹೊಡೆಯುತ್ತಿದ್ದನೆಂದೂ, ನಾಯಿಯು ಬೊಗಳುತ್ತಾ ಎತ್ತುಗಳನ್ನು ಓಡಿಸುತ್ತಿತ್ತೆಂದೂ ಹೇಗೆ ನಿರ್ಧರಿಸಿದೆ?"

ಜನಮಿತ್ರ:—"ಹೆಂಗುಸರ ಹೆಜ್ಜೆಗೂ ಗಂಡಸರ ಹೆಜ್ಜೆಗೂ ವ್ಯತ್ಯಾಸ ಇದೆ. ಹೆಂಗಸಿನ ಹೆಜ್ಜೆಯು ಚಿಕ್ಕದು. ಈ ಹೆಜ್ಜೆಗಳು ಚಿಕ್ಕವಾಗಿದ್ದುವು. ಆದುದರಿಂದ ಆ ಹೆಜ್ಜೆಗಳು ಹೆಂಗಸಿನದೇ ಆಗಿರಬೇಕೆಂದು ನಿಶ್ಚಯಿಸಿದೆ. ಗಾಡಿಯ ಚಕ್ರಗಳು ಆನೆಯ ಹೆಜ್ಜೆಗಳ ಮೇಲೆ ಉರುಳಿದ್ದುವು. ಆದ್ದರಿಂದ ಆನೆಯ ನಂತರ ಗಾಡಿಯು ಬಂತೆಂದೂ ಸ್ಪಷ್ಟವಾಯಿತು. ಎತ್ತುಗಳ ಹೆಜ್ಜೆಗಳು ನಿಧಾನವಾಗಿ ನಡೆದರೆ ಸಮ ದೂರದಲ್ಲಿರುತ್ತವೆ. ಈ ಎತ್ತುಗಳ ಹೆಜ್ಜೆಗಳು ಸಮದೂರದಲ್ಲಿರಲಿಲ್ಲ. ಗಾಡಿಯಾಳು ಚಾಟಿಯಿಂದ ಹೊಡೆಯುವಾಗ ಅವು ನೆಗೆದು ಓಡುತ್ತವೆ, ಹಾರಿ ಹಾರಿ ಹೋಗುವಾಗ ಎತ್ತುಗಳ ಹೆಜ್ಜೆಗಳು ಆಳವಾಗಿ ಒತ್ತೊತ್ತಾಗಿ ಇರುವುವು. ಈ ಎತ್ತುಗಳ ಹೆಜ್ಜೆ ಅದೇ ರೀತಿಯಲ್ಲಿದ್ದುವು. ಆದ್ದರಿಂದ ಗಾಡಿಯಾಳಿಗೆ ಅವಸರವಾಗಿ, ಎತ್ತುಗಳನ್ನು ಓಡಿಸಲು ಅವನು ಚಾಟಿಯಿಂದ ಹೊಡೆಯುತ್ತಿದ್ದನೆಂದು ತಿಳಿದು ಬಂತು. ನಾಯಿಯೊಂದು ಸುತ್ತು ಮುತ್ತು ನೆಗೆದಾಡುತ್ತಾ ಹೋದಂತೆ ಆದರ ಹೆಜ್ಜೆಗಳಿಂದ ಗೊತ್ತಾಯಿತು. ಹೆಜ್ಜೆಗಳಿಂದಲೇ ಅದು ನಾಯಿಯೆಂದೂ, ಅದು ಅತ್ತಿತ್ತ ನೆಗೆಯುತ್ತಿತ್ತೆಂದೂ ಕಂಡುಹಿಡಿದೆನು. ಅದು ನೆಗೆಯುತ್ತಿದ್ದುದರಿಂದ ಎತ್ತುಗಳು ಬೆದರಿರಬೇಕು. ಈ ಹೆಜ್ಜೆಗಳನ್ನೆಲ್ಲಾ ನೋಡಿ ತಾಳ್ಮೆಯಿಲ್ಲದ ಗಾಡಿಯಾಳು ಎತ್ತುಗಳನ್ನು ವೇಗವಾಗಿ ಓಡಿಸಲು ಚಾಟಿಯಿಂದ ಹೊಡೆಯುತ್ತಾ, ನಾಯಿಯನ್ನು "ಚೂಗೂಡಿ"

ಬೊಗಳಿಸುತ್ತಿದ್ದುದರ, ಒಂದು ದೃಶ್ಯವು ನನ್ನ ಕಣ್ಣಿಗೆ ಗೋಚರವಾಯಿತು."

ಆ ಮೇಲೆ ಆ ಹುಡುಗನು...."ಇದೆಲ್ಲಾ ಸಾಮಾನ್ಯವಾದ್ದೆಂದು ತೋರುತ್ತದೆ. ಆದರೆ ಆ ಕಳ್ಳನ ವಿಷಯ ಇಷ್ಟೆಲ್ಲಾ ಹೇಗೆ ಗೊತ್ತಾಯಿತು? ಅವನು ಒಂದು ಮರದಲ್ಲಿ ಅವಿತುಕೊಂಡಿದ್ದನೆಂದೂ, ಸೇವಕರ ಮನೆಗಾಗಿ ಅರಮನೆಯನ್ನು ಪ್ರವೇಶಿಸಿದನೆಂದೂ, ಜಿಂಕೆ ತೊಗಲು ಹಾಸಿದ್ದ ಕೋಣೆಯೊಳಗೆ ಹೋಗಿದ್ದನೆಂದೂ, ನಾನು ಧ್ಯಾನ ಮಗ್ನನಾಗಿದ್ದಾಗ ಇಲ್ಲಿ ಬಂದು ನೋಡಿದನೆಂದೂ, ರತ್ನವನ್ನು ಅದೇ ಮಣ್ಣಿನ ಹೊಂಡದಲ್ಲಿ ಅಡಗಿಸಿದ್ದನೆಂದೂ, ನಿನಗೆ ಹೇಗೆ ನಿಶ್ಚಯವಾಯಿತು." ಎಂದು ಕೇಳಲು, ಜನಮಿತ್ರನು ಸಮಾಧಾನೋಕ್ತಿಯಿಂದ ಹೀಗೆಂದನು—

"ನಾನು ಮೊತ್ತ ಮೊದಲು ಕಾಡಿನಿಂದ ಹೊರ ಬಿದ್ದ ಹೆಜ್ಜೆಗಳನ್ನು ಪರಿಶೀಲಿಸಿದೆನು; ಕಳ್ಳನು ಗಾಡಿಯ ಚಕ್ರದ ಗುರುತಿನ ಮೇಲೆ ತುದಿಗಾಲಿನಲ್ಲಿ ನಡೆದಿದ್ದನು. ಆ ಕಾರಣ ಗಾಡಿ ಹೋದನಂತರ ಕಳ್ಳನು ಬಂದುದಾಗಿರಬೇಕು. ಅವನು ಮೂರು ಸಾರಿ ಮುಂದೆ ಹೋಗಿ ಹಿಂದೆ ಬಂದು ಒಂದು ಸ್ಥಳದಲ್ಲಿ ನಿಂತು ಕೊಂಡಿದ್ದಂತೆ ತೋರಿತು. ಅವನೆಲ್ಲಿ ನಿಂತಿದ್ದನೋ, ಅಲ್ಲಿ ಅವನ ಹೆಜ್ಜೆಗಳು ಚೆನ್ನಾಗಿ ಮೂಡಿದ್ದುವು. ಆದ್ದರಿಂದ ನೀನು ಧ್ಯಾನ ಮಗ್ನನಾಗಿ ಕಣ್ಣು ಮುಚ್ಚಿಕೊಂಡಿದ್ದುದನ್ನು ಅವನು ನೋಡಿ ಅನಂತರ ಓಡಿಹೋದನು. ಅವನು ಓಡಿ ಹೋದಾಗ ಅವನ ಹೆಜ್ಜೆಯ ಮುಂಭಾಗ ಮಾತ್ರ ಒತ್ತಿತ್ತು. ಹೆಜ್ಜೆಯ ಮುಂಭಾಗ ಮಾತ್ರ ಕಾಣುವುದು ಅಪರಾಧಿಗಳು ಓಡುವಾಗ. ಆದ್ದರಿಂದ ಅವನು ಅಪರಾಧಿ—ಇಲ್ಲವೇ ಕಳ್ಳನೆಂದು ನಿಶ್ಚಯಿಸಬೇಕಾಯಿತು. ನೀನು ಪ್ರಾರ್ಥನೆ ಮಾಡುತ್ತಿದ್ದಾಗ ನಿನ್ನ ಕಣ್ಣುಗಳು ತೆರೆದಿರಲಾರವು.

"ಕಳ್ಳನನ್ನು ಕಂಡ ಕೂಡಲೇ ಅವನ ಕೂದಲು, ಶರೀರ, ಕೈಕಾಲುಗಳು, ಕೈ ಕಾಲ್ಬೆರಳುಗಳು, ಇತ್ಯಾದಿಗಳನ್ನು ಪರೀಕ್ಷಿಸಿದೆನು. ಅವನ ಗಾಯಕ್ಕೆ ಬಿಗಿದ ಬಟ್ಟೆಯ ಚೂರನ್ನು ಚೆನ್ನಾಗಿ ಪರಿಶೀಲಿಸಿದೆನು. ಅವನ ಎಡ ಅಂಗೈ ಒರಟಾಗಿಯೂ, ಬಲ ಅಂಗೈ ನಯವಾಗಿಯೂ ತೋರಿದುವು. ಕುಂಬಾರರು ಚಕ್ರವನ್ನು ಎಡಗೈಯಿಂದ ತಿರುಗಿಸುತ್ತಾರೆ. ಚಕ್ರದ ಸ್ಪರ್ಶ

ದಿಂದ ಅಂಗೈ ಚರ್ಮವು ದೊರಗಾಗುತ್ತದೆ. ಆ ಕಾರಣ ಅವನು ಕುಂಬಾರನೆಂದು ನಿಶ್ಚಯಿಸಿದೆ.

“ಅವನ ಕೂದಲಿನಲ್ಲಿ ಅಶೋಕ ವೃಕ್ಷದ ಬೀಜಗಳು ಒತ್ತಿಕೊಂಡಿದ್ದುವು. ಅಶೋಕ ವೃಕ್ಷಗಳು ಅರಮನೆಯ ತೋಟದಲ್ಲಿ ಮಾತ್ರ ಇರುವುವು. ಆ ಬೀಜಗಳು ತಲೆಯ ಮೇಲೆ ಹರಡಿಕೊಂಡಿರದೆ ಒತ್ತಲ್ಪಟ್ಟದ್ದುವು. ಹೀಗಾಗಲು ಅವನು ಮರವನ್ನು ಹತ್ತಿದ್ದರಿಂದಾಗಿರಬೇಕು, ಅಲ್ಲಿಂದ ಗೋಡೆಯಲ್ಲೇರಿರಬೇಕು.

ಹೆಬ್ಬಾಗಿಲಿನಲ್ಲಿ ಕಾವಲುಗಾರರಿರುತ್ತಾರೆ. ಆ ಬಾಗಿಲಿನಿಂದ ಅರಮನೆಗೆ ಹೋಗಲು ಅವನಿಗೆ ಧೈರ್ಯ ಬಾರದು. ಆದ್ದರಿಂದ ಅವನು ಗೋಡೆಯನ್ನು ಹತ್ತಿರಬೇಕೆಂದು ಊಹಿಸಬೇಕಾಯಿತು. ಅವನ ಕಾಲ್ಬೆರಳುಗಳಲ್ಲಿ ಕೆಮ್ಮಣ್ಣನ್ನು ಕಂಡೆನು. ಕೆಮ್ಮಣ್ಣು ಸೇವಕರ ಮನೆಯ ಸಮೀಪ ಮಾತ್ರ ಹರಡಿದೆ. ಆದ್ದರಿಂದ ಅವನು ಸೇವಕರ ಮನೆಗಾಗಿ ಅರಮನೆಯ ಕಡೆ ಹೋಗಿರಬೇಕು: ಇವನು ಕುಂಬಾರನಾದ್ದರಿಂದ ಅರಮನೆಯ ಮುಖ್ಯ ಬಾಣಸಿಗನೊಡನೆ ಮಣ್ಣಿನ ಮಡಕೆಗಳ ಮಾರಾಟದ ವ್ಯವಹಾರವಿತ್ತೆಂದು ನನಗೆ ಗೊತ್ತಾಯಿತು. ಆದ್ದರಿಂದ ಅವನು ನಿತ್ಯವೂ ಅರಮನೆಗೆ ಹೋಗುತ್ತಾ ಬರುತ್ತಾ ಇದ್ದಿರಬೇಕು. ಸೇವಕರ ಸಂಗಡ ಪರಿಚಯದಿಂದ ಮಾತಾಡುತ್ತಾ ನವರತ್ನಗಳನ್ನಿಡುವ ಸ್ಥಾನವನ್ನು ಕೇಳಿ ತಿಳಿದುಕೊಂಡಿರಬೇಕು. ಅಲ್ಲದೆ ಅರಮನೆಗೆ ಹೋಗಲು ತಕ್ಕ ದಾರಿಯನ್ನು ಕಂಡು ಹಿಡಿದಿರಬೇಕು.

“ಕುಂಬಾರನು ಅರಮನೆಯನ್ನು ಹೊಕ್ಕಿದ್ದಾಗ ಉದ್ರೇಕದಿಂದ ಅವನ ಮೈಯಲ್ಲಿ ಬೆವರು ಸುರಿಯುತ್ತಿತ್ತು. ಜಿಂಕೆಯ ರೋಮಗಳು ಬೆವರಿದ ಮೈಗೆ ಅಂಟಿಕೊಂಡವು. ಅವನ ಶರೀರದಲ್ಲಿಯೂ ಕಾಲ್ಬೆರಳುಗಳ ಮೇಲೆಯೂ ಜಿಂಕೆಯ ರೋಮಗಳಿದ್ದುವು. ಅಲ್ಲದೆ ರೋಮಗಳು ಅವನ ಉಡುಪಿಗೂ, ಗಾಯಕ್ಕೆ ಸುತ್ತಿದ್ದ ಬಟ್ಟೆಗೂ ಅಂಟಿಕೊಂಡಿದ್ದುವು. ಆದ್ದರಿಂದ ಅವನು ಜಿಂಕೆ ಚರ್ಮ ಹಾಸಿದ್ದ ಕೋಣೆಗೆ ಹೋಗಿದ್ದನೆಂದು ಊಹಿಸಬೇಕಾಯಿತು.

“ಅವನ ಕೈಗಳಲ್ಲಿ ಹಸುರು ಮತ್ತು ಕಂದು ಬಣ್ಣದ ಗಾಯಗಳು ಕಂಡು ಬಂದುವು. ಈ ಗಾಯಗಳು ಜಜ್ಜಿದರಿಂದುಂಟಾಗಿರಬೇಕು.

ಅಲ್ಲದೆ ಅವನ ಎಡಗೈಯ ಬೆರಳುಗಳೆರಡೂ, ಬಲಗೈಯ ಬೆರಳೊಂದೂ, ಹಗ್ಗದಿಂದ ಕತ್ತರಿಸಲ್ಪಟ್ಟಂತೆ ತೋರಿದುವು; ಹಗ್ಗ ಕತ್ತರಿಸಿದಂತೆ ಗಾಯ ವಾಗಲೂ ಅವನೊಂದು ಬಳ್ಳಿಯನ್ನು ಹಿಡಿದಿಳಿಯುವಾಗ, ಅದು ಭಾರದಿಂದ ಕಡಿದು ಹೋಗಿ ಬೆರಳುಗಳಲ್ಲಿ ಕಡಿದ ಗಾಯವಾಗಿರಬೇಕು.

"ಅವನ ಎಡ ಮೊಳಕೈ, ಎಡಮಂಡಿ, ಎಡಗಿವಿಗಳಲ್ಲಿ ಚಿಕ್ಕ ಚಿಕ್ಕ ಗಾಯಗಳಿದ್ದುವು. ಅವನು ಬಿದ್ದುದರಿಂದ ಗಾಯಗಳುಂಟಾದುವೆಂದು, ನಿಶ್ಚಯಿಸಿದೆನು. ಅವನ ತಲೆಯಲ್ಲಿ ಕಪ್ಪು ಮಣ್ಣನ್ನು ಕಂಡ ಕೂಡಲೇ ಇನು ಸ್ಪಷ್ಟವಾಯಿತು. ಅವನು ಬಿದ್ದ ಕೂಡಲೇ ಅವನು ನಿಶ್ಚೇಷ್ಟಿತನಾಗಿ ಮಲಗಿದ್ದಿರಬೇಕು. ಮಂಜಿನಿಂದ ಮೆತ್ತಗಾಗಿದ್ದ ಮಣ್ಣು ಕೂದಲಿಗಂಟಿ ಕೊಂಡು ಸ್ವಲ್ಪ ಹೊತ್ತಿನಲ್ಲಿ ಹೆಪ್ಪುಗಟ್ಟಿತು.

"ಅವನ ಮೊಳಕಾಲುಗಳಲ್ಲಿ ಗೀರಿದ ಗಾಯಗಳಿದ್ದುವು. ಅವುಗಳಿಗೆ ಕೆಲವು ಕೂದಲುಗಳು ಅಂಟಿಕೊಂಡಿದ್ದುವು. ಆ ಕೂದಲುಗಳ ಮೇಲೆ ಕೆಮ್ಮಣ್ಣು ಒತ್ತಿ ಗಾಯದೊಳಗೆ ತುಂಬಿದ್ದುದರಿಂದ, ಜಿಂಕೆಯ ಚರ್ಮದ ಕೋಣೆಯನ್ನು ಬಿಟ್ಟು ಬಂದನಂತರ ಈ ಗೀರುಗಳುಂಟಾಗಿದ್ದಿರಬೇಕು. ಅಲ್ಲದೆ ಜಿಂಕೆಯ ರೋಮಗಳು ಗಾಯಕ್ಕೆ ಸೇರಿ ಬಗ್ಗಿ ಕೆಮ್ಮಳಲು ಒತ್ತಿರ ಬೇಕಾದರೆ ಅರಮನೆಯಿಂದ ಅವನು ಹೊರಟಿರಬೇಕು

"ಆಗ ಬಾಗಿಲಲ್ಲಿ ಪಹರೆಯವನಿದ್ದುದರಿಂದ ಅವನು ಗೋಡೆಯನ್ನೇ ರಿಬೇಕೆಂದೂ, ಭಯವುಂಟಾದ್ದರಿಂದ ತ್ವರೆಯಾಗಿ ಏರಿದನೆಂದೂ ತಿಳಿಯ ಬೇಕಾಗಿದೆ.

"ಈ ಕಳ್ಳನು ಮನುಷ್ಯನ ಕಣ್ಣಿಗೆ ಬೀಳಬೇಕಾಗಿದ್ದರೆ ತಿಂಗಳು ಬೆಳಕಿದ್ದಿರಬೇಕು. ಕತ್ತಲೆಯಲ್ಲಿ ಬಾಣ ಹೊಡೆಯುವುದು ಅಸಾಧ್ಯ. ಈ ಮನುಷ್ಯನು ಬಾಣದಿಂದ ಗಾಯಗೊಂಡಿದ್ದನು. ಆ ಕಾರಣ ಅವನು ಗೋಡೆಯನ್ನೇರಿ ಆಚೆಗೆ ದಾಟಿದನಂತರ ಚಂದ್ರೋದಯವಾಯಿತೆಂದು ನನ್ನ ನಿರ್ಧಾರ.

"ಇನ್ನು ಸೈನಿಕರು ಆ ಕಳ್ಳನ ಶರೀರವನ್ನೆಲ್ಲಾ ಶೋಧನೆ ಮಾಡಿದರೂ ರತ್ನವು ಕಾಣಸಿಗಲಿಲ್ಲ. ಆಗ ನನಗೊಂದಾಲೋಚನೆಯು ಹೊಳೆಯಿತು. ಕೆಲವು ದಿನಗಳ ಹಿಂದೆ ನಾನಾ ಪ್ರದೇಶಕ್ಕಾಗಿ ಹೋದಾಗ ಅವೆ ಮಣ್ಣಿನ

ಹೊಂಡಗಳೂ, ಅವುಗಳ ಮುಂಭಾಗದಲ್ಲಿ ಹಾಳು ಬಿದ್ದ ಮನೆಗಳೂ ಕಾಣ ಸಿಕ್ಕಿದವು. ಒಂದಾನೊಂದು ಕಾಲದಲ್ಲಿ ಕುಂಬಾರರು ಅಲ್ಲೇ ಮನೆ ಮಾಡಿ ಕೊಂಡಿದ್ದಿರಬೇಕು. ಒಳ್ಳೆ ಜಿಗಟಾದ ಮಣ್ಣು ದೊರಕದಿರಲು ಕುಂಬಾ ರರು ಊರನ್ನು ಬಿಟ್ಟು ಎಲ್ಲಿಗೋ ಹೋಗಿರಬೇಕು. ಈ ಮನುಷ್ಯನು ಕುಂಬಾರನಾಗಿದ್ದುದರಿಂದ ರತ್ನವನ್ನು ಅಡಗಿಸಿಡಲು ತಕ್ಕ ಸ್ಥಳವು ಆವೆ ಮಣ್ಣಿನ ಹೊಂಡವೇ ಆಗಿರಬೇಕಲ್ಲವೆ? ಕುಂಬಾರನಿಗೆ ಇನ್ನಾವ ಆಲೋ ಚನೆ ಹೊಳೆದೀತು? ಆ ಕಾರಣ ಕಳ್ಳನು ರತ್ನವನ್ನು ಆವೆ ಮಣ್ಣಿನ ಹೊಂಡದಲ್ಲಿ ಅಡಗಿಸಿಟ್ಟಿರಬೇಕೆಂದು ನಿಶ್ಚಯಿಸಿದೆನು."

ಈ ವೃತ್ತಾಂತಗಳನ್ನೆಲ್ಲಾ ಕೇಳಿದ ವಿಪ್ರನು ಆಶ್ಚರ್ಯ ಭರಿತನಾಗಿ ಜನಮಿತ್ರನ ಅಗಾಧವಾದ ಪಾಂಡಿತ್ಯಕ್ಕೆ ಮೆಚ್ಚಿ, ಅವನನ್ನು ತನ್ನ ಸಂಗ ಡವೇ ಇರಬೇಕೆಂದು ಕೇಳಿಕೊಂಡನು. ಆದರೆ ಜನಮಿತ್ರನೊಪ್ಪಲಿಲ್ಲ "ನನಗೆ ಆ ಕಟ್ಟಿಗೆಯನ್ನೊಯ್ಯುತ್ತಿದ್ದ ಮನುಷ್ಯನನ್ನು ನೋಡಬೇಕಾಗಿದೆ" ಎಂದನು. ತನ್ನ ಮಾರಾಪನ್ನೂ ಬೆನ್ನ ಮೇಲೆ ಇರಿಸಿಕೊಂಡನು. ಆಗ ಬ್ರಾಹ್ಮಣನು ಜನಮಿತ್ರನೊಡನೆ ಹೊರಟನು.

ಅವರಿಬ್ಬರೂ ದಾರಿ ನಡೆದು ಮುಂದೆ ಹೋಗಲು ಸ್ವಲ್ಪ ದೂರದಲ್ಲಿಯೇ ಒಂದು ಅಂಗಡಿಯು ಕಾಣಿಸಿತು. ಆ ಅಂಗಡಿಯಲ್ಲಿ ಒಬ್ಬನು ಕುಳಿತಿದ್ದನು. ಅವನ ಪಕ್ಕದಲ್ಲಿ ಕಟ್ಟಿಗೆಯ ತುಂಡು ಇತ್ತು. ಅವನು ಕಟ್ಟಿಗೆಯನ್ನು ಕೊಂಡು ಕೊಳ್ಳುವವರನ್ನು ಹಾರೈಸುತ್ತಿದ್ದನು. ಜನಮಿತ್ರನು ಆ ಕಟ್ಟಿಗೆಯನ್ನು ಕ್ರಯಕ್ಕೆ ಪಡಕೊಂಡು ಅದನ್ನು ಸೀಳಿದನು. ಅದರೊಳಗಿಂದ ಪಚ್ಚೆಯ ಕಲ್ಲೊಂದುರುಳಿ ಬಿತ್ತು.

ಜನಮಿತ್ರನದನ್ನೆತ್ತಿಕೊಂಡು ಆ ಬ್ರಾಹ್ಮಣನಿಗೆ ತೋರಿಸಿ—"ಈ ಕಲ್ಲು ಯಾರ ಕೈಯಲ್ಲಿರುವುದೋ, ಅವನು ವೈದ್ಯಶಿರೋಮಣಿಯಾಗುವನು. ರೋಗಿಯ ಸಮೀಪದಲ್ಲಿ ಈ ಕಲ್ಲನ್ನಿಟ್ಟರೆ ಕೊಡಬೇಕಾದ ಔಷಧವು ಗೊತ್ತಾ ಗುವುದು" ಎಂದನು.

ಆ ಬ್ರಾಹ್ಮಣನು ಕಣ್ಣರಳಿಸಿ ನೋಡಿ "ಇದನ್ನೀಗ ಪರೀಕ್ಷೆ ಮಾಡಿ ನೋಡೋಣ" ಎಂದನು. ಜನಮಿತ್ರನು ಅತ್ತಿತ್ತ ನೋಡುವಷ್ಟರಲ್ಲಿ ಪಕ್ಕ ದಲ್ಲಿಯೇ ಅಳುವ ದನಿ! ಒಬ್ಬ ಭಿಕ್ಷುಕನು ನೋವನ್ನು ತಾಳಲಾರದೆ ಮುಕ್ಕ

ಳಂತೆ ಅಳುತ್ತಿದ್ದನು. ಅವನು ತಲೆಯನ್ನು ಒತ್ತಿ ಹಿಡಿದುಕೊಂಡಿದ್ದನು. ಆ ಭಿಕ್ಷುಕನು ಅಂಗಡಿಯ ಸಮೀಪವನ್ನೈದಿ "ಓ ತಂದೆಯೇ ನನ್ನ ಬೇನೆಯನ್ನು ಪರಿಹರಿಸಿರಿ. ನನ್ನ ತಲೆಯೊಳಗೆ ಯಾರೋ ಬಾಳಿನಿಂದ ತಿವಿಯುವಂತಾಗುತ್ತಿದೆ" ಎಂದನು. ಬ್ರಾಹ್ಮಣನಾಗ ಜನಮಿತ್ರನ ಮೋರೆಯನ್ನು ನೋಡಿದನು. ಜನಮಿತ್ರನು ಕೂಡಲೇ ಅವನ ತಲೆಯನ್ನು ಪರೀಕ್ಷೆ ಮಾಡಿ ನೋಡಿ ನಿಮಿಷಾರ್ಧದಲ್ಲಿ "ಶತಪದಿಯೊಂದು ಇವನ ಮೆದುಳನ್ನು ತಿನ್ನುತ್ತಿದೆ. ಇವನು ನಿನ್ನೆ ರಾತ್ರಿ ಮಲಗಿದ್ದಾಗ ಅದು ಕಿವಿಯ ಮೂಲಕ ಪ್ರವೇಶಮಾಡಿ ಎಲುಬನ್ನು ಕೊರೆದು ಮೆದುಳನ್ನು ಸೇರಿದೆ" ಎಂದನು.

ಅದನ್ನು ಕೇಳಿ ಭಿಕ್ಷುಕನು ತನ್ನ ಕೈಗಳನ್ನು ಜೋಡಿಸಿ "ಓ ತಂದೆಯೇ ನನ್ನನ್ನು ಈ ಬೇನೆಯಿಂದ ಪರಿಹರಿಸಬೇಕು" ಎಂದು ಬೇಡಿಕೊಂಡನು. ಜನಮಿತ್ರನಾಗ ಒಂದು ಹೊಂಡವನ್ನು ಮಾಡಿ, ಭಿಕ್ಷುಕನನ್ನು ಅದಕ್ಕಿಳಿಸಿ, ಕತ್ತಿನ ವರೆಗೆ ಮಣ್ಣುಮುಚ್ಚಿ, ತನ್ನ ಚೀಲದಿಂದ ಒಂದು ಡಬ್ಬಿಯನ್ನು ತೆಗೆದು, ಅದರಲ್ಲಿದ್ದ ರಸವನ್ನು ರೋಗಿಯ ತಲೆಯ ಮೇಲೆ ಚಿಮುಕಿಸಿದನು. ಅನಂತರ ಅವನ ತಲೆಯೋಡನ್ನು ತನ್ನ ಬಾಳಿನಿಂದ ಬಿಡಿಸಿ, ಇಕ್ಕುಳದಿಂದ ಶತಪದಿಯನ್ನು ತೆಗೆದು, ಬ್ರಾಹ್ಮಣನಿಗೆ ತೋರಿಸಿದನು. ಆ ಮೇಲೆ ತಲೆಯೋಡನ್ನು ಸರಿಯಾಗಿ ಅದರ ಸ್ಥಳದಲ್ಲಿರಿಸಿ ಕೆಲವು ಮೂಲಿಕೆಗಳ ರಸವನ್ನು ಹಿಂಡಿ, ಗಾಯಕ್ಕೆರೆದು, ಬಟ್ಟೆಯನ್ನು ಸುತ್ತಿ, ಭಿಕ್ಷುಕನನ್ನು ಹೊಂಡದಿಂದೆತ್ತಿ, ಅಂಗಡಿಯಿಂದ ಆಹಾರ ಪದಾರ್ಥಗಳನ್ನು ಪಡಕೊಂಡು ರೋಗಿಗೆ ಕೊಟ್ಟನು. ಒಂದು ಕ್ಷಣದಲ್ಲಿ ಭಿಕ್ಷುಕನ ನೋವು ಮಾಯವಾಯಿತು. ಅವನು ಜೀವಕನನ್ನು ಹೊಗಳುತ್ತಾ ಮುಂದೆ ನಡೆದನು.

ಜನಮಿತ್ರನ ಬುದ್ಧಿ ಚಮತ್ಕಾರವನ್ನು ನೋಡಿ ಬ್ರಾಹ್ಮನು ತಲೆದೂಗಿದನು, ಅವನನ್ನು ಕೊಂಡಾಡಿದನು. "ಮಿತ್ರನೇ ನಿನ್ನ ಪಾಂಡಿತ್ಯವು ಚಕ್ರವರ್ತಿಗೆ ತಿಳಿದರೆ ನಿನಗೆ ರಾಜಸಭೆಯಲ್ಲಿ ಸ್ಥಾನವು ದೊರಕುವುದು" ಎಂದನು. ಆದರೆ ಜನಮಿತ್ರನೆಂದನು "ವಿಪ್ರವರ್ಯಾ, ನಾನು ರಾಜಸ್ಥಾನದ ಪ್ರಶಂಸೆಗೆ ಮನವನ್ನೀಯೆನು. ಜನರ ಸೇವೆ ದೊರಕಿದರೆ ನನಗೆ

ಸಾಕು, ನಮ್ಮ ಬಾಂಧವರ ಬೇನೆಯನ್ನು ತಗ್ಗಿಸಲು ಅವಕಾಶ ದೊರಕಿದರೆ ನಾನು ಮನುಷ್ಯನಾದುದು ಸಾರ್ಥಕವಾದೀತು".

ಅಷ್ಟರಲ್ಲಿ ಮೊದಲು ಕಳ್ಳನನ್ನೊಯ್ದ ಸೈನ್ಯಾಧಿಪತಿಯು ಕಾಣಿಸಿಕೊಂಡನು. ಅವನು ಜನಮಿತ್ರನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ "ಜೀಯಾ ನಮ್ಮ ಧೊರೆಯು ತಮ್ಮ ಪಾಂಡಿತ್ಯವನ್ನು ಕೇಳಿ ತಿಳಿದು, ತಮ್ಮ ಭೇಟಿಯನ್ನು ನಿರೀಕ್ಷಿಸುತ್ತಿರುವರು. ತಾವು ದಯ ಮಾಡಿಸ ಬೇಕು" ಎಂದನು.

ಜನಮಿತ್ರನು ಅವನೊಡನೆ ಹೋಗಲೊಪ್ಪಿದನು. ಬ್ರಾಹ್ಮಣನು ಅವನಿಗೆ ನಮಸ್ಕಾರ ಮಾಡಿ ಅವನ ಗುಣವನ್ನು ಹೊಗಳಿ ಸ್ವಲ್ಪ ದೂರ ಅವನೊಡನೆ ನಡೆದು ಗೌರವಿಸಿ, ಬೀಳ್ಕೊಟ್ಟು ತನ್ನ ಮನೆಗೆ ಹಿಂದಿರುಗಿದನು.

ಸೈನ್ಯಾಧಿಪತಿಯು ಜನಮಿತ್ರನನ್ನು ಚಕ್ರವರ್ತಿಯ ಸಜ್ಜೆಮನೆಗೊಯ್ದನು. ಚಕ್ರವರ್ತಿಯ ಕಾಯಿಲೆಯು ಮಿತಿಮೀರಿ ಹೋಗಿತ್ತು. ಅವನ ಕೋಣೆಯಲ್ಲಿ ರಾಜ ವೈದ್ಯನು ತಲೆತಗ್ಗಿಸಿ ನಿಂತಿದ್ದನು. ಇಬ್ಬರು ರಾಜಕುಮಾರರು ಬಾಡಿದ ಮುಖದಿಂದ ಜನಮಿತ್ರನನ್ನು ಸ್ವಾಗತೀಕರಿಸಿದರು. ಮಹಾರಾಣಿಯು ಚಕ್ರವರ್ತಿಯ ಕಾಲಬಳಿ ಕುಳಿತುಕೊಂಡು ಕಣ್ಣೀರು ಸುರಿಸುತಿದ್ದಳು. ಇಡೀ ಗಿರಿವ್ರಜವೇ ಶೋಕಸಾಗರದಲ್ಲಿ ಮುಳುಗಿ ಹೋಗಿತ್ತು.

ಚಕ್ರವರ್ತಿ ಬಿಂಬಿಸಾರನು ಪ್ರಜ್ಞಾ ಶೂನ್ಯನಾಗಿದ್ದನು. ಆದರೆ ಜ್ವರದ ಉದ್ರೇಕದಿಂದ ಬಾಯಿಗೆ ಬಂದಂತೆ ಮಾತಾಡುತಿದ್ದನು—"ಜೀವಕಾ! ಜೀವಕಾ! ನೀನೆಲ್ಲಿರುವೆ? ನಿನ್ನ ದರ್ಶನವನ್ನೊಮ್ಮೆ ಕೊಡಲಾರೆಯಾ? ನನ್ನ ಕಡೆಗಾಲದಲ್ಲಿ ನೀನು ದೂರವಾದೆಯಾ..........ಮಗು ಜೀವಕ! ನೀನೆಲ್ಲಿ ಹತವಾದೆಯೋ? ಯಾವ ಶತ್ರುಗಳ ಕೈಗೆ ಸಿಕ್ಕುಬಿದ್ದೆಯೊ? ಯಾವ ಪ್ರಾಣಿಗಳಿಂದ ಹಿಂಸಿಸಲ್ಪಟ್ಟೆಯೋ? ನೀನು ಭೂಮಿಯಲ್ಲಿರುವೆಯೋ? ಸ್ವರ್ಗದಲ್ಲಿರುವೆಯೋ?" ಎಂದು ಹಲುಬುತಿದ್ದನು. ಜನಮಿತ್ರನಿಗೆ ಈ ಮಾತುಗಳನ್ನು ಕೇಳಿ ಮುಖವು ವಿವರ್ಣವಾಯಿತು. ಚಿತ್ತ—ಕ್ಷೋಭೆಯುಂಟಾಯಿತು ಆದರೂ ಮನೋವಿಕಾರವನ್ನು ತಡೆದು ಚಕ್ರವರ್ತಿಯ ಪಾರ್ಶ್ವದಲ್ಲಿ ನಿಂತನು.

ಆಗ ಮಹಾರಾಣಿಯು— 'ಆರ್ಯ, ನನ್ನ ಪತಿಯನ್ನು ರಕ್ಷಿಸು.

ನೀನು ವೈದ್ಯ ರಾಜನೆಂದು ಸೈನಿಕರು ಹೇಳುತ್ತಿದ್ದರು. ನನ್ನ ಮಾಂಗಲ್ಯ ಸೂತ್ರವನ್ನು ಕಾಪಾಡು'' ಎಂದಳು.

ಜನಮಿತ್ರನು ಬಹು ವಿನಯದಿಂದ—"ಮಹಾತಾಯಿ! ವೈದ್ಯ ಶಾಸ್ತ್ರ ನನಗೇನೋ ಅಲ್ಪ ಸ್ವಲ್ಪ ಗೊತ್ತಿದೆ. ಚಕ್ರವರ್ತಿಯ ಕಾಹಿಲೆಯನ್ನು ಪರಿಹರಿಸಲು ಪ್ರಯತ್ನಿಸುವೆನು. ದೇವರ ಕರುಣೆಯು ತಮ್ಮ ಮೇಲೆ ಸಂಪೂರ್ಣವಾಗಿರಲಿ" ಎಂದನು. ರಾಜ ವೈದ್ಯನಾಗ ಜನಮಿತ್ರನನ್ನು ಓರೆಗಣ್ಣಿನಿಂದ ನೋಡಿದನು. ಮತ್ಸರವು ಆ ನೋಟದಲ್ಲಿ ತೋರುತಿತ್ತು. ಜನಮಿತ್ರನು ಚಕ್ರವರ್ತಿಯ ನಾಡಿಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದನು. ಅರಸನ ತಲೆಯಲ್ಲಿ ಒಂದು ಕುರು ಇತ್ತು. "ಇಷ್ಟೇ" ಎಂದುಕೊಂಡನು. ಪಚ್ಚೆಯ ಹರಳನ್ನು ಕುರುವಿನ ಮೇಲಿಟ್ಟು ನೋಡಿದನು. ಆ ಮೇಲೆ ಅವನು ಕುದಿ ಹಿಟ್ಟಿನ ಪಟ್ಟನ್ನು ಮಾಡಿ ಕುರುವಿನ ಮೇಲೆ ಅರೆಗಳಿಗೆಯಿಟ್ಟನು. ಆ ರಾಜ ಕುರು ಮೆತ್ತಗಾಯಿತು. ಒಡನೆ, ಪಟ್ಟನ್ನು ತೆಗೆದು ಒಂದು ಮೂಲಿಕೆಯ ರಸವನ್ನು ಕುರುವಿನ ಮೇಲೆ ಎರೆದು, ಒಂದು ಹರಿತವಾದ ಬಾಳಿನಿಂದ ಅದನ್ನು ಸೀಳಿ. ಕೀವನ್ನು ತೆಗೆದು, ಕಷಾಯದಿಂದ ತೊಳೆದು ಸ್ವಯಂಜ್ಯೋತಿ ಮರದ ರಸವನ್ನು ಎರೆದನು. ಕುರುವೂ ಕಾಣದಾಯಿತು, ನೋವೂ ಮಾಯವಾಯಿತು. ಚಕ್ರವರ್ತಿಗೆ ಪ್ರಜ್ಞೆ ಬಂತು. ಅವನು ನಿದ್ದೆ ತಿಳಿದವನಂತೆ ಎದ್ದು ತನ್ನ ಸುತ್ತ ಮುತ್ತ ನೋಡಿದನು. ಸೂರ್ಯೋದಯದಲ್ಲಿ ಸೃಷ್ಟಿಯು ಚೇತನಗೊಳ್ಳುವಂತೆ ಅಲ್ಲಿ ನೆರೆದಿದ್ದವರೆಲ್ಲರೂ ಚೇತನಗೊಂಡರು. ಮಹಾರಾಣಿಯು ಸಂತೋಷದಿಂದ ನಡೆದ ವಿಷಯಗಳನ್ನೆಲ್ಲಾ ಹೇಳಿ "ಈ ತರುಣನು ನನ್ನ ಮಾಂಗಲ್ಯಸೂತ್ರವನ್ನು ಕಾಪಾಡಿದನು" ಎಂದಳು. ಜನಮಿತ್ರನಾಗ—"ಮಹಾ ಪ್ರಭೂ ತಮ್ಮ ತಲೆಯನ್ನು ಮುಟ್ಟಿ ನೋಡೋಣವಾಗಲಿ" ಎಂದನು. ಅವನು ತಲೆಯನ್ನು ಮುಟ್ಟಿ ನೋಡಿದನು. ಕುರುವಿದ್ದ ಸ್ಥಳವೇ ಕಾಣಲಿಲ್ಲ, ಕೈಗೆ ಸಿಕ್ಕಲಿಲ್ಲ. ಅನಂತರ ರನ್ನಗನ್ನಡಿಯನ್ನು ತರಿಸಿ ನೋಡಿದರೂ ಕುರುವೆದ್ದಿದ್ದ ಸ್ಥಳವು ಕಾಣಬರಲಿಲ್ಲ. ರಾಜ ವೈದ್ಯನ ಮೋರೆ ಸಪ್ಪಗಾಯಿತು, ಅವನು ಮಾತಾಡದೆ ಸಜ್ಜೆಮನೆಯಿಂದ ಜಾರಿದನು. ಚಕ್ರವರ್ತಿಯ ಸಂತೋಷಕ್ಕೆ ಪಾರವೇ ಇಲ್ಲ. ಅವನು ಜನಮಿತ್ರನನ್ನು ಮನದಣಿಯೇ ಹೊಗಳಿದನು. ಆ ಮೇಲೆ ರಾಜ್ಯಯೋಗ್ಯ

ವಾದ ಮನ್ನಣೆಯನ್ನು ಅವನಿಗೆ ಮಾಡಲು ಅಪ್ಪಣೆಯನ್ನಿತ್ತನು

ಮರುದಿನ ರಾಜಸಭೆಯು ಬಹು ವಿಜೃಂಭಣೆಯಿಂದ ಸೇರಿತು. ಚಕ್ರವರ್ತಿಯು ಮೃತ್ಯುಮುಖದಿಂದ ಪಾರಾದುದು ಇಡೀ ರಾಜ್ಯವನ್ನೇ ಆನಂದದಿಂದ ತುಂಬಿಸಿತು ಅಂದಿನ ಸಭೆಯಲ್ಲಿ ಜನಮಿತ್ರನಿಗೆ ಯೋಗ್ಯ ಸನ್ಮಾನ ಮಾಡಬೇಕೆಂದು ಚಕ್ರವರ್ತಿಯು ನಿರ್ಧರಿಸಿದನು. ರಾಜಕುಮಾರರೂ ಸಂಸ್ಥಾನಧೀಶರೂ, ಮಾಂಡಲಿಕರೂ, ಪಟ್ಟಣದ ಪ್ರಮುಖರೂ ನೆರೆದಿದ್ದರು. ಜನಮಿತ್ರನನ್ನು ಚಕ್ರವರ್ತಿಯು ಬರಮಾಡಿಕೊಂಡು ಯೋಗ್ಯಾಸನದಲ್ಲಿ ಕುಳ್ಳಿರಿಸಿ, ಗಂಭೀರ ಸ್ವರದಿಂದ ಹೀಗಂದನು—"ಈ ತರುಣನು ವೈದ್ಯರಾಜನು. ನನ್ನನ್ನು ಮೃತ್ಯು ಮುಖದಿಂದ ಪಾರು ಮಾಡಿದನು. ಅಷ್ಟೇ ಅಲ್ಲ. ಅವನು ಬೃಹಸ್ಪತಿಯಂತೆ ಮೇಧಾವಿ. ನಮ್ಮ ರಾಣಿವಾಸದಲ್ಲಿ ನಡೆದ ಕಳ್ಳನನ್ನು ಗೊತ್ತು ಹಿಡಿದು ನಮಗೆ ತುಂಬಾ ಉಪಕಾರ ಮಾಡಿದ್ದಾನೆ. ಅವನೇ ನಮ್ಮ ಮುಂದಿನ ವೈದ್ಯರಾಜ. ಅವನೇ ನಮ್ಮ ಮುಂದಿನ ಮಂತ್ರಿ." ಕೂಡಲೇ ಸಭಾಸದನದಲ್ಲಿ ಜಯಘೋಷವೆದ್ದಿತು. ರಾಜವೈದ್ಯನ ಮುಖವು ಕಳೆಗುಂದಿತು. ಮಂತ್ರಿಯ ಮೋರೆಯು ಬಾಡಿತು. ಆದರೆ ಜನಮಿತ್ರನ ಮೋರೆಯು ವಿವರ್ಣವಾಯಿತು. ಆವನ ಕೊರಳಲ್ಲಿ ಗದ್ಗದ ಧ್ವನಿಯುಂಟಾಯಿತು. ಕಣ್ಣುಗಳಲ್ಲಿ ಅಶ್ರುಬಿಂದುಗಳು ತುಂಬಿದುವು.

ಆಗ ಜನಮಿತ್ರನು ಚಕ್ರವರ್ತಿಯ ಬಳಿಗೆ ಹೋಗಿ ಸಭೆಯಲ್ಲಿದ್ದವರಿಗೆಲ್ಲಾ ಕೇಳುವಂತೆ ಅತಿ ವಿನಯದಿಂದ—' ಓ ಮಗಧಾಧೀಶನೇ! ನಾನಿಂದು ಧನ್ಯನಾದೆನು; ಆದರೆ ನನಗೆ ರಾಜ ವೈದ್ಯನಾಗಲೂ ಆಶೆಯಿಲ್ಲ. ಮಂತ್ರಿ ಪದವಿಯನ್ನು ಸ್ವೀಕರಿಸಲೂ ಇಷ್ಟವಿಲ್ಲ. ನನ್ನ ಧ್ಯೇಯವೇ ಜನತಾಸೇವೆ, ಅದರ ಮೂಲಕ ಈಶ ಸೇವೆ. ನಾನಾದರೂ ದೂರದವನಲ್ಲ" ಎಂದನು.

ಚಕ್ರವರ್ತಿಯು ಕಣ್ಣರಳಿಸಿ ಅವನನ್ನು ನೋಡಿದನು ಎಲ್ಲಿಯೋ ಅವನನ್ನು ಕಂಡಿದ್ದಂತೆ ಚಕ್ರವರ್ತಿಯ ಮನಸ್ಸಿಗೆ ತೋರಿತು. ಸಭಾ ಜನರೆಲ್ಲರೂ ಅವನ ಕಡೆ ನೋಡಿದರು. ಅಷ್ಟರಲ್ಲಿ ಜನಮಿತ್ರನು ತಾನು ಧರಿಸಿದ್ದ ನಿಲುವಂಗಿಯನ್ನು ತುಂಬಿದ ಸಭೆಯಲ್ಲಿ ತೆಗೆದುಬಿಟ್ಟನು. ಆದರೆ ಇದೇನು? ನಿಲುವಂಗಿಯನ್ನು ತೆಗೆದ ಕೂಡಲೆ ಅವನ ಮೈ ರತ್ನಾಭರಣಗಳಿಂದ ಹೊಳೆಯುತ್ತಿದೆ! ಆಸ್ಥಾನದ ವೇಷಭೂಷಣಗಳು ಕಣ್ಣನ್ನು ಕುಕ್ಕುತ್ತಿವೆ!

ಚಕ್ರವರ್ತಿಯು ತನ್ನ ಕಣ್ಣುಗಳನ್ನೇ ನಂಬದಾದನು. ಜನಮಿತ್ರನು ಚಕ್ರವರ್ತಿಯ ಕಾಲುಗಳ ಮೇಲೆ ತನ್ನ ಹಣೆಯನ್ನಿಟ್ಟು—"ನಾನಲ್ಲವೇ ಜೀವಕ" ಎಂದು ಮೆಲ್ಲನೆ ನುಡಿದನು. ಚಕ್ರವರ್ತಿಯು ಕೂಡಲೇ ಅವನನ್ನು ಹಿಡಿದೆತ್ತಿ "ಜೀವಕ! ನನ್ನ ಪುತ್ರ ಜೀವಕ! ನಾನು ಕಳೆದು ಕೊಂಡಿದ್ದ ರತ್ನವು ನನ್ನ ಕೈಸೇರಿತು" ಎಂದು ಗಟ್ಟಿಯಾಗಿ ಹೇಳಿದನು. ಸಂತೋಷ ಸಾಗರದಲ್ಲಿ ತೇಲಾಡಿದನು. ಕಡು ಬಡವನಿಗೆ ನಿಧಿಯು ದೊರಕಿದಂತೆ ಕುಣಿದಾಡಿದನು. ಸಭಾಮಂಡಲಿಯ ಕರತಾಡನವು ಆ ಕುಣಿತಕ್ಕೆ ತಾಳ ಹಾಕುತ್ತಿದ್ದಂತೆ ತೋರಿತು. ಚಕ್ರವರ್ತಿಯು ಮಗನನ್ನಪ್ಪಿಕೊಂಡು, "ಮಗೂ ನೀನು ಇಷ್ಟು ವರ್ಷಗಳನ್ನು ಹೇಗೆ ಕಳೆದೆ, ಏನು ಮಾಡಿದೆ, ಎಂಬ ವಿಚಾರ ಕೇಳಲು ಕುತೂಹಲ ಪಡುತ್ತಿದ್ದೇನೆ" ಎಂದನು.

ಜೀವಕನು ಅನಂತರ ಮೃದು ಸ್ವರದಿಂದ ತಾನು ಜ್ಞಾನ ಸಂಪಾದನೆ ಮಾಡಿದ ರೀತಿಯನ್ನು ಬಿನ್ನವಿಸಿದನು:—

"ಅಂದು ನಟ್ಟಿರುಳು ನಾನು ಹುಟ್ಟೂರನ್ನು ಬಿಟ್ಟು ಅನೇಕ ದಿನಗಳ ವರೆಗೆ ದಾರಿ ನಡೆದು ವಿಂಧ್ಯಾಪರ್ವತದ ದಕ್ಷಿಣದ ಸಾನು ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಒಬ್ಬಾನೊಬ್ಬ ಬ್ರಾಹ್ಮಣನ ಮನೆಯನ್ನು ಸೇರಿದೆನು. ಅವನು ಮಹಾ ವಿದ್ವಾಂಸನಾಗಿದ್ದನು. ನನ್ನೆದೆಯ ಬಯಕೆಯನ್ನು ಅವನಿಗೆ ಅರಿಕೆ ಮಾಡಿಕೊಂಡೆನು. ಅವನು ನನ್ನನ್ನು ಸತ್ಕರಿಸಿ ಪರಮಾನಂದದಿಂದ ನಾಲ್ಕು ವರ್ಷಗಳ ವರೆಗೆ ಇರಿಸಿಕೊಂಡನು. ತಾನು ಶಾಸ್ತ್ರಗ್ರಂಥಗಳಿಂದಲೂ ತನ್ನ ಗುರುವಿನಿಂದಲೂ ಪಡೆದಿದ್ದ ಜ್ಞಾನಭಂಡಾರವನ್ನು ಆ ವಿಪ್ರೋತ್ತಮನು ನನಗೆ ಒದಗಿಸಿಕೊಟ್ಟನು. ಅನಂತರ ಆ ಹಾರುವನು—'ವತ್ಸಾ! ನೀನು ಕಲಿಯಬೇಕಾದುದನ್ನೆಲ್ಲವನ್ನೂ ನಿನಗೆ ಕಲಿಸಿರುವೆನು. ನೀನು ದಕ್ಷಿಣದಲ್ಲಿ ಗೋದಾವರಿ ನದಿಯ ದಡದಲ್ಲಿರುವ ಶಬರ ರಾಜ್ಯಕ್ಕೆ ಹೋಗು. ಅಲ್ಲಿಯ ಜನರು ಪ್ರತ್ಯಕ್ಷ ಪರಿಶೀಲನೆಯಲ್ಲಿ ವಿಶೇಷ ಪರಿಶ್ರಮವುಳ್ಳವರು. ಪ್ರಕೃತಿ ಶಾಸ್ತ್ರದ ಜ್ಞಾನ ಅವರಿಗೆ ತುಂಬಾ ಇದೆ. ಅವರು ಹೆಜ್ಜೆಗಳ ಗುರುತನ್ನು ಹಿಡಿದು ಮೃಗಪಕ್ಷಿಗಳನ್ನು ತಿಳಿದುಕೊಳ್ಳುವರು. ಕಾಲಕಾಲಕ್ಕೆ ಚಿಗುರುವ ಹುಲ್ಲು, ಕಡ್ಡಿಗಳ, ಗಿಡ ಮರಗಳ, ಬಳ್ಳಿ ಪೊದರುಗಳ ಅರಿವು ಅವರಿಗೆ ತುಂಬಾ ಇದೆ. ಅವರು ನಿನಗೆ ಪ್ರಕೃತಿಯ ಎಲ್ಲಾ

ಚಮತ್ಕಾರಗಳನ್ನು ಕಲಿಸುವರು. ಅನಂತರ ನೀನು ಅಮರಾವತಿಯಲ್ಲಿರುವ ನನ್ನ ತಮ್ಮನಲ್ಲಿಗೆ ಹೋಗು. ಅವನು ನಿನಗೆ ಶಸ್ತ್ರಚಿಕಿತ್ಸೆಯನ್ನು ಕಲಿಸುವನು. ಅಲ್ಲಿಂದ ನೀನು ಸ್ವಯಂ ಜ್ಯೋತಿ ವೃಕ್ಷವನ್ನು ಕಂಡು ತಿಳಿದುಕೋ. ಅದರ ತೊಗಟೆಯಲ್ಲಿ ಪಚ್ಚೆಯ ಹರಳು ಇದೆ. ರೋಗಗಳನ್ನು ಕಂಡುಹಿಡಿದು ಗುಣಪಡಿಸಲು ಅದು ಪ್ರಯೋಜನವಾಗುವುದು. ನಿನ್ನಿಚ್ಛೆಯು ಕೈಗೂಡುವುದು” ಎಂದನು.

“ಆ ವಿಪ್ರನ ಆಶೀರ್ವಾದಗಳನ್ನು ಕೈ ಕೊಂಡು ನಾನು ಹೊರಟು ಶಬರ ರಾಜ್ಯದ ಬೇಡರ ಹಳ್ಳಿಗೆ ಹೋದೆನು. ಆ ಬೇಡರೊಡೆಯನು ನನ್ನನ್ನು ಅತ್ಯಾದರದಿಂದ ಕರದೊಯ್ದು ತನ್ನ ಮನೆಯಲ್ಲಿರಿಸಿಕೊಂಡು, ಹತ್ತು ವರ್ಷಗಳ ವರೆಗೆ ನನ್ನನ್ನು ಕಾಪಾಡಿದನು. ನಾನು ಆ ಕಾಲದಲ್ಲಿ ಪ್ರಕೃತಿ ಶಾಸ್ತ್ರ, ವನಸ್ಪತಿ ಶಾಸ್ತ್ರ, ಪ್ರಾಣಿ ಶಾಸ್ತ್ರಗಳನ್ನು ಅವರಿಂದ ಕಲಿತೆನು. ಹೆಜ್ಜೆಗಳ ಗುರುತಿನಿಂದ ಮೃಗಗಳನ್ನು ಬೆಂಬತ್ತಿ ಅವುಗಳ ಹಕ್ಕೆಗಳನ್ನು ಕಂಡುಹಿಡಿದೆನು. ಮಿಗಪಕ್ಷಿಗಳ ಕುರುಹಿಂದ ಮಿಗಗಳನ್ನು ಗುರ್ತಿಸಿ ಅವುಗಳ ಸ್ವಭಾವ ಜೀವನ ಪರಿಶೀಲಿಸಿದೆನು. ಗಿಡ ಮೂಲಿಕೆಗಳನ್ನು ಗೊತ್ತು ಹಚ್ಚಿ ಅವುಗಳ ಲಕ್ಷಣಗಳನ್ನು ತಿಳಿದುಕೊಂಡೆನು. ಅನೇಕ ಚಮತ್ಕಾರಗಳನ್ನು ಕಲಿತುಕೊಂಡೆನು. ಬೇಡರೊಡೆಯನು ಅಲ್ಲಿಂದ ನನ್ನನ್ನು ವೈದ್ಯ ಶಸ್ತ್ರ ಚಿಕಿತ್ಸೆಯನ್ನರಿತಿದ್ದ ಪಾರ್ವನಲ್ಲಿಗೆ ಕಳುಹಿಸಿಕೊಟ್ಟನು.

ಆ ಬ್ರಾಹ್ಮಣನ ಬಳಿ ಐದು ವರ್ಷಗಳನ್ನು ಕಳೆದೆನು. ಅವನಿಂದ ವೈದ್ಯಶಾಸ್ತ್ರ ಚಿಕಿತ್ಸೆಯಲ್ಲಿಯೂ ಪಾಂಡಿತ್ಯವನ್ನು ಪಡೆದೆನು. ಶಸ್ತ್ರಪ್ರಯೋಗದ ಜಾಣ್ಮೆಯನ್ನು ಸಂಪಾದಿಸಿದೆನು. ಬೇಕಾದುದನ್ನೆಲ್ಲಾ ಕಲಿತು ಮುಗಿದ ನಂತರ ಅವನು—“ಶಿಷ್ಯಾ, ವೈದ್ಯ ವಿದ್ಯೆಯಲ್ಲಿ ನಿನ್ನ ಜ್ಞಾನವು ಸಂಪೂರ್ಣವಾಯಿತು. ಇನ್ನು ನೀನು ಪಚ್ಚೆಯ ಹರಳನ್ನು ಹುಡುಕಲು ಹೋಗು. ಅದು ಸ್ವಯಂ ಜ್ಯೋತಿ ಮರದ ತೊಗಟೆಯಲ್ಲಿರುವುದು. ಆ ತೊಗಟೆಯು ನಯವಾದ ಪುಡಿಯನ್ನು ಸುರಿಸುತ್ತದೆ. ಪುಡಿಯು ಮಿಂಚಿನಂತೆ ಹೊಳೆಯುತ್ತದೆ. ಆ ಮರವು ರಾತ್ರಿ ಬೆಳಕನ್ನು ಕೊಡುವುದು. ಅದರ ಕಟ್ಟಿಗೆಯು ಕಬ್ಬಿಣಕ್ಕಿಂತ ಭಾರವಿದೆ. ವಿಂಧ್ಯಾ ಪರ್ವತದ ಮೂಡಣ ಕಾಡಿನಲ್ಲಿದೆ. ನೀನದನ್ನು ಸಂಪಾದಿಸಿಕೊ; ನಿನಗೆ ಕಲ್ಯಾಣವಾಗಲಿ” ಎಂದು ಹರಸಿದನು.

ಆ ಮೇಲೆ ಆ ಮರವನ್ನು ಹುಡುಕುತ್ತಾ ತೊಳಲಿದೆ. ಕಾಡುಬೆಟ್ಟಗಳನ್ನು ತುಡುಕಿದೆ, ಒಂದು ವರ್ಷ ಹುಡುಕಾಡಿದ ಮೇಲೆ ನಿನ್ನೆ ಅದು ನನ್ನ ಕೈಸೇರಿತು; ನನ್ನ ಜನ್ಮದಾತನಿಗೆ ನೆರವಾಗುವ ಸಂದರ್ಭವು ಲಭಿಸಿತು. ನನಗೆ ರಾಜ್ಯಪದವಿಯಾಗಲೀ ಅಧಿಕಾರವಾಗಲೀ ಬೇಕಾಗಿಲ್ಲ."

ಜೀವಕನ ಕತೆಯನ್ನು ಕೇಳಿ ಸಭೆಯು ಆಶ್ಚರ್ಯದಿಂದ ತಲೆದೂಗಿತು. ಅವನ ತಂದೆಯು ಮಾತನ್ನು ಮನ್ನಿಸಿ ಸ್ವಲ್ಪ ಕಾಲ ವೈದ್ಯರಾಜನಾದನು. ಮಂತ್ರಿಪದವಿಯನ್ನು ಸ್ವಲ್ಪ ಕಾಲದ ವರೆಗೆ ಸ್ವೀಕರಿಸಿದನು. ಮುಂದೆ ಬುದ್ಧದೇವನು ಮಗಧ ರಾಜ್ಯವನ್ನು ಪ್ರವೇಶಿಸಿದಾಗ ಜೀವಕನು ಅವನ ಶಿಷ್ಯನಾದನು. ಸನ್ಯಾಸವನ್ನು ಸ್ವೀಕರಿಸಿ ತನ್ನ ಜ್ಞಾನ ಮತ್ತು ಜೀವನ, ಭಾಗ್ಯ ಸಂಪತ್ತುಗಳನ್ನೆಲ್ಲಾ ಜನರಿಗಾಗಿ—ಜನರ ಕಷ್ಟನಿವಾರಣೆಗಾಗಿ ಅರ್ಪಿಸಿ ಜನ್ಮಸಾಫಲ್ಯವನ್ನು ಪಡೆದನು.

---

೨. ಚಿರಂಜೀವಿ

ಅನೇಕ ವರ್ಷಗಳ ಹಿಂದೆ ಮೆಕ್ಕಾ ಪಟ್ಟಣದಲ್ಲಿ ಓರ್ವ ವ್ಯಾಪಾರಿಯು ಇದ್ದನು. ಅವನ ಹೆಸರು ಅಲಿಕಾದರ. ಅವನು ನಾನಾ ದೇಶಗಳಿಂದ ಮುತ್ತು ರತ್ನಗಳನ್ನು ತರಿಸಿ ಮಾರುತ್ತಿದ್ದನು. ಈ ರತ್ನ ವ್ಯಾಪಾರದಿಂದ ಅವನು ಹೇರಳ ಸಂಪತ್ತನ್ನು ಗಳಿಸಿದನು. ಆದರೆ ಅವನ ಮನಸ್ಸಿನಲ್ಲಿ ಮಾತ್ರ ಸಂತೋಷವು ಇರಲಿಲ್ಲ. "ಹುಟ್ಟಿದವನಿಗೆ ಸಾವು ತಪ್ಪದು" ಎಂಬ ಮಾತನ್ನು ಆಗಾಗ ಕೇಳಿ ಅವನು ಚಿಂತೆಗೊಳಗಾಗುತ್ತಿದ್ದನು.

ಒಂದು ದಿನ ಅಲಿಕಾದರನು ತನ್ನ ಅಂಗಡಿಯಲ್ಲಿ ಕುಳಿತಿದ್ದಾಗ ಸಿಂಧು ದೇಶದ ವರ್ತಕನೊಬ್ಬನು ರತ್ನಗಳನ್ನು ಕೊಂಡುಕೊಳ್ಳಲು ಅವನಲ್ಲಿಗೆ ಬಂದನು. ಆ ವರ್ತಕನ ಹೆಸರು ಚಿರಂಜೀವಿ. ಆ ಹೆಸರನ್ನು ಕೇಳಿದ ಕೂಡಲೆ ಅಲಿಕಾದರನ ತಲೆಯಲ್ಲಿ ಒಂದು ಆಲೋಚನೆಯು ಹೊಳೆದು, "ನಿಮ್ಮ ಹೆಸರು ಚಿರಂಜೀವಿ ಎನ್ನುತ್ತೀರಿ. ನೀವು ಚಿರಂಜೀವಿಗಳಾಗುವಿರೇ?" ಎಂದು ಕೇಳಿದನು. ವರ್ತಕನಿಗೆ ಅಲಿಕಾದರನ ಮಾತಿನಲ್ಲಿ ಹಾಸ್ಯವು ತೋರಿತು. ಅವನು ಮುಗುಳ್ನಗೆಯಿಂದ "ಹುಟ್ಟಿದವನಿಗೆ ಸಾವು ತಪ್ಪದು. ನಾನು ಚಿರಂಜೀವಿಯಾಗಿರಬೇಕೆಂದು ಆಸೆಪಡುವುದಿಲ್ಲ. ಆದರೆ ನಮ್ಮೂರಲ್ಲಿ ಚಿರಂಜೀವಿಗಳಾದವರ ಹೆಸರನ್ನು ಕೇಳಿದ್ದೇನೆ" ಎಂದನು. ಆ ಮೇಲೆ ಅವನು ಹನುಮಂತ, ವಿಭೀಷಣ, ಅಶ್ವತ್ಥಾಮ ಮೊದಲಾದವರ ಕತೆಗಳನ್ನು ಹೇಳಿದನು, ಆ ಕತೆಗಳನ್ನು ಕೇಳಿ ಅಲಿಕಾದರನಿಗೆ ತಾನೂ ಚಿರಂಜೀವಿಯಾಗಲು ಸಾಧ್ಯವಿದೆ ಎಂದು ತಿಳಿಯಿತು. ಆದರೆ ಯೋಗಾಭ್ಯಾಸಗಳಿಗೆ ಅವನು ಮನಸ್ಸು ಕೊಡಲಾರದಾದನು. ಚಿರಂಜೀವಿಯಾಗಬೇಕೆಂಬ ಉದ್ದೇಶವನ್ನು ಮಾತ್ರ ಅವನು ಬಿಡಲಿಲ್ಲ. ಅದಕ್ಕಾಗಿ ಹಲವು ದಾರಿಗಳನ್ನು ಹುಡುಕತೊಡಗಿದನು.

ಆ ಮೇಲೆ ಅಲಿಕಾದರನು ಅನೇಕ ಮಂತ್ರೌಷಧಗಳ ಪುಸ್ತಕಗಳನ್ನು ತರಿಸಿಕೊಂಡನು. ಅವುಗಳಲ್ಲಿ ಹೇಳಿದ ಹಲವು ತರದ ಗಿಡಮೂಲಿಕೆಗಳನ್ನು ತರಿಸಿ ಸೇವಿಸಿದನು. ಅನೇಕ ಮಂತ್ರ ಯಂತ್ರಗಳನ್ನು ತಯಾರಿಸಿ ಉಪಯೋಗಿಸಿದನು. ಆದರೆ ಮುಪ್ಪು ಮುಂದೆ ಹೋಗಲಿಲ್ಲ. ಅಲಿಕಾದರನ

ಮನಸ್ಸಿನಲ್ಲಿ ಕಳವಳವು ಹೆಚ್ಚಾಯಿತು. ಹೀಗೆ ದಿನಗಳು ಕಳೆದು ಹೋಗುತ್ತಿರಲು ಒಮ್ಮೆ ಸಾಧು ಸಂತರನ್ನೂ ಪಂಡಿತರನ್ನೂ ಮನೆಗೆ ಬರ ಮಾಡಿಕೊಂಡು ಅವರಿಗೆ ಊಟವನ್ನಿಕ್ಕಿದನು ಊಟದ ನಂತರ ಚಿರಂಜೀವಿ ಯಾಗಲುಪಾಯವನ್ನು ತಿಳಿಸಬೇಕೆಂದು ಅವರಲ್ಲಿ ಅಲಿಕಾದರನು ಬಿನ್ನೈಸಿಕೊಂಡನು. ಅಲಿಕಾದರನ ಮಾತು ಕೇಳಿ ಅವರ ಮೋರೆಯಲ್ಲಿ ನಗುವೇ ತೋರಿತು. "ಮರಣವನ್ನು ಜಯಿಸಬಲ್ಲವರು ಯಾರೂ ಹುಟ್ಟಿಲ್ಲ" ಎಂದು ಅನೇಕರು ಹೇಳಿದರು. ಆದರೆ ಅವರಲ್ಲಿ ಹಿರಿಯನೊಬ್ಬನು ಮಾತ್ರ "ಪ್ರಾಣಕೂಪದ ನೀರನ್ನು ಕುಡಿದರೆ ಮೃತ್ಯುವನ್ನು ಜಯಿಸ ಬಹುದಂತೆ" ಎಂದನು. ಆ ಹಿರಿಯನ ಮಾತನ್ನು ಕೇಳಿದ ಕೂಡಲೆ ಅಲಿ ಕಾದರನ ಹೃದಯನಾಡಿಗಳಲ್ಲಿ ರಕ್ತವು ವೇಗವಾಗಿ ಹರಿಯತೊಡಗಿತು. ಅವನು ಸಂತೋಷದ ಸಾಗರದಲ್ಲಿ ತೇಲಾಡಿದನು. ಒಡನೆ ಅವನು ಆ ಹಿರಿಯ ಸಂತನಿಗೆ ನಮಸ್ಕರಿಸಿ, ಆ ಪ್ರಾಣಕೂಪದ ವಿವರವನ್ನೂ ಅಲ್ಲಿಗೆ ಹೋಗಲು ದಾರಿಯನ್ನೂ ತಿಳಿಸಬೇಕೆಂದು ಕೇಳಿಕೊಂಡನು.

ಆಗ ಆ ವೃದ್ಧನು ಹೀಗೆಂದನು:—"ಅಲಿಕಾದರ, ನಿನ್ನ ಬಯಕೆಯು ವಿಚಿತ್ರವಾದುದು! ಅಲ್ಲಿಗೆ ಹೋದವರ ವಿಷಯ ಮಾತ್ರ ಕೇಳಿದ್ದೇನಲ್ಲದೆ ಅಲ್ಲಿಂದ ಬಂದವರ ವಿಷಯ ಕೇಳಲಿಲ್ಲ. ದಾರಿಯಲ್ಲಿ ದೊಡ್ಡ ಮರು ಭೂಮಿಗಳಿವೆಯಂತೆ. ಅಲ್ಲಿ ದೊಡ್ಡ ಸರ್ಪಗಳು ಇವೆಯಂತೆ. ಆ ಮರು ಭೂಮಿಗಳನ್ನು ದಾಟಿದರೆ ಮುಂದೆ ಒಂದು ಉನ್ನತವಾದ ಪರ್ವತ ವಿದೆ. ಆ ಪರ್ವತ ದಾಟಿದರೆ ಮುಂದೆ ಒಂದು ದೊಡ್ಡ ಹೊಳೆ, ಹೊಳೆ ಯೋ ಕ್ರೂರವಾದ ಮೊಸಳೆಗಳ ತವರ್ಮನೆ. ಅವನ್ನು ದಾಟಿದರೆ ಒಂದು ಪರ್ವತ ಶಿಖರ, ಆ ಶಿಖರದ ಊರ್ಧ್ವ ಭಾಗದಲ್ಲಿ ಒಂದು ಗುಹೆ. ಆ ಗುಹೆಯೋ ಪ್ರಾಣಕೂಪದ ಹಾದಿ. ಆ ಹಾದಿಯಲ್ಲಿ ಮಹೋರಗಗಳು ಮನೆಮಾಡಿಕೊಂಡಿವೆಯಂತೆ. ಅಲ್ಲಿ ಸೂರ್ಯನ ಬೆಳಕಿಗೆ ಪ್ರವೇಶವೇ ಇಲ್ಲವಂತೆ. ಆ ಕತ್ತಲಲ್ಲಿ ಹಾವುಗಳಿಗೆ ಮಾತ್ರ ಕಣ್ಣು ಕಾಣುವುದಂತೆ. ಆದ್ದರಿಂದ ಪ್ರಾಣಕೂಪಕ್ಕೆ ಹೋಗಲು ಸಾಧ್ಯವಿಲ್ಲವಂತೆ. ಆದರೆ ಅವು ಬೆಳಕಿಗೆ ಮಾತ್ರ ಅಂಜುತ್ತವೆಂದು ಹೇಳುವುದನ್ನು ನಾನು ಕೇಳಿದ್ದೇನೆ" ಎಂದನು.

ಅಲಿಕಾದರನ ಆಸೆಯು ಚಿಗುರಿತು. ವಿವರವನ್ನೆಲ್ಲಾ ಕೇಳಿ "ಆ ಹಾವುಗಳು ಬೆಳಕಿಗೆ ಹೆದರುವುದಾದರೆ ಒಂದು ಕೈದೀಪವನ್ನು ಹಿಡಿದು ಕೊಂಡು ಹೋಗಲು ಸಾಧ್ಯವಿಲ್ಲವೇ" ಎಂದು ಕೇಳಿದನು. ಮುದುಕನು, "ಇಲ್ಲ, ಇಲ್ಲ. ಗಾಳಿಯು ಅಲ್ಲಿ ಬಿರುಸಾಗಿ ಬೀಸುತ್ತಿದೆಯಂತೆ. ದೀಪಗಳು ನೊಂದಿಹೋಗುವುವಂತೆ. ತಿರುಗಿ ದೀಪ ಹಚ್ಚುವುದರೊಳಗಾಗಿ ಹಾವು ಗಳು ದಾರಿಗರನ್ನು ಮುತ್ತಿ ಕಚ್ಚಿಕೊಂಡು ಬಿಡುವವಂತೆ" ಎಂದನು. ಆ ಮೇಲೆ ನೆರೆದ ಅತಿಥಿಗಳನ್ನು ಬೀಳ್ಕೊಟ್ಟು ಊರ ಯುವಕರನ್ನು ಬರಮಾಡಿ ಕೊಂಡು ಸಾವಿರ ಚಿನ್ನದ ನಾಣ್ಯಗಳನ್ನು ಅವರ ಮುಂದಿಟ್ಟು ಪ್ರಾಣ ಕೂಪದ ನೀರನ್ನು ತರುವವರು ಹಣವನ್ನೆತ್ತಿಕೊಂಡು ಹೋಗಬಹು ದೆಂದನು. ಆದರೆ ಪ್ರಾಣಕೂಪದ ವಿವರವನ್ನು ಕೇಳಿ ಬಂದ ಯುವಕರೆ ಲ್ಲರೂ ಹಣವನ್ನು ಬಿಟ್ಟು ತಮ್ಮ ಮನೆಗೆ ನಡೆದರು. ಅಲಿಕಾದರನ ಚಿಂತೆಯು ಅಂತ್ಯವನ್ನು ಕಾಣದಾಯಿತು.

ದಿನಗಳುರುಳಿದುವು. ತಿಂಗಳುಗಳು ಕಳೆದವು. ಅಲಿಕಾದರನು ತನ್ನ ಚಿಂತೆಗೆ ವಿಮೋಚನೆಯನ್ನೇ ಕಾಣದಾದನು. ಹೀಗೆ ಒಂದು ವರ್ಷ ಕಳೆ ಯಲು ಒಂದು ದಿನ ಬೆಳಗ್ಗೆ ಒಬ್ಬ ವ್ಯಾಪಾರಿಯು ಅವನ ಅಂಗಡಿಗೆ ಬಂದನು. ಕುಶಲಪ್ರಶ್ನೆಗಳಾದ ಮೇಲೆ ಅಲಿಕಾದರನು ವ್ಯಾಪಾರಿಗೆ ತನ್ನ ಅಂಗಡಿಯಲ್ಲಿದ್ದ ನವರತ್ನಗಳನ್ನು ತೋರಿಸಿದನು. ಆ ಪರಿಚಿತ ವ್ಯಕ್ತಿಯು ಅಲಿಕಾದರನ ರತ್ನಸಂಗ್ರಹವನ್ನೆಲ್ಲಾ ನೋಡಿದನಂತರ ತನ್ನಲ್ಲಿದ್ದ ವಜ್ರ ವೊಂದನ್ನು ಮಾರಲು ತಾನು ಬಂದವನೆಂದು ಹೇಳಿದನು. ಅಲಿಕಾದರನಿಗೆ ವಜ್ರ ಬೇಕಾಗಿರಲಿಲ್ಲ. ತಾನು ವಜ್ರಗಳನ್ನು ಕೊಂಡುಕೊಳ್ಳಲಿಚ್ಛಿಸುವು ದಿಲ್ಲವೆಂದು ಅವನು ಹೇಳಿದನು. ಆಗ ಆ ವ್ಯಾಪಾರಿಯ ಮೋರೆ ಸಪ್ಪೆ ಯಾಯಿತು. ಸ್ವಲ್ಪ ತಡೆದು ಅವನು ಅಲಿಕಾದರನನ್ನು ಅಂಗಡಿಯ ಒಂದು ಕೋಣೆಗೆ ಕರೆದೊಯ್ದು ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿ ತನ್ನ ಅಂಗಿ ಯೊಳಗೆ ಬಚ್ಚಿಟ್ಟಿದ್ದ ಒಂದು ವಜ್ರವನ್ನು ತೆಗೆದು ಆ ಕತ್ತಲು ಕೋಣೆಯ ನೆಲದ ಮೇಲೆ ಇಟ್ಟನು. ಕೂಡಲೇ ಸೂರ್ಯನೇ ಕೋಣೆಯಲ್ಲಿ ಉದಯಿ ಸಿದಂತೆ ವಜ್ರದ ಬೆಳಕು ಕೋಣೆಯನ್ನು ಪ್ರಕಾಶಮಾನವಾಗಿ ಮಾಡಿತು. ಇದನ್ನು ನೋಡಿ ಅಲಿಕಾದರನಿಗೆ ಆಶ್ಚರ್ಯ! ಅವನ ಮೋರೆಯೂ ಅರ

ಳಿತು:—"ನಾನಿಷ್ಟು ಪ್ರಕಾಶವುಳ್ಳ ವಜ್ರವನ್ನೆಂದೂ ನೋಡಿಲ್ಲ, ನಿನಗೆಲ್ಲಿ ಸಿಕ್ಕಿತು" ಎಂದು ಅವನು ವ್ಯಾಪಾರಿಯನ್ನು ಕೇಳಿದನು. ಅದಕ್ಕೆ ವ್ಯಾಪಾರಿಯು "ನಾನಿದೆಲ್ಲಿ ಸಿಕ್ಕಿತೆಂದು ಹೇಳಲಾರೆ. ನಾನಿದನ್ನು ಕದ್ದುಕೊಂಡು ಬರಲಿಲ್ಲ, ಎಂದು ಮಾತ್ರ ಹೇಳಬಲ್ಲೆ. ಇದರ ಹೆಸರು ಜ್ಞಾನದೀಪ. ಪೂರ್ವದಲ್ಲಿ ಇದು ಪಿತಾಮಹನ ಕೈಯಲ್ಲಿತ್ತು. ಅದನ್ನು ಪೂಜ್ಯ ಪಿತಾಮಹ ಆದಮನು ಸ್ವರ್ಗ ಸದೃಶವಾದ ಈಡನ್ ತೋಟದಲ್ಲಿ ಪಡೆದನು. ಅದರ ಬೆಳಕು ಎಂದಿಗೂ ನಂದಲಾರದು. ಇದು ಯಾರ ಕೈಯಲ್ಲಿರುವುದೋ ಅವರು ಎಲ್ಲಾ ಅಪಾಯಗಳಿಂದ ರಕ್ಷಿಸಲ್ಪಡುವರು. ಅವರಿಗೆ ಅನ್ನಾಹಾರಗಳ ಕೊರತೆಯಿರದು, ಶತ್ರುಗಳ ಭಯವುಂಟಾಗದು; ಕ್ರೂರ ಮೃಗಗಳೂ, ವಿಷ ಜಂತುಗಳೂ. ಅವರಿಗೆ ಅಪಾಯವನ್ನುಂಟುಮಾಡವು. ದೇವತೆಗಳೂ ಅವರಿಗೊಲಿದು ಅವರು ಹೇಳಿದ ಕೆಲಸಗಳನ್ನು ಮಾಡುವರು. ನಿನಗಿದು ಬೇಕೆ?" ಎಂದನು.

ಕೂಡಲೇ ಆಲಿಕಾದರನಿಗೆ ಪ್ರಾಣಕೂಪದ ನೆನಪಾಯಿತು. ಪ್ರಾಣಕೂಪದ ಕಗ್ಗವಿಯಲ್ಲಿ ದಾರಿ ನಡೆಯಲು ಬೆಳಕನ್ನು ಕೊಡುವುದಲ್ಲದೆ ವಿಷ ಸರ್ಪಗಳನ್ನು ಓಡಿಸಲು ಅದು ಸಹಾಯಕವಾಗುವುದೆಂದು ಅವನು ಊಹಿಸಿದನು. ಒಡನೆ ಕೋಣೆಯ ಬಾಗಿಲುಗಳನ್ನೆಲ್ಲಾ ತೆರೆದು ಅಪರಿಚಿತನನ್ನು ಉತ್ತಮವಾದ ಆಸನದಲಿ ಕುಳ್ಳಿರಿಸಿ ಅದರ ಕ್ರಯವೆಷ್ಟೆಂದು ಕೇಳಿದನು. ಆ ಅಪರಿಚಿತನು—"ಆಲಿಕಾದರ, ಇದಕ್ಕೆ ಬೆಲೆ ಕಟ್ಟಿದವರಿಲ್ಲ. ಇದು ರಾಜನಿಗೆ ಬೇಕಾಗಿದ್ದರೆ ಇಡೀ ರಾಜ್ಯವನ್ನೇ ಬೆಲೆಯಾಗಿ ತೆಗೆದುಕೊಳ್ಳುತ್ತಿದ್ದೆನು. ಆದರೆ ನೀನು ರಾಜನಲ್ಲ. ನೀನು ಕೋಟ್ಯಾಧೀಶ. ನಿನಗೀ ರತ್ನ ಬೇಕಾದರೆ ನಿನ್ನ ಮನೆ, ಭೂಮಿ, ಚಿನ್ನ ಬೆಳ್ಳಿ, ಮುತ್ತು, ರತ್ನ ಆಳುಕಾಳುಗಳನ್ನೆಲ್ಲವನ್ನೂ ಕೊಡಬೇಕು" ಎಂದನು.

ಆಲಿಕಾದರನು ಈ ವ್ಯವಹಾರವನ್ನು ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಬೆಲೆಯನ್ನು ಕೇಳಿ ಅವನು ವಿಸ್ಮಿತನಾದನು. "ಈ ವಜ್ರವನ್ನು ಕೊಂಡುಕೊಂಡರೆ ನನಗೆ ಮುಂದೆ ಭಿಕ್ಷಾನ್ನವೇ ಗತಿ" ಎಂದನು. "ಯಾಕೆ? ನೀನು ಭೂಲೋಕದ ಕುಬೇರನಾಗುವೆ. ನೀನು ಮಕ್ಕಾ ಪಟ್ಟಣವನ್ನು ಬಿಟ್ಟು ಯಾತ್ರೆ ಮಾಡಬಹುದು" ಎಂದು ಆ ಪರಿಚಿತನು ಹೇಳಿದನು. ಸ್ವಲ್ಪ

ಕಾಲ ಚೌಕಸಿ ಮಾಡಿದರೂ, ರತ್ನದ ಒಡೆಯನು ಒಪ್ಪದಿರಲು, ಉಪಾಯವಿಲ್ಲದೆ ಅಲಿಕಾದರನು ತನ್ನ ಆಸ್ತಿಯನ್ನೆಲ್ಲಾ ಅವನಿಗೆ ಕೊಟ್ಟು, ವಜ್ರವನ್ನು ತೆಗೆದುಕೊಂಡನು. ಆಸ್ತಿ ಕೈವಶವಾದ ಕೂಡಲೇ ಆ ವಜ್ರವ್ಯಾಪಾರಿಯು ಅಲಿಕಾದರನನ್ನು ಮನೆಯಿಂದ ಹೊರದೂಡಿದನು. "ನಾನೀಗ ಈ ಮನೆಯ ಒಡೆಯ ನಿನಗೆ ಇಲ್ಲಿ ಸ್ಥಳವಿಲ್ಲ" ಎಂದು ಬಿಟ್ಟನು.

ಆ ಮೇಲೆ ಅಲಿಕಾದರನು ನಗರದ ಪಶ್ಚಿಮ ದ್ವಾರದ ಕಡೆಗೆ ಹೋದನು. ಜನರಿಗೆ ಅವನ ಉದ್ದೇಶವು ತಿಳಿದು ಅವನನ್ನು ನೋಡಿ ನಗಲಾರಂಭಿಸಿದರು, ಕೆಲವರು ಅವನಿಗೆ ನಮಸ್ಕರಿಸಿದರು. ಅವನು ಜನರ ಹಾಸ್ಯ ನಗು ನಮಸ್ಕಾರ ಇತ್ಯಾದಿಗಳಿಗೆ ಮನಸ್ಸು ಕೊಡದೆ ಊರನ್ನು ಬಿಟ್ಟುಹೋಗುವ ನಿಶ್ಚಯ ಮಾಡಿಕೊಂಡು ಓಡಲಾರಂಭಿಸಿದನು. ಇದನ್ನು ನೋಡಿ ಜನರು "ಅಲಿಕಾದರನಿಗೆ ಹುಚ್ಚು ಹಿಡಿದಿದೆ"ಯೆಂದುಕೊಂಡರು. ಆದರೆ ಅಲಿಕಾದರ ಅವರ ಮಾತುಗಳನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವನು ಒಂದೇ ಸವನೆ ಓಡಹತ್ತಿದನು. ನಗರವನ್ನು ದಾಟಿದನು ಮರುಭೂಮಿಯನ್ನು ಸೇರಿದನು. ಸೂರ್ಯನು ನಡುನೆತ್ತಿಗೇರಿದನು. ಆದರೂ ಅಲಿಕಾದರನ ಕಾಲುಗಳಿಗೆ ಬಿಡುವೇ ಇಲ್ಲ, ಅವನಿಗೆ ಅನ್ನನೀರು ಯಾವುದೂ ಬೇಕಾಗಿರಲಿಲ್ಲ. ದಣಿವೂ ಆಯಾಸವೂ ಅವನನ್ನು ತಡೆಯಲಿಲ್ಲ. ಹೀಗೆಯೇ ಓಡಿ ಬಹಳ ದೂರ ಹೋದ ಮೇಲೆ ಸೂರ್ಯನು ಪಡುಗಡಲನ್ನು ಸೇರಿದನು. ಕತ್ತಲೆಯು ಭೂಮಿಯನ್ನು ಮುಸುಕಿತು.

ಆಗ ಅವನು ನಿಂತು ತನ್ನೊಳಗೆ ತಾನೇ ಆಲೋಚಿಸಿದನು; "ನನ್ನ ಆಸ್ತಿಯನ್ನೆಲ್ಲಾ ಈ ಬೆಲೆಯಿಲ್ಲದ ವಜ್ರಕ್ಕಾಗಿ ಕಳೆದುಕೊಂಡೆನು, ನಾನು ಹುಚ್ಚನೇ ಸರಿ" ಅವನಿಗಾಗ ಹಸಿವು ಬಾಯಾರಿಕೆಗಳ ಬಾಧೆಯು ತಟ್ಟಿತು. ಕಾಲುಗಳು ನೋಯತೊಡಗಿದುವು. ಆಯಾಸವೂ ಹೆಚ್ಚಾಯಿತು. ಮಳಲಿನ ಮೇಲೆ ಕುಳಿತು ಮನಸ್ಸಿನಲ್ಲಿಯೇ ತನ್ನ ಹುಚ್ಚುತನವನ್ನು ಆಲೋಚಿಸಿ ಕಣ್ಣೀರು ಸುರಿಸಲಾರಂಭಿಸಿದನು. "ಅಯ್ಯೋ ಆ ಅಪರಿಚಿತನು ಬಂದು ನನ್ನನ್ನು ಮರುಳುಮಾಡಿ ನನ್ನ ಆಸ್ತಿಯನ್ನೆಲ್ಲಾ ಸೆಳೆಕೊಂಡನು. ನಾನು ನಿಲ್ಲಲು ನೆಲೆಯಿಲ್ಲದ ಮರುಳ್ಗಾಡಿನಲ್ಲಿ ಅಲೆಯಬೇಕಾಯಿತಲ್ಲ. ಇನ್ನೇನು ಗತಿ? ನನ್ನ ಮೂಢತನದಿಂದಾಗಿ ನಾನೀಗ ಸಾಯಬೇಕಾದ

ಪ್ರಸಂಗವೊದಗಿತಲ್ಲ! ನನಗೀಗಿಷ್ಟು ಆಹಾರ, ನೀರು, ಈ ರಾತ್ರಿ ಕಳೆಯಲು ಒಂದು ಡೇರೆ ಸಿಕ್ಕಿದ್ದರೆ ಚೆನ್ನಾಗಿತ್ತು” ಎಂದು ತನ್ನಷ್ಟಕ್ಕೆ ಅಂದುಕೊಂಡನು.

ಆಶ್ಚರ್ಯ! ಕೂಡಲೇ ಒಬ್ಬ ಮನುಷ್ಯನು ಬಂದು ಅವನ ಹೆಗಲ ಮೇಲೆ ಕೈಯಿಟ್ಟನು. ಆಲಿಕಾದರನ ಎದೆಯು ಡಬಡಬನೆ ಹೊಡೆಯಿತು. ಅವನು ಕತ್ತೆತ್ತಿ ನೋಡಲು:—“ನಾನು ನಿಮ್ಮ ಸೇವಕ, ನನ್ನ ಸಂಗಡ ಬನ್ನಿ ನಿಮಗೆ ಬೇಕಾದುದನ್ನು ಕೊಡುವೆನು” ಎಂದು ಆ ಮನುಷ್ಯನು ಹೇಳಿದನು. ಆಲಿಕಾದರನಿಗೆ ಹಸಿವೂ ಆಯಾಸವೂ ಹೆಚ್ಚಾಗಿದ್ದುದರಿಂದ ಬಂದ ಮನುಷ್ಯನ ಪೂರ್ವೋತ್ತರಗಳನ್ನು ವಿಚಾರಿಸದೆ ಅವನನ್ನು ಹಿಂಬಾಲಿಸಿದನು.

ಮುಂದೆ ಒಂದು ಗುಹೆ. ಆ ಗುಹೆಯನ್ನು ಒಳಹೊಕ್ಕು ನೋಡಲು ಅಲ್ಲಿ ಒಂದು ಮೇಜು. ಅದರ ಮೇಲೆ ಬೇಕಾದ ತಿಂಡಿತೀರ್ಥವಿತ್ತು. “ಇವೆಲ್ಲವೂ ನಿಮ್ಮನ್ನು ಕಾಯುತ್ತಿವೆ” ಎಂದು ಆ ಮನುಷ್ಯನು ಮೇಜನ್ನು ತೋರಿಸಿ ಹೇಳಿದನು. ಅಷ್ಟರಲ್ಲಿ ಸೇವಕನೊಬ್ಬನು ಬಂದು ಆಲಿಕಾದರನ ಕಾಲುಗಳನ್ನು ತೊಳೆದನು. ಇನ್ನೊಬ್ಬನು ಮಧುಪಾನವನ್ನು ಅವನ ಮುಂದಿಟ್ಟನು. ಆಲಿಕಾದರನು ಅದನ್ನು ಕುಡಿದು ದಣಿವಾರಿಸಿಕೊಂಡು ಊಟಮಾಡಿ, ಅಲ್ಲೇ ಇದ್ದ ಹಂಸತೂಲಿಕಾತಲ್ಪದ ಮೇಲೆ ಮಲಗಿ ನಿದ್ದೆ ಹೋದನು.

ಮರುದಿನ ಎಚ್ಚತ್ತು ನೋಡಲು ಹಿಂದಿನ ದಿವಸದ ಗುಹೆ ಕಾಣಲೇ ಇಲ್ಲ. ತಾನು ತುದಿಮೊದಲಿಲ್ಲದ ಮಡಳ್ಗಾಡಿನಲ್ಲಿದ್ದುದು ಮಾತ್ರ ಅವನಿಗೆ ಗೋಚರವಾಯಿತು. “ನಾನು ಕನವರಿಸುತ್ತಿದ್ದೇನೆ” ಎಂದಂದುಕೊಂಡನು. ಹಿಂದಿನ ದಿವಸದ ಭೂರಿಭೋಜನವನ್ನಾಲೋಚಿಸಿ ಬಾಯಲ್ಲಿ ನೀರು ತಂದುಕೊಂಡನು. “ಈಗ ನನಗೆ ಸ್ವಲ್ಪ ನೀರೂ ಆಹಾರವೂ ಸಿಕ್ಕಿದರೆ” ಎಂದು ಹೇಳಿ ಅವನು ಅತ್ತಿತ್ತ ನೋಡಿದನು. ಅಷ್ಟರಲ್ಲಿ ಅವನ ಪಕ್ಕದಲ್ಲೇ ಒಂದು ಬಂಡೆಕಲ್ಲಿನ ಮೇಲೆ ಒಂದು ಪಾತ್ರೆ ತುಂಬಾ ನೀರೂ, ಒಂದು ಸರ ಅಂಜೂರ ಕಾಣಬಂದುವು. ಆಲಿಕಾದರನಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ! ಅವನು ಹಣ್ಣು ತಿಂದು ನೀರನ್ನು ಕುಡಿದು ಹಸಿವನ್ನಿಂಗಿಸಿಕೊಂಡನು. ಕೂಡಲೇ ಅವನ ಮನಸ್ಸಿಗೆ ಥಟ್ಟನೆ ಹೊಳೆಯಿತು—“ಇದೆಲ್ಲವೂ ವಜ್ರದ ಪ್ರಭಾವವೆಂದು ಕಾಣುತ್ತದೆ. ಆ ಮನುಷ್ಯನೂ ಹೇಳಿದ್ದ!

ವಜ್ರದಿಂದ ಬೇಕಾದುದೆಲ್ಲವೂ ಸಿಗುತ್ತದೆ” ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡನು.

ಆ ಮೇಲೆ ತನ್ನ ಊಹನೆ ಸರಿಯಾದುದೋ ಎಂದು ಪರೀಕ್ಷೆ ಮಾಡಿ ನೋಡಲು ಆಲೋಚಿಸಿ, ವಜ್ರವನ್ನು ಬಲಗೈಯಲ್ಲಿ ಹಿಡಿದು ಆಲಿಕಾದರನು—“ನನಗೊಂದು ಒಂಟೆಯೂ, ಸಾಕಷ್ಟು ಮಂದಿ ಆಳುಗಳೂ ಬೇಕು” ಎಂದು ಹೇಳಿದನು. ತಕ್ಷಣವೇ ಒಬ್ಬ ಮನುಷ್ಯನು ಒಂಟೆಯನ್ನೇರಿ ಬಂದು, ಅವನ ಮುಂದೆ ನಿಂತು—“ಸ್ವಾಮಿ, ನಾನು ತಮ್ಮ ಸೇವಕ, ತಮಗೆಷ್ಟು ಮಂದಿ ಪರಿಚಾರಕರನ್ನು ಕರೆತರಲಿ?” ಎಂದು ಕೇಳಿದನು.

ಆಲಿಕಾದರನ ಸಂತೋಷಕ್ಕೆ ಮೇರೆಯೇ ಇಲ್ಲ. ನನಗೆ ದಾರಿಯಲ್ಲಿ ಕಳ್ಳಕಾಕರಿಂದಲೂ, ದುಷ್ಟ ಮೃಗಗಳಿಂದಲೂ ಕಾಪಾಡಿಕೊಳ್ಳಲು ತಕ್ಕಷ್ಟು ಮಂದಿ ಇದ್ದರೆ ಸಾಕು” ಎಂದು ಅವನು ಹೇಳಿದನು. ಆ ಸೇವಕನು ಕೂಡಲೇ ಮೂರು ಸಾರಿ ಕೈಚಪ್ಪಾಳೆ ಹೊಡೆದನು. ತಕ್ಷಣವೇ ಅಲ್ಲಿ ಮೂವರು ಒಂಟೆಗಳ ಮೇಲೇರಿ ಬಂದು ಆಲಿಕಾದರನಿಗೆ ನಮಸ್ಕಾರ ಮಾಡಿ—“ಜೀಯಾ ನಮ್ಮ ಪ್ರಯಾಣ ಎತ್ತ ಕಡೆ” ಎಂದು ಕೇಳಿದರು.

ನಾನು ಪ್ರಾಣಕೂಪವಿರುವ ದೇಶಕ್ಕೆ ಹೊರಟಿರುವೆನು” ಎಂದು ಆಲಿಕಾದರ ಸುಮ್ಮಾನದಿಂದ ಹೇಳಿದನು. ಅವರು “ಜೀಯಾ ತಮ್ಮನ್ನು ಆ ದೇಶಕ್ಕೆ ಕರೆದೊಯ್ಯುವೆವು; ಆದರೆ ಅಲ್ಲಿ ಕತ್ತಲಿನ ಹಾದಿ ಇದೆ. ಆ ಹಾದಿಯಾಗಿ ತಾವೊಬ್ಬರೇ ಹೋಗಬೇಕು. ನಾವು ತಮ್ಮನ್ನು ಆ ಹಾದಿಯ ಬಳಿ ಬಿಟ್ಟುಬಿಡುತ್ತೇವೆ” ಎಂದರು. “ಹಾಗೆಯೇ ಆಗಲಿ” ಎಂದು ಆಲಿಕಾದರನು ಹೇಳಿದನು. ಸೈನಿಕರು ತಮ್ಮ ಒಂಟೆಗಳ ತಲೆಗಳನ್ನು ಆ ಕಡೆಗೆ ತಿರುಗಿಸಿದರು. ಮೊದಲು ಬಂದ ಸವಾರನು ತನ್ನ ಒಂಟೆಯನ್ನು ಬಗ್ಗಿಸಿ, ಆಲಿಕಾದರನನ್ನು ಅದರ ಬೆನ್ನ ಮೇಲೆ ಕುಳ್ಳಿರಿಸಿಕೊಂಡನು. ಎಲ್ಲರೂ ಪ್ರಾಣಕೂಪದ ಕಡೆಗೆ ಪಯಣ ಬೆಳಸಿದರು.

ಆಲಿಕಾದರನಿಗೆ ತನ್ನ ಉದ್ದೇಶವು ನೆರವೇರುವುದೆಂದು ನಿಶ್ಚಯವಾಯಿತು. ಆರು ಹಗಲು ಆರು ರಾತ್ರಿಗಳನ್ನು ಅವನು ಪಯಣದಲ್ಲಿಯೇ ಕಳೆದನು. ದಾರಿಯಲ್ಲಿ ತೊಂದರೆಗಳೇನೂ ತೋರಲಿಲ್ಲ. ಪ್ರತಿದಿನ ಸಾಯಂಕಾಲ ಆತನಿಗೂ ಆತನ ಪರಿವಾರಕ್ಕೂ ಬೇಕಾದ ತಿಂಡಿತಿನಿಸು

ಗಳೂ, ಪಾನೀಯಾದಿಗಳೂ, ಮಲಗಲು ಮಂಚ ಹಾಸಿಗೆಗಳೂ, ಡೇರೆಗಳೂ ಸಿದ್ಧವಾಗುತ್ತಿದ್ದವು. ಮರುದಿನ ಬೆಳಿಗ್ಗೆ ಅವು ಮಾಯವಾಗಿ ಹೋಗುತ್ತಿದ್ದವು. ಏಳನೆಯ ದಿನ ಕತ್ತಲಾಗುತ್ತಾ ಬರುವಾಗ ಅವನು ಒಂದು ದೊಡ್ಡ ಪರ್ವತವನ್ನು ಕಂಡನು. ಅದರ ಶಿಖರಗಳು ಆಕಾಶವನ್ನು ಮುಟ್ಟುವಂತೆ ತೋರುತ್ತಿದ್ದವು. ಅವನು ಪರ್ವತದ ತಪ್ಪಲನ್ನು ಸೇರಿದಾಗ ಸಿಂಹ ಗರ್ಜನೆ ಕೇಳಿಸಿತು. ಅದನ್ನು ಕೇಳಿ ಅವನ ಪರಿವಾರದ ಜನರಿಗೆ ಹೆದರಿಕೆಯಾಯಿತು. ಇದನ್ನು ನೋಡಿ ಅವನು—"ಈ ಸಿಂಹ ಗರ್ಜನೆ ಒಡನೆ ನಿಲ್ಲಲಿ" ಎಂದು ವಜ್ರವನ್ನು ಕೈಯಲ್ಲಿ ಹಿಡಿದು ಹೇಳಲು ಕೂಡಲೆ ಆ ಪ್ರದೇಶವೆಲ್ಲಾ ನಿಶ್ಶಬ್ದವಾಯಿತು. ಎಂದಿನಂತೆ ಆ ದಿನ ಸಾಯಂಕಾಲ ಸಿದ್ಧವಾಗಿದ್ದ ಡೇರೆಯನ್ನು ಹೊಕ್ಕು, ಊಟಮಾಡಿ ಮಲಗಿದನು. ಆದರೆ ಆ ಪರ್ವತವನ್ನು ದಾಟಿ ಹೋಗುವ ಬಗೆ ಹೇಗೆಂದು ಆಲೋಚನೆಯಿಂದ ಬಹಳ ಹೊತ್ತು ನಿದ್ದೆಯೇ ಬರಲಿಲ್ಲ. ಅವನು ಸೇವಕನನ್ನು ಕರೆದು ತನ್ನ ಆಲೋಚನೆಗೆ ಕಾರಣವನ್ನು ತಿಳಿಸಿದನು. ಸೇವಕನು "ಆಲೋಚನೆ ಮಾಡುವುದು ಅಗತ್ಯವಿಲ್ಲ, ನಾಳೆ ಬೆಳಿಗ್ಗೆ ತಕ್ಕ ಉಪಾಯ ಹುಡುಕಬಹುದು" ಎಂದನು. ಮರುದಿನ ಅಲಿಕಾದರನು ಎಚ್ಚರಿಯಲು ಸೇವಕನು ಅವನ ಮುಂದೆ ನಿಂತು "ಪಕ್ಷಿಗಳನ್ನು ಕರೆದರೆ ಈ ಉನ್ನತವಾದ ಪರ್ವತವನ್ನು ದಾಟಿ ಹೋಗಬಹುದು" ಎಂದನು. ಅಲಿಕಾದರನು ಆಗಲೇ ವಜ್ರವನ್ನು ಕೈಗೆತ್ತಿಕೊಂಡು ಪಕ್ಷಿಗಳನ್ನು ಕರೆದನು. ಕೂಡಲೇ ಸೂರ್ಯನ ಕಿರಣಗಳು ಮರೆಯಾದುವು. ಕತ್ತಲು ಆ ಪ್ರದೇಶದಲ್ಲಿ ಹಬ್ಬಿದಂತೆ ತೋರಿತ್ತು. ಆಕಾಶದಲ್ಲಿ ಒಂದು ತರದ ಪಕ್ಷಿ ಸಮೂಹವು ಸೇರಿತು. ಆ ಪಕ್ಷಿಗಳ ರೆಕ್ಕೆಯೊಂದೊಂದು, ಒಂದು ನೂರು ಗಜ ಉದ್ದವಿತ್ತು. ಅವು ನೆಲದ ಮೇಲೆ ಬಂದು ಕುಳಿತುವು. ಅಲಿಕಾದರನು ತನ್ನ ಪರಿವಾರದೊಡನೆ ಪಕ್ಷಿಗಳ ಬೆನ್ನ ಮೇಲೆ ಕುಳಿತುಕೊಂಡನು. ಪಕ್ಷಿಗಳು ಆಕಾಶಕ್ಕೆ ಹಾರಿದುವು; ಮುಗಿಲನ್ನು ಮುಟ್ಟಿದುವು; ವಾಯುವೇಗದಿಂದ ಪರ್ವತವನ್ನು ದಾಟಿ ಹಾರಿಹೋಗಿ ಮುಂದೆ ಅಡ್ಡವಾಗಿ ಹರಿಯುತ್ತಿದ್ದ ಒಂದು ದೊಡ್ಡ ನದಿಯ ದಡದಲ್ಲಿಳಿದುವು. ಆಗ ಸೇವಕನು "ಈ ಹಕ್ಕಿಗಳಿಗೆ ಈ ನದಿಯನ್ನು ದಾಟಲು ಸಾಧ್ಯವಿಲ್ಲ. ಬೇರೆ ಉಪಾಯವನ್ನು ಮಾಡಬೇಕಾ

ಗಿಡೆ" ಎಂದನು. ಪಕ್ಷಿಗಳು ಆ ಮೇಲೆ ಹಿಂದೆ ಹಾರಿಹೋದವು.

ಆ ನದಿಯಲ್ಲಿ ತುಂಬಾ ಮೊಸಳೆಗಳಿದ್ದುವು. ಅಲಿಕಾದರನನ್ನು ನೋಡಿದ ಕೂಡಲೇ ಅವು ನೀರಿನ ಮೇಲೆ ಬಂದು ತಮ್ಮ ಬಾಲದಿಂದ ನೀರನ್ನೆರಚಿ ಕೋಲಾಹಲವನ್ನು ಮಾಡಿದುವು. ಬಾಯನ್ನು ತೆರೆದು ಆರ್ಭಟಿಸಿದುವು. ಅವುಗಳ ಕ್ರೂರವಾದ ಹಲ್ಲುಗಳನ್ನು ನೋಡಿ ಅಲಿಕಾದರನಿಗೆ ಭಯವಾಯಿತು. ಕೂಡಲೇ ವಜ್ರದ ನೆರವನ್ನು ಬೇಡಿದನು. "ಈ ಮೊಸಳೆಗಳೆಲ್ಲಾ ಮಾಯವಾಗಲಿ; ದೋಣಿಯೊಂದು ಬರಲಿ" ಎಂದು ಅವನು ಹೇಳಿದನು. ಆ ಕ್ಷಣವೇ ಮೊಸಳೆಗಳೆಲ್ಲಾ ಓಡಿಹೋದುವು. ಒಬ್ಬ ಅಂಬಿಗನು ದೋಣಿ ಸಹಿತ ಬಂದು ಅವರನ್ನು ಹೊಳೆ ದಾಟಿಸಿದನು. ಅನಂತರ ನದಿಯ ಮಧ್ಯಕ್ಕೆ ಬಂದು ದೋಣಿ ಸಮೇತ ನೀರಿನಲ್ಲಿ ಮುಳುಗಿ ಕಾಣದಾದನು.

ಈ ಆಶ್ಚರ್ಯಕರವಾದ ನೋಟವನ್ನು ನೋಡಿ ಅಲಿಕಾದರನು ಪರಿಚಾರಕರ ಸಮೇತ ಮುಂದೆ ಶೋಭಿಸುತ್ತಿದ್ದ ಒಂದಾನೊಂದು ಕಟ್ಟಡವಿಯನ್ನು ಹೊಕ್ಕು, ಶೀತಳವಾದ ಛಾಯೆಯಿಂದಲೂ, ಪಕ್ಷಿಗಳ ಮಂಜುಳ ಗಾನದಿಂದಲೂ, ಅರಳಿದ ಹೂಗಳ ಪರಿಮಳದಿಂದಲೂ ತನಗಾದ ದಣಿವನ್ನು ಕಳೆದುಕೊಂಡು ಪರಮಾನಂದ ಭರಿತನಾದನು; ಆ ಅಡವಿಯಲ್ಲಿ ಸಿಕ್ಕಿದ ಹಣ್ಣುಹಂಪಲುಗಳನ್ನು ತಿಂದು, ತಟಾಕಗಳ ತಣ್ಣೀರನ್ನು ಕುಡಿದು ಹಸಿವು ಬಾಯಾರಿಕೆಗಳನ್ನು ಕಳೆದುಕೊಂಡನು. ಅನಂತರ ಅಡವಿಯನ್ನು ದಾಟಿ ಬಯಲು ಸೀಮೆಗೆ ಬಂದನು. ಅಲ್ಲಿ ಶುಭ್ರವಾದ ನೀರಿನಿಂದ ಕಂಗೊಳಿಸುತ್ತಿದ್ದ ಒಂದು ಸರೋವರವು ಕಾಣಸಿಕ್ಕಿತು. ಅಲಿಕಾದರನು ಆ ಸರೋವರದ ಪ್ರದೇಶದ ನೈಸರ್ಗಿಕ ಸೌಂದರ್ಯವನ್ನು ನೋಡಿ ಮೈಮರೆತನು. 'ನಾನು ಇಲ್ಲೇ ನನ್ನ ಜೀವಮಾನವನ್ನು ಕಳೆಯುವುದಾದರೆ–' ಎಂದು ಅವನು ಹೇಳುವಷ್ಟರಲ್ಲಿ ಆತನ ಪರಿಚಾರಕರು ಅವನ ಮುಂದೆ ನಿಂತು "ಜೀಯಾ ನಾವಿನ್ನು ತಮ್ಮ ಸಂಗಡ ಬರಲಾರೆವು" ಎಂದು ಹೇಳಿಬಿಟ್ಟರು. ಆ ಮೇಲೆ ಸರೋವರದ ಬಳಿ ಹೋಗಿ ಸ್ವಲ್ಪ ನೀರನ್ನು ಕುಡಿದರು. ಕೂಡಲೇ ಅವರು ಮತ್ಸ್ಯರೂಪವನ್ನು ತಾಳಿ ನೀರಿಗೆ ಧುಮುಕಿ ಕಾಣದಾದರು.

ಈ ಕೌತುಕವನ್ನು ನೋಡುತ್ತಿದ್ದಂತೆಯೇ ಸೂರ್ಯನು ಪಶ್ಚಿಮಾಂಬುಧಿಯನ್ನು ಸೇರಿದನು. ಕತ್ತಲು ಬಿಡದೆ ಹಬ್ಬಿತು ಕ್ರಿಮಿಕೀಟಾದಿಗಳೂ ಮೃಗಪಕ್ಷಿಗಳೂ ತಂತಮ್ಮ ನಿವಾಸಕ್ಕೈದಿದುವು. ಆ ಪ್ರದೇಶವೆಲ್ಲಾ ನಿಶ್ಶಬ್ದವಾಯಿತು. ಆಲಿಕಾದರನಿಗೆ ಆಗ ಭೀತಿಯು ತಲೆದೋರಿತು. ಅವನು ಪಡುವಣ ದಿಕ್ಕಿಗೆ ಮೋರೆ ಮಾಡಿ ನಿಂತು "ಎನಗೆ ಉಳಕೊಳ್ಳಲು ಮನೆಯೊಂದು ಸಿಕ್ಕಿದರೆ" ಎಂದು ಬಾಯ್ಬಿಟ್ಟು ಹೇಳಲು, ದೂರದಲ್ಲಿ ಮರಗಳ ಮಧ್ಯೆ, ಒಂದು ದೀಪದ ಬೆಳಕು ತೋರಿತು. ಆ ಪ್ರಕಾಶಮಾನವಾದ ಬೆಳಕನ್ನು ಗುರ್ತಿಟ್ಟುಕೊಂಡು ಅವನು ಬೇಗನೆ ಮುಂದೆ ನಡೆಯಲು ಒಂದು ಚಿಕ್ಕ ಗುಡಿಸಲು ಕಾಣಸಿಕ್ಕಿತು. ಆಲಿಕಾದರನು ಸಂತೋಷದಿಂದ ಆ ಗುಡಿಸಲಿನ ಬಳಿ ಸೇರಲು, ಒಬ್ಬ ಮುದುಕನು ಗುಡಿಸಲಿನೊಳಗಿನಿಂದ ಬಂದು, ಅವನನ್ನು ಬಹಳ ಆದರದಿಂದ ಬರಮಾಡಿಕೊಂಡನು. ಆ ಮೇಲೆ ಆಲಿಕಾದರನಿಗೆ ಯೋಗ್ಯ ಅತಿಥಿ ಸತ್ಕಾರವು ನಡೆಯಿತು. ಊಟವಾದ ನಂತರ ಆ ಮುದುಕನು ಆಲಿಕಾದರನ ಪೂರ್ವ ವೃತ್ತಾಂತವನ್ನು ಕೇಳಬಯಸಿದನು. ಆಲಿಕಾದರನ್ನು ತನ್ನ ಬಯಕೆಯನ್ನೂ, ತನ್ನ ವ್ಯಾಪಾರ ವಹಿವಾಟುಗಳ ವಿಷಯವನ್ನೂ ಆಮೂಲಾಗ್ರವಾಗಿ ಚಾ, ಚೂ ತಪ್ಪದೆ ಹೇಳಿದನು. ಆ ಮುಪ್ಪಿನವನು ಅವನ ಕತೆಯನ್ನೆಲ್ಲಾ ಕೇಳಿದನಂತರ— "ಆಲಿಕಾದರ! ನಿನ್ನ ಬಯಕೆ ಕೈಗೂಡುವುದು. ನಾಳೆ ಹೊತ್ತಾರೆ ನನ್ನ ಮನೆಯಿಂದ ಹೊರಟು ಪಡುವಣ ದಿಕ್ಕಿನ ಹಾದಿಯನ್ನು ಹಿಡಿದು ಹೋಗು. ಆ ಹಾದಿಯು ಒಂದು ಕಗ್ಗವಿಗೆ ಹೋಗಿ ಸೇರುವುದು. ಆ ಕಗ್ಗವಿಯಲ್ಲಿ ಬರಿಗಣ್ಣಿನಿಂದ ಹೋಗಲು ಸಾಧ್ಯವಿಲ್ಲ. ನಿನ್ನಲ್ಲಿರುವ ವಜ್ರವನ್ನು ಮುಂದೆ ಆ ಗವಿಯ ಬಾಯಿಯಲ್ಲಿಡು. ಅದರ ಬೆಳಕು ದಾರಿಯನ್ನು ತೋರಿಸುವುದು. ಆ ಹಾದಿಗಾಗಿ ಸ್ವಲ್ಪ ಮುಂದೆ ಮುಂದೆ ಹೋಗುತ್ತಾ ಆ ವಜ್ರವನ್ನು ಅಲ್ಲಲ್ಲಿ ಬಿಸಾಕುತ್ತಾ ಹೆಕ್ಕುತ್ತಾ ಹೋದರೆ ಪಾತಾಳಕೂಪದ ಬಯಲನ್ನು ಸೇರುವೆ. ಅಲ್ಲಿ ಆ ವಜ್ರವನ್ನು ಕೈಯಲ್ಲಿ ಹಿಡಿದು ಮೂರು ಸಾರಿ ಉಜ್ಜಿ, ಕೂಪದ ಅಧಿದೇವತೆಯನ್ನು ಸ್ಮರಿಸು. ಅವಳು ಕೂಡಲೇ ಮೈದೋರಿ ನಿನಗೆ ಆ ಕೂಪವನ್ನು ತೋರಿಸುವಳು. ಆ ಮೇಲೆ ಅದರ ನೀರನ್ನು ಕುಡಿದು ವಜ್ರದ ಬೆಳಕಿನಿಂದ ದಾರಿಯನ್ನು ಕಂಡುಹಿಡಿದು ಇಲ್ಲಿಗೆ

ಬಾ. ಮಿಕ್ಕ ವಿಷಯಗಳನ್ನು ಆ ಮೇಲೆ ನಿನಗೆ ಹೇಳುವೆನು” ಎಂದು ಹೇಳಿದನು.

ಮರುದಿನ ಅಲಿಕಾದರನು ಬೇಗ್ಗೆ ಫಲಾಹಾರಾದಿಗಳಿಂದ ಹಸಿವನ್ನು ಕಳೆದು ಆ ಮುಪ್ಪಿನವನಿಂದ ಬೀಳ್ಕೊಟ್ಟವನಾಗಿ, ತಾನೊಬ್ಬನೇ ಆ ಕಗ್ಗವಿಯ ಕಡೆಗೆ ನಡೆದನು. ಸ್ವಲ್ಪ ಸಮಯದಲ್ಲಿಯೇ ಅವನು ಗವಿಯ ಬಾಗಿಲನ್ನು ಸೇರಿದನು. ಜಗ್ಗಿ ನೋಡಿದನು. ಅವನಿಗೆ ಕಂಡುದು ಕಗ್ಗತ್ತಲು ಮಾತ್ರ; ಕಿವಿಕೊಟ್ಟು ಆಲಿಸಿದನು. ಭಯಂಕರವಾದ ಶಬ್ದವು ಕೇಳಿಸಿತು. ಅದು ಕ್ರಿಮಿಕೀಟೋರಗಗಳ ಚಲನೆಯಿಂದುಂಟಾದಂತೆ ಅವನಿಗನ್ನಿಸಿತು.

ಅಲಿಕಾದರನಿಗೆ ಆ ಶಬ್ದವನ್ನು ಕೇಳಿ ಹೆದರಿಕೆಯಾಯಿತು. ಆ ಕತ್ತಲ ಹಾದಿಯನ್ನು ನೋಡಿ ಭಯವೆಗ್ಗಳಿಸಿತು ಮುಂದೆ ಪ್ರವೇಶ ಮಾಡಬೇಕೋ ಬೇಡವೋ ಎಂಬ ಆಲೋಚನೆಯು ಅವನ ಮನಸ್ಸಿನಲ್ಲಿ ತೋರಿ ಅವನು ಅಲ್ಲಿಯೇ ಕುಳಿತುಬಿಟ್ಟನು. ಆಲೋಚನೆಯಲ್ಲಿ ಮೈಮರೆತನು. ಅಷ್ಟರಲ್ಲಿ ಮರದೆಲೆಗಳ ಮೇಲೆ ನಡೆಯುವಾಗ ಉಂಟಾಗುವ ಶಬ್ದದಂತೆ ‘ಬರಬರ’ ಎಂಬ ಶಬ್ದವುಂಟಾಯಿತು. ಆ ಕತ್ತಲು ಹಾದಿಯಲ್ಲಿ ಕಡ್ಡಿಗಳು ಚಿಟಿ ಚಿಟಿಯೆಂದು ದನಿಮಾಡುತ್ತಾ ಮುರಿದು ಬೀಳುತ್ತಿದ್ದುವು ಆ ಕಡೆ ಕೂಡಲೇ ಅವನ ದೃಷ್ಟಿಯು ಹರಿಯಿತು. ಒಂದು ಕೃಷ್ಣಸರ್ಪವು ಹರಿದು ಬರುವುದು ಗೋಚರವಾಯಿತು. ಅಲಿಕಾದರನು ಧೈರ್ಯವನ್ನೆಲ್ಲಾ ಜಗ್ಗಿ ಹಿಡಿದು “ನೀನ್ಯಾರು” ಎಂದು ಕೇಳಿದನು. ‘ನಾನೇ ಯಮದೂತ, ನಿನ್ನನ್ನು ದೇಹಸಮೇತವಾಗಿ ಒಳಗೆ ಹೋಗದಂತೆ ತಡೆಯಲು ಬಂದಿರುವೆನು. ನೀನು ಮುಂದೆ ಕಾಲಿಟ್ಟೆಯಾದರೆ ನಿನ್ನ ಪ್ರಾಣವನ್ನು ಹೀರುವೆನು” ಎಂದಿತು. ಅಲಿಕಾದರನು ಕೂಡಲೆ ಕೈಯಲ್ಲಿದ್ದ ವಜ್ರವನ್ನು ಮುಂದೆ ಹಾದಿಯಲ್ಲಿಸೆದನು. ಅದರ ಪ್ರಕಾಶವು ಆ ನಾಗನ ಕಣ್ಣನ್ನು ಕುಕ್ಕಿತು. ಅಲಿಕಾದರನು ಮುಂದೆ ನಡೆದನು. ಆ ಉರಗವು—“ನೀನು ನನ್ನ ಶಕ್ತಿಯನ್ನು ಕುಂದಿಸಿದೆ. ಈಗ ನೀನು ನನ್ನನ್ನು ಜಯಿಸಿದೆ. ಜ್ಞಾನದೀಪದ ಮಹಿಮೆಯಿದು ಆದರೆ ಇನ್ನು ನಿನ್ನನ್ನು ಹೊರಗೆ ಹೋಗಲು ನಾನು ಬಿಡಲಾರೆ” ಎಂದಿತು.

ಆಲಿಕಾದರನು ನಕ್ಕನು. ಧೈರ್ಯವು ಪುನಃ ಉಂಟಾಯಿತು. ಆದರೆ ಮೈಯೆಲ್ಲಾ ಬೆವರಿತು. ಅವನು "ಜ್ಞಾನ ದೀಪ"ವನ್ನು ಮುಂದೆ ಮುಂದೆ ಬಿಸಾಡಿ ಅದರ ಬೆಳಕಿನಿಂದ ಹಾದಿಯನ್ನು ಕಂಡು, ವಿಷಮೃಗಗಳಿಂದ ತಪ್ಪಿಸಿಕೊಂಡು ಅವನು ಮುಂದೆ ನಡೆದನು. ಆದರೆ ದಾರಿಯು ಮುಂದೆ ಬಹಳ ಇಕ್ಕಟ್ಟಾಯಿತು, ದುರ್ಗಮವಾಯಿತು. ಒಬ್ಬನು ಹೋಗುವಷ್ಟು ಮಾತ್ರ ಅಗಲವಾಗಿತ್ತು. ಅದರೊಳಗೆ ಗಾಳಿಯು ಮಾತ್ರ ಬಿರುಸಾಗಿ ಬೀಸುತ್ತಿತ್ತು. ಅಲ್ಲದೆ ಆಲಿಕಾದರನಿಗೆ ಹಸಿವು ಬಾಯಾರಿಕೆಗಳ ಬಾಧೆ ತಟ್ಟಿತು. "ನನಗೀಗ ಹಣ್ಣು ನೀರು ಸಿಕ್ಕಿದರೆ" ಎಂದು ಅವನು ಹೇಳುವಷ್ಟರಲ್ಲಿ ಹರಿಯುವ ನೀರಿನ ದನಿಯು ಕೇಳಿಸಿತು. ಹಾದಿಯ ಒಂದು ಬದಿಯಲ್ಲಿ ಹಣ್ಣಿನ ರಾಶಿಯೇ ತೋರಿತು. ಅವನು ಜ್ಞಾನ ದೀಪ ವಜ್ರದ ಸಹಾಯದಿಂದ ಹರಿಯುವ ನೀರಿನ ತೊರೆಯನ್ನು ಕಂಡು ಹಿಡಿದು ನೀರನ್ನು ಕುಡಿದು ಹಣ್ಣು ತಿಂದು, ಸ್ವಲ್ಪ ವಿಶ್ರಮಿಸಿ, ಮುಂದಿನ ದಾರಿಯನ್ನು ಸ್ವಲ್ಪ ಸಮಯದಲ್ಲಿಯೇ ನಡೆದು ಗವಿಯನ್ನು ದಾಟಿ ಮುಂದೆ ದೇವೇಂದ್ರನ ನಂದನವನದಂತಿದ್ದ ಒಂದು ಉದ್ಯಾನವನವನ್ನು ಕಂಡನು. ಆ ವನದ ಮಧ್ಯದಲ್ಲಿ ಆಗಸವನ್ನು ಕನ್ನಡಿಸುತ್ತಿದ್ದ ತಿಳಿನೀರಿನ ಕೊಳವಿತ್ತು.

ಆ ಉದ್ಯಾನವನವು ಆಲಿಕಾದರನ ಮನಸ್ಸನ್ನು ಸೆಳೆಯಿತು. ಅದರಲ್ಲಿ ಅನೇಕ ವಿಧದ ಮರಗಳಿದ್ದುವು. ಆ ಮರಗಳು ಹೂ ಕಾಯಿ ಹಣ್ಣುಗಳಿಂದ ತುಂಬಿದ್ದುವು. ಆ ಹೂವಿನ ಪರಿಮಳದಿಂದ ಆ ಪ್ರದೇಶವು ತುಂಬಿತ್ತು. ಆ ವನದ ನೈಸರ್ಗಿಕ ಸೌಂದರ್ಯಾತಿಶಯವನ್ನು ನೋಡುತ್ತಾ ಸ್ವಲ್ಪ ಹೊತ್ತು ಕಳೆದನು. ಆ ಮೇಲೆ ತನ್ನ ಕೈಯಲ್ಲಿ ಆ ವಜ್ರವನ್ನು ತೆಗೆದುಕೊಂಡು ಅದನ್ನು ಮೂರು ಬಾರಿ ಉಜ್ಜಿ ಪ್ರಾಣಕೂಪದ ಅಧಿದೇವತೆಯನ್ನು ಸ್ಮರಿಸಿದನು. ಕೂಡಲೇ ಸರ್ವಾಂಗಾಲಂಕೃತಳೂ ರೂಪವತಿಯೂ ತುಂಬು ಜವ್ವನೆಯೂ, ಆದ ನಾರೀಮಣಿಯೋರ್ವಳು ಕಾಣಿಸಿಕೊಂಡು ವಿನಯದಿಂದ ಅವನು ಬಂದ ಕಾರ್ಯವೇನೆಂದು ಕೇಳಿದಳು. ಪ್ರಾಣಕೂಪವನ್ನು ನೋಡಲು ತಾನು ಬಂದಿರುವುದಾಗಿ ಆಲಿಕಾದರನು ಒಡನೆ ಸೂಚಿಸಿದನು.

ಆಗ ತರುಣಿಯು ತನ್ನ ಕೈಯೆತ್ತಿ ಪಕ್ಕದಲ್ಲಿದ್ದ ಕೊಳವನ್ನು ತೋ

ರಿಸಿ, ಅಗೋ ಅದೇ ಪ್ರಾಣಕೂಪವು, ಅಲ್ಲಿಗೆ ಹೋದರೆ ನೀನು ತುಂಬಾ ಎಚ್ಚರವಿರಬೇಕು. ಅದರ ನೀರನ್ನು ಕುಡಿದೆಯಾದರೆ ನಿನಗೆ ಮಾನವ ಸಂಸರ್ಗವುಂಟಾಗಲಾರದು. ನಿನ್ನ ಮನೆಯನ್ನು ನೆಂಟರಿಷ್ಟರನ್ನು. ತೊರೆದು ಭಿಕ್ಷಾಟನೆ ಮಾಡಬೇಕಾದೀತು" ಎಂದಳು.

"ಅದರೆ ನನಗೆ ಮರಣ ಭಯವಿರದು." ಎಂದು ಆಲಿಕಾದರನು ಹಡಿನುಡಿದನು.

"ಅಹುದು ನಿನಗೆ ಮರಣ ಭಯವಿರದು. ನೀನು ಚಿರಂಜೀವಿಯಾಗುವೆ ಆದರೆ ನಿನಗೆ ಜೀವನವೆ ಬೇಸರದ ಸಂಗತಿಯಾದೀತು" ಎಂದು ಆ ದೇವತಾಸ್ತ್ರೀ ಹೇಳಿದಳು. ಆಲಿಕಾದರನಿಗೆ ಅವಳ ಮಾತು ಹಿತವಾಗಿ ತೋರಲಿಲ್ಲ. ಅವನಿಗೆ ಸಿಟ್ಟು ಬಂತು. "ಈ ಕೊಳವನ್ನು ಕಂಡು ಹಿಡಿಯುವುದಕ್ಕಾಗಿ ನಾನು ಜೀವದ ಹಂಗು ತೊರೆದು ಬಹುದೂರ ಪಯಣ ಬೆಳಸಿ, ಅನೇಕಾನೇಕ ಆಪತ್ತುಗಳನ್ನೂ ಸಂಕಷ್ಟಗಳನ್ನೂ ಅನುಭವಿಸಿರುವೆನು. ಜ್ಞಾನದೀಪವೆಂಬ ಈ ವಜ್ರಕ್ಕಾಗಿ ನನ್ನ ಸಂಪಾದನೆಯನ್ನೆಲ್ಲವನ್ನೂ ಕೊಟ್ಟಿರುವೆನು. ಈಗ ಪ್ರಾಣಕೂಪವು ಕಾಣುತ್ತಿದೆ. ಅದರ ನೀರನ್ನು ಕುಡಿಯಬಾರದೆಂದು ಹೇಳುವುದು ಒಪ್ಪತಕ್ಕದ್ದೇ? ನನ್ನ ಬಾಳಿನ ಗುರಿಯೇ ಈ ಪ್ರಾಣಕೂಪದ ನೀರನ್ನು ಕುಡಿದು ಮೃತ್ಯುವಿನಿಂದ ಪಾರಾಗುವುದು. ನಾನೀಗ ನನ್ನ ಬಯಕೆಯನ್ನು ಪೂರೈಸದೆ ಹಿಂದಿರುಗುವುದೇ? ಈ ಕಗ್ಗವಿಯ ಕೃಷ್ಣಸರ್ಪನ ಬಾಯಿಗೆ ತುತ್ತಾಗುವುದೇ? ಹಿಂದೆ ಎಷ್ಟೋ ಮಂದಿ ಇಲ್ಲಿಗೆ ಬಂದು ಹಿಂದಿರುಗದೆ ಇಲ್ಲಿಯೇ ನಾಶವಾದಂತೆ ನಾನೂ ನಾಶವಾಗಬೇಕಾದೀತು. ಈ ಆಪತ್ತುಗಳನ್ನೆಲ್ಲಾ ಪಾರುಮಾಡಿಕೊಂಡು ನನ್ನೂರಿಗೆ ಹಿಂದಿರುಗಿದರೆ ನನ್ನನ್ನೆಲ್ಲರೂ ಹುಚ್ಚನೆಂದೇ ಕೂಗುವರು! ನಿನ್ನ ಬುದ್ಧಿವಾದವನ್ನು ಕೇಳಲಾರೆ. ಆದುದು ಆಗಲಿ, ಗೋವಿಂದನ ದಯೆಯೊಂದಿರಲಿ! ನಾನು ಪ್ರಾಣಕೂಪದ ನೀರನ್ನು ಕುಡಿದೇ ಬಿಡುವೆನು" ಎಂದು ಎರಡಿಲ್ಲದ ಮಾತನ್ನು ಹೇಳಿ ಬಿಟ್ಟನು.

ಆದರೂ ಆ ದೇವಕನ್ನಿಕೆಯು ತಾಳ್ಮೆಯನ್ನು ವಹಿಸಿ—"ನೀರನ್ನು ಕುಡಿದರೂ ಕುಡಿಯಬಹುದು. ಆ ಕೊಳದಲ್ಲಿಳಿದು ಸ್ನಾನ ಮಾಡಬೇಡ. ಹಾಗೆಲ್ಲಾದರೂ ಮಾಡಿದರೆ ನಿನ್ನ ಮುಂದಿನ ಬಾಳು ಬೀದಿ ನಾಯಿಯ

ಬಾಳಿಗಿಂತ ಹೀನವಾದೀತು." ಎಂದು ಹೇಳಿ ಅದೃಶ್ಯಳಾದಳು ಆಲಿಕಾದರನಿಗೆ ಈ ಹಿತೋಕ್ತಿ ರುಚಿಸಲಿಲ್ಲ. "ಕೈಗೆ ಸಿಕ್ಕಿದ ಮಾಣಿಕ್ಯವನ್ನು ಕಸದ ಬುಟ್ಟಿಗೆ ಒಗೆದು ಬಿಡುವುದೇ? ನನ್ನ ಮನಸ್ಸಿನ ಆಸೆ ತೀರುವವರೆಗೆ ನಾನು ಆ ಕೊಳದಲ್ಲಿ ಈಜಾಡುವೆನು. ತಾರ ನೀರನ್ನು ಕುಡಿವ ಜಾತಕ ಪಕ್ಷಿಯಂತೆ ಆ ನೀರನ್ನು ಆನಂದದಿಂದ ಕುಡಿಯುವೆನು" ಎಂದು ತನ್ನಷ್ಟಕ್ಕೆ ಹೇಳಿಕೊಂಡನು. ಹಿಂದು ಮುಂದು ನೋಡದೆ ಕೊಳದ ತಡಿಗೆ ಹೋಗಿ, ಮೂರು ಬೊಗಸೆ ನೀರನ್ನು ಎತ್ತಿ ಕುಡಿದನು. ಅನಂತರ ತನ್ನ ಮೈ ಮೇಲಿನ ಬಟ್ಟೆಗಳನ್ನೆಲ್ಲಾ ತೆಗೆದು ಹಾಕಿ, ಆ ಕೊಳಕ್ಕೆ ಹಾರಿದನು. ಅದರ ನೀರಿನಲ್ಲಿ ಈಜಾಡಿದನು. ನಾನಾ ರೀತಿಯಲ್ಲಿ ಸ್ವೇಚ್ಛೆಯಾಗಿ ಜಲಕ್ರೀಡೆಯನ್ನಾಡಿದನು. ಆ ಮೇಲೆ ದಡಕ್ಕೆ ಬಂದು ತನ್ನ ಬಟ್ಟೆಗಳನ್ನು ಹಾಕಿಕೊಂಡು ತಾನು ನೀರು ಕುಡಿದ ನಂತರ ತನ್ನ ಶರೀರವು ಹೇಗಾಗಿದೆಯೆಂದು ನೋಡಲು ಅಲೆಗಳಿಂದ ವಿಮುಕ್ತವಾದ ನೀರಿಗೆ ಇಣಿಕಿದನು. ಆದರಿದೇನು! ಅವನ ಮುಖವು ಹಚ್ಚಗಾಗಿದೆ! ಆಶ್ಚರ್ಯದಿಂದ ತನ್ನ ಮೈ ಕೈಗಳನ್ನು ನೋಡಿಕೊಂಡನು. ಎಲ್ಲವೂ ಹಚ್ಚಗಿವೆ! ಕೂಡಲೇ ವ್ಯಸನವು ಅವನ ಎದೆಯಲ್ಲಿ ಮನೆಮಾಡಿತು. ಅವನು ಆಲೋಚನಾಭರಿತನಾದನು. ತನ್ನೂರಿಗೆ ಹಿಂದಿರುಗಿದರೆ ಜನರು ನನ್ನನ್ನು ತಿರಸ್ಕರಿಸುವರೇ ಎಂದು ಆಲೋಚಿಸಹತ್ತಿದನು. ಆ ಮೇಲೆ ಅವನು ಬಂದ ಹಾದಿ ಹಿಡಿದನು. ಕಗ್ಗವಿಯ ಕತ್ತಲು ದಾರಿಯನ್ನು ವಜ್ರದ ಬೆಳಗಿನಿಂದ ಕಂಡುಹಿಡಿದು, ಮುಂದೆ ನಡೆದು, ಆ ಮುದುಕನ ಗುಡಿಸಲನ್ನು ಸೇರಿ ನಡೆದ ವೃತ್ತಾಂತವನ್ನೆಲ್ಲಾ ಅರುಹಿದನು.

ಆ ಮುದುಕನು ಆಲಿಕಾದರನ ಕತೆಯನ್ನು ಕೇಳಿ "ಆಲಿ ಕಾದರ ಇನ್ನು ಮುಂದೆ ನಿನಗೆ ಮಾನವ ಸಂಸರ್ಗ ಲಭಿಸದು. ಮನುಷ್ಯರು ಬೆಳ್ಳಗಿರಬಹುದು, ಕಪ್ಪಿರಬಹುದು, ಇಲ್ಲವೇ ಹಳದಿ ಬಣ್ಣದವರಿರಬಹುದು. ಆದರೆ ಪಚ್ಚೆಬಣ್ಣದ ಮನುಷ್ಯರು ಭೂಲೋಕದಲ್ಲಿರಲಾರರು. ಆದ್ದರಿಂದ ಮನುಷ್ಯರು ನಿನ್ನನ್ನು ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳಲಾರರು. ನಿನಗೆ ನರಲೋಕದಲ್ಲಿ ಸ್ಥಳವೇ ಇಲ್ಲ. ನೀನು ನನ್ನೊಡನೆ ಇದ್ದು ಬಿಡು" ಎಂದನು. ಆಲಿಕಾದರನು ಆ ಮುದುಕನೊಡನೆ ನರರ ಸುಳಿವಿಲ್ಲದ ಊರಲ್ಲಿರಲು ಒಪ್ಪಲಿಲ್ಲ. ಆಗ ಆ ಮುದುಕನಿಗೆ ಸಿಟ್ಟುಬಂತು. ಅವನು

ಅಧಿಕಾರವಾಣಿಯಿಂದಲೇ ಹೇಳಿದನು—"ನಾನೇ ಆ ಜ್ಞಾನದೀಪದ ಒಡೆಯ. ಈಗ ನೀನು ಆ ದೇವತಾ ಸ್ತ್ರೀಯ ಮಾತನ್ನು ಮೀರಿದುದೇ ದೊಡ್ಡ ಅಪರಾಧ. ನೀರು ಬೇಕಾದರೆ ಕುಡಿಯಬಹುದಿತ್ತು. ಆದರೆ ಯಾಕೆ ಈಜಾಡಿದೆ? ಮಾಡಿದ ತಪ್ಪಿಗೆ ಆ ವಜ್ರವನ್ನು ನನಗೆ ಕೊಟ್ಟು ಬಿಡುವುದೇ ತಕ್ಕ ಪ್ರಾಯಶ್ಚಿತ್ತ. ಆ ವಜ್ರವನ್ನು ಈಗಲೇ ಕೊಡು ಇಲ್ಲವಾದರೆ ನೀನು ಊರಿಗೆ ಹಿಂದಿರುಗಲಾರೆ".

ಆಲಿಕಾದರನು ಆ ವಜ್ರವನ್ನು ಕೊಟ್ಟು ಬಿಟ್ಟನು. ಅನಂತರ ಆ ಮುದುಕನ ಮಾತಿನಂತೆ ಆ ಗುಡಿಸಲಲ್ಲಿ ಮಲಗಿಕೊಂಡನು. ಆದರೆ ಸ್ವಲ್ಪ ಹೊತ್ತಿನಲ್ಲೇ ಅವನಿಗೆ ಎಚ್ಚರವಾಯಿತು. ಆಗ ಅವನು ಕಣ್ದೆರೆದು ನೋಡಲು ಮುದುಕನೂ ಅವನ ಗುಡಿಸಲೂ ಮಾಯವಾಗಿದ್ದುವು. ತಾನು ಮರುಭೂಮಿಯಲ್ಲಿ ಏಕಾಂಗಿಯಾಗಿದ್ದುದು ಆಲಿಕಾದರನಿಗೆ ಗೋಚರವಾಯಿತು. ಆದರೆ ಸುತ್ತಲೂ ಕತ್ತಲು. ಅವನು ವಿಸ್ಮಿತನಾಗಿ ಸುತ್ತಲೂ ನೋಡುತ್ತಿರಲು ಒಂದು ಅಶರೀರವಾಣಿ ಕೇಳಿಸಿತು.—"ಆಲಿಕಾದರ! ನಿನಗಿನ್ನು ನಿದ್ದೆಯಿಲ್ಲ, ಹಸಿವು ಇಲ್ಲ, ಬಾಯಾರಿಕೆಯಿಲ್ಲ, ದಣಿವೂ ಇಲ್ಲ. ನೀನು ಅಮರನಾಗಿರುವೆ". ಆಲಿಕಾದರನಿಗೆ ಆ ವಾಣಿಯನ್ನು ಕೇಳಿ ಸಂತೋಷವಾಯಿತು—"ನಾನು ಅಮರ! ಅಮರ! ನಾನು ಬಹು ಅದೃಷ್ಟವಂತ! ನನಗಿಂತ ಹೆಚ್ಚಿನ ಅದೃಷ್ಟಶಾಲಿಯಾರು? ನನ್ನನ್ನು ಹುಚ್ಚನೆಂದು ಕರೆದವರು ನನ್ನನ್ನು ನೋಡಿ ಮತ್ಸರ ಪಡುವರು" ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡನು.

ಆ ಮೇಲೆ ಅವನು ಹತ್ತು ಹೆಜ್ಜೆ ನಡೆದು ಸುತ್ತುಮುತ್ತು ನೋಡಲು ಮುಂದೆ ಸ್ವಲ್ಪ ದೂರದಲ್ಲಿ ಮಿಣಿ ಮಿಣಿ ದೀಪದ ಬೆಳಕು ಕಾಣಿಸಿತು. ಅದನ್ನೇ ಲಕ್ಷ್ಯವಿಟ್ಟು ಅವನು ಒಂದು ನಗರದ ಹೆಬ್ಬಾಗಿಲನ್ನು ಸೇರಿದನು. ಅಲ್ಲಿಯ ದ್ವಾರ ಪಾಲಕರನ್ನು ಕಂಡು ಅವರೊಡನೆ ಆ ನಗರದ ವಿವರವನ್ನು ಅವನು ಕೇಳಿದನು. ಅದುವೇ ಮಕ್ಕಾ ಪಟ್ಟಣವೆಂದು ಅವರು ಹೇಳಿದರು. ಆಲಿಕಾದರನ ಸಂತೋಷಕ್ಕೆ ಮೇರೆಯೇ ಕಾಣಲಿಲ್ಲ. ಅವನು ಕುಣಿದಾಡಿದನು, ಹಾಡಿದನು. ದೇವರನ್ನು ಕೊಂಡಾಡಿದನು. ಆದರೆ ದ್ವಾರಪಾಲಕರು—"ನಗರದ ಒಳಗೆ ಅಪರಿಚಿತರಿಗೆ ರಾತ್ರಿಯಲ್ಲಿ ಪ್ರವೇಶವಿಲ್ಲ. ಅರುಣೋದಯದ ವರೆಗೆ ಕಾದಿರ ಬೇಕು "ಎಂದರು

ಮರುದಿನ ಅರುಣೋದಯವಾಯಿತು. ದ್ವಾರಪಾಲಕರು ಹೆಬ್ಬಾಗಿಲನ್ನು ತೆರೆದರು. ಅಷ್ಟರಲ್ಲಿ ಸೂರ್ಯನ ಬೆಳಕಿನಲ್ಲಿ ಅಲಿಕಾದರನ ಮೈಯ ಪಚ್ಚೆ ಬಣ್ಣ ಅವರ ಗೋಚರಕ್ಕೆ ಬಂತು. ಅವರು ಕೂಡಲೆ ಚಿಟ್ಟನೆ ಚೀರಿ ಭಯಭ್ರಾಂತರಾಗಿ ಓಡಿ ಹೋದರು. ಅಲಿಕಾದರನು ಅದನ್ನು ನೋಡಿ ವಿಸ್ಮಯಗೊಂಡು ಮೌನವಾಗಿ ಮುಂದೆ ನಡೆದು ಹೋದನು. ಸಂತೆ ಬೀದಿಯನ್ನು ಸೇರಿ ಅಲ್ಲಿ ಜನರ ಬರವನ್ನು ಹಾರೈಸಿ ನಿಂತನು. ಆಗ ಮುಂಜಾನೆ ಎದ್ದು ನೀರನ್ನು ತರಲು ಪಕ್ಕದ ಬಾವಿಯ ಕಡೆಗೆ ಓರ್ವ ನಾರೀಮಣಿ ಹೋಗುತ್ತಿದ್ದಳು. ಅವಳನ್ನು ಕಂಡು ಮಾತಾಡಬೇಕೆಂದು ಅವನಿಗಿಚ್ಛೆಯಾಯಿತು. ಅವನು ಆ ಹೆಂಗುಸಿನ ಮುಂದೆ ನಿಂತನು. ಅವಳು ಅಲಿಕಾದರನನ್ನು ನೋಡಿ ಕೈಯಲ್ಲಿದ್ದ ನೀರಿನ ಗಡಿಗೆಯನ್ನು ಎತ್ತಿಹಾಕಿ ಅಲ್ಲಿಯೇ ಬಿಸಾಡಿ ಓಡಿಹೋದಳು. ಅಲಿಕಾದರನಿಗೆ ಊರೇ ಬದಲಾಗಿ ಹೋದಂತೆ ತೋರಿತು. ಆದರೂ ಅವನು ಅಲ್ಲಿಯೇ ಕುಳಿತುಕೊಂಡನು.

ಹೊತ್ತು ಮೂಡುತ್ತಾ ಬಂತು. ಬೆಳಕು ಹರಿದು ಜನರೆಲ್ಲಾ ತಂತಮ್ಮ ಕೆಲಸಗಳ ಮೇಲೆ ಹೊರಟರು. ಕೆಲವು ಮಂದಿ ಆಳುಗಳು ಹತ್ತಿಯ ಮೂಟೆಗಳನ್ನು, ದವಸಧಾನ್ಯಗಳನ್ನು ಹೊತ್ತುಕೊಂಡು ಸಂತೆ ಬೀದಿಗೆ ಬರುತ್ತಿದ್ದರು. ಅವರು ಅಲಿಕಾದರನನ್ನು ಕಂಡು ತಲೆಯ ಹೊರೆಗಳನ್ನು ಅಲ್ಲಿಯೇ ಹಾಕಿ 'ಹಸುರು ಮನುಷ್ಯ' 'ಹಸುರು ಮನುಷ್ಯ' ಎಂದು ಹೇಳುತ್ತಾ ಕಾಲಿಗೆ ಬುದ್ಧಿ ಹೇಳಿದರು. ಇದನ್ನೆಲ್ಲಾ ಅಲಿಕಾದರನು ಕಂಡು "ಕೆಲಸ ಕೆಟ್ಟಿತು, ನನ್ನನ್ನು ಪ್ರೀತಿಸುವವರು ಯಾರೂ ಇಲ್ಲ" ಎಂದುಕೊಂಡು, ಊರಿನ ಮುಸಾಫಿರ್ ಖಾನೆಗೆ ಹೋಗಿ ಒಂದು ಕೋಣೆಯಲ್ಲಿಳಿದುಕೊಂಡು ಆಲೋಚಿಸಹತ್ತಿದನು. ಕಡೆಗೆ ಮಸಿಯನ್ನು ಹಚ್ಚಿ ಮೈಯ ಬಣ್ಣವನ್ನು ಮರೆಸಿಕೊಳ್ಳುವುದು ಒಳ್ಳೆಯದೆಂದು ಅವನಿಗನ್ನಿಸಿತು. ಆ ನಂತರ ಅವನು ಮುಖಕ್ಕೆ ಮುಸುಕು ಹಾಕಿಕೊಂಡು, ನಗರದ ಕಮ್ಮಾರಶಾಲೆಗೆ ಹೋಗಿ ಅಲ್ಲಿಂದ ಒಂದು ಹೊರೆ ಮಸಿಯನ್ನು ತಂದನು. ಅದನ್ನು ಪುಡಿಮಾಡಿ ಮೈಕೈಗೆಲ್ಲಾ ಬಳಿದುಕೊಂಡು, ಮೈಕೈಗಳನ್ನು ಮುಸುಕಿನಿಂದ ಮುಚ್ಚಿ ತನ್ನ ಅಂಗಡಿಯ ಕಡೆಗೆ ಹೋದನು. ಆದರೆ ಅವನ ಅಂಗಡಿಯು ನೆಲಸಮವಾಗಿತ್ತು. ಆ ಮೇಲೆ ಊರಿನ ಹಿರಿಯ ಸಂತನ ಮನೆಗೆ ಹೋಗಿ

ತನ್ನ ಪೂರ್ವ ಪರಿಚಯವನ್ನು ಹೇಳಿಕೊಂಡನು. ಸ್ವರವನ್ನು ಹಿಡಿದು ಆಲಿಕಾದರನೆಂದು ಅವನು ಗುರುತು ಹಿಡಿದನು. ಆದರೆ ಅವನ ಮುಸುಕು ಚರ್ಚೆಗೆ ಮತ್ತು ಗುಜು ಗುಜು ಮಾತಿಗೆ ಎಡೆಯನ್ನು ಕೊಟ್ಟಿತು. ಇದನ್ನು ತಿಳಿದು ಅವನು ಹೊರಡಲುದ್ಯುಕ್ತನಾದನು. ಆಗ ಮನೆಯೊಳಗಿಂದ ಒಬ್ಬಳು ಹೆಂಗುಸು—“ಅಬ್ಬಾ ಅವನಿಗೆ ನೆರಳೇ ಇಲ್ಲ. ಅವನು ಪಿಶಾಚಿ! ಪಿಶಾಚಿ!” ಎಂದು ಕೂಗಿದಳು. ಗಂಡುಸರೆಲ್ಲರೂ ಕತ್ತಿ ಕೊರಡು ಹಿಡಿದು ಅವನ ಕಡೆ ಓಡಿಬಂದರು. ಆಲಿಕಾದರನು ಮುಂದೆ ಉಪಾಯಗಾಣದೆ ಕಾಲಿಗೆ ಬುದ್ಧಿ ಹೇಳಿದನು. ಅಷ್ಟರಲ್ಲಿ ಅವನ ಮೈಯನ್ನು ಮುಚ್ಚಿದ್ದ ಮುಸುಕು ಜಾರಿಹೋಯಿತು. ಅವನನ್ನು ಕಂಡವರೆಲ್ಲಾ “ಹಸುರು ಮನುಷ್ಯ, ಹಸುರು ಮನುಷ್ಯ', ಎಂದು ಕೂಗಿಕೊಳ್ಳುತ್ತಾ; ದುಷ್ಟರಿಂದ ದೂರವಾಗುವಂತೆ, ಅವನಿಂದ ದೂರವಾಗಿ ಹೋದರು.

ಆಲಿಕಾದರನು ನೆನಸಿದೊಂದಾದರೆ ದೈವವು ಇನ್ನೊಂದನ್ನು ಎಣಿಸಿತು. ಅವನಿಗೆ ಮನುಷ್ಯ ಸಂಸರ್ಗ ದೂರವಾಯಿತು. ಬಹು ವ್ಯಸನದಿಂದ ಅವನು ಊರ ಹೆಬ್ಬಾಗಿಲಿನ ಕಡೆ ನಡೆದನು. ಊರನ್ನು ಬಿಟ್ಟನು. ಮರುಭೂಮಿಯನ್ನು ಸೇರಿದನು. ತನ್ನ ಹಣೆಬರಹವನ್ನು ಕುರಿತು ಆಲೋಚಿಸತೊಡಗಿದನು. ಕಡೆಗೆ, ಪ್ರಾಣಕೂಪದ ಅಧಿದೇವತೆಯನ್ನು ಹುಡುಕಿ ಕಂಡುಹಿಡಿದು ಅವಳ ದಯೆಯಿಂದ ಪುನಃ ಹಿಂದಿನ ಮೈಬಣ್ಣವನ್ನು ಪಡೆಯಬಹುದೆಂದು ಎಣಿಸಿದನು. ಅವಳನ್ನು ಹುಡುಕುವ ಕೆಲಸಕ್ಕೆ ಕೈಹಚ್ಚಿದನು.

ಆದರೆ ಅನೇಕ ಸಾವಿರ ವರ್ಷಗಳು ಕಳೆದುಹೋದರೂ ಅವನ ಪ್ರಯತ್ನ ಇನ್ನೂ ಸಫಲವಾಗಿಲ್ಲ. ಅವನೊಬ್ಬನೇ ಈಗಲೂ ಮರಭೂಮಿಯಲ್ಲಿ ಆ ದೇವತಾ ಸ್ತ್ರೀಯನ್ನು ಹುಡುಕುತ್ತಾ ಕಾಲಕಳೆಯುತ್ತಿರುವನು. ಆ ದೇವತೆಯೂ ಕಾಣಸಿಗುವುದಿಲ್ಲ. ಲೋಕದಲ್ಲಿ ಅವನಿಗೆ ಸ್ಥಳವೂ ಇಲ್ಲ.

ಪ್ರಾಣಕೂಪದ ಬಲಕ್ಕಿಗೆ ಹಿಡಿದ ದರ್ಶ ಪ್ರಯ... ಸಾಹಸ.

೩. ಗಿರಿಬಾಲೆ.

ಬಹುಕಾಲದ ಹಿಂದೆ ಐಗುಪ್ತ ಚಕ್ರಾಧಿಪತ್ಯವನ್ನು ಫೆರೋ ಚಕ್ರವರ್ತಿಯು ಆಳುತ್ತಿದ್ದನು. ಅವನು ಬುದ್ಧಿಯಲ್ಲಿ ಬೃಹಸ್ಪತಿಯನ್ನೂ ವಿದ್ಯೆಯಲ್ಲಿ ಸರಸ್ವತಿಯನ್ನೂ ಮೀರಿದ್ದನು. ಆದರೆ ಮಕ್ಕಳಿಲ್ಲದ ಕೊರತೆಯು ಅವನ ಜೀವನವನ್ನು ದುಃಖಮಯವಾಗಿ ಮಾಡಿತ್ತು. ಬಹುಕಾಲದ ನಂತರ ಸಹಸ್ರರಶ್ಮಿಯ ವರಬಲದಿಂದ ಅವನಿಗೊಬ್ಬ ಪುತ್ರನು ಜನಿಸಿದನು. ಚಕ್ರವರ್ತಿಯು ಸಂತೋಷ ಸಾಗರದಲ್ಲಿ ತೇಲಾಡಿದನು.

ಪುತ್ರೋತ್ಸವವು ಬಹಳ ವಿಜೃಂಭಣೆಯಿಂದ ದೇಶದಲ್ಲೆಲ್ಲಾ ಜರುಗಿತು. ದೇವಸ್ಥಾನಗಳಲ್ಲಿ ಪೂಜೆ ಉತ್ಸವಾದಿಗಳೂ ಬಲು ಮುತುವರ್ಜಿಯಿಂದ ನಡೆಸಲ್ಪಟ್ಟವು. ಬಡಬಗ್ಗರಿಗೆ ಅನ್ನ ವಸ್ತ್ರ ಮೊದಲಾದುವುಗಳು ಹಂಚಲ್ಪಟ್ಟವು. ಚಕ್ರವರ್ತಿಯು ತನ್ನರಮನೆಯಲ್ಲಿ ದೊಡ್ಡ ಸಮಾರಂಭವನ್ನು ನೆರವೇರಿಸಿದನು. ಆ ಸಮಾರಂಭಕ್ಕೆ ಪುರೋಹಿತರೂ, ರಾಜಪುತ್ರರೂ, ಅಧಿಕಾರಿಗಳೂ, ಮಂತ್ರಿಗಳೂ ಬಂದಿದ್ದರು. ಭೂರಿಭೋಜನವಾದನಂತರ ಅತಿಥಿಗಳೆಲ್ಲರೂ ತಂತಮ್ಮ ಮನೆಗೆ ಹೊರಟುಹೋದರು. ಆದರೆ ರಾಜಪುರೋಹಿತನು ಮಾತ್ರ ಏಕಾಂತವಾಸದಲ್ಲಿದ್ದ ರಾಜನಲ್ಲಿಗೆ ಹೋಗಿ—"ಆಯುಷ್ಮಂತನೇ! ಒಂದು ವಿಚಿತ್ರ ರಹಸ್ಯವನ್ನು ಕೇಳು. ನಿನ್ನ ಮಗನು ಹುಟ್ಟಿದಾಗ ದೇವತೆಗಳು ನಮ್ಮರಮನೆ ದೇವಾಲಯಕ್ಕೆ ಆಗಮಿಸಿದ್ದರು. ಅವರು ದೇವಸ್ಥಾನದಿಂದ ಹೊರಟುಹೋಗುವಾಗ "ರಾಜನಿಗೊಬ್ಬ ಪುತ್ರನು ಜನಿಸಿದ್ದಾನೆ. ಆದರೆ ಒಂದು ನಾಯಿ, ನಾಗ, ನೆಗಳೆ ಅವನ ಮೃತ್ಯು ಎಂದು ಮಾತಾಡುತ್ತಾ ಹೋದರು" ಎಂದು ಹೇಳಿದನು.

ಪುರೋಹಿತನ ಮಾತುಗಳನ್ನು ಕೇಳಿ ರಾಜನ ಹೃದಯವು ವ್ಯಸನದಿಂದ ತುಂಬಿತು. ಹಾಗಾದರೆ ನನ್ನ ಮಗುವನ್ನು ನಾಯಿ, ನಾಗ, ನೆಗಳೆಗಳ ಬಾಯಿಯಿಂದ ತಪ್ಪಿಸುವುದು ಕಷ್ಟವಾಯಿತಲ್ಲ! ಎಂದನು. ಆಗ ಪುರೋಹಿತನು—"ಚಕ್ರವರ್ತಿಯೇ!—ನಾನು ಅವರೊಡನೆ ಮಾತುಕತೆ ನಡೆಯಿಸಿ ಎಲ್ಲಾ ವಿಷಯಗಳನ್ನು ತಿಳಿದಿದ್ದೇನೆ. ರಾಜಕುಮಾರನಿಗೆ, ನಾಯಿ, ನಾಗ ನೆಗಳೆಗಳಿಂದ ಮೃತ್ಯು ಈ ದೇಶದಲ್ಲಿದ್ದರೆ ಮಾತ್ರ ಉಂಟಾಗುವುದಂತೆ.

ಆದರೆ ದೂರದೇಶದಲ್ಲಿ ಅವನನ್ನು ಮೃತ್ಯುವಿನಿಂದ ಪಾರುಮಾಡಲು ಶಕ್ತಿಯಿರುವವರೊಬ್ಬರು ಇರುವರಂತೆ, ಅವರನ್ನು ರಾಜಕುಮಾರನೇ ಹುಡುಕಿ ಕಂಡುಹಿಡಿಯಬೇಕಂತೆ" ಎಂದನು.

ಫರೋ ಕೂಡಲೇ ಒಂದು ಸುಂದರವಾದ ಅರಮನೆಯನ್ನು ಮಗನಿಗಾಗಿ ಕಟ್ಟಿಸಿದನು. ಆ ಮನೆಯ ಸುತ್ತಲೂ ಎತ್ತರವಾದ ಪ್ರಾಕಾರವನ್ನೂ ಮಾಡಿಸಿದನು. ಬಹು ನಂಬಿಕೆಯ ಸೇವಕರನ್ನು ನೇಮಕ ಮಾಡಿ, ಮಗನನ್ನು ಅರಮನೆಯಲ್ಲಿರಿಸಿದನು. ಅವನ ಉಪಚಾರಕ್ಕಾಗಿ ಅನುಭವಸ್ಥರಾದ ದಾದಿಯರನ್ನು ನೇಮಕ ಮಾಡಿ ಹಗಲಿರುಳೂ ಕ್ರಮವಾದ ಕಾವಲನ್ನಿರಿಸಿ, ಅಪರಿಚಿತರು ಒಳಗೆ ಹೋಗದಂತೆ ರಾಜನು ತಡೆಯನ್ನು ಮಾಡಿಸಿದನು. ಹೊಳೆಯ ಬದಿಯ ನೆಗಳೆಗಳನ್ನು ಕಂಡಕಂಡಲ್ಲಿ ಬೇಟೆಯಾಡಲು ಅಪ್ಪಣೆಯಾಯಿತು. ಹಾವುಗಳನ್ನು ಸಿಕ್ಕಿದಲ್ಲಿ ತುಂಡರಿಸಲು ರಾಜನು ಏರ್ಪಾಡು ಮಾಡಿದನು. ನಾಯಿಗಳಿಗೆ ಅರಮನೆಗೆ ಪ್ರವೇಶವೇ ಸಿಗದಂತಾಯಿತು.

ದಿನಗಳು ಕಳೆದವು, ಮಗುವಿಗೆ ಬಾಲ್ಯವು ಪ್ರಾಪ್ತವಾಯಿತು. ವರ್ಷಗಳು ಸಂದುವು. ಬಾಲಕನು ಯುವಕನಾದನು. ಅವನಿಗೆ ಯೌವನವು ಪ್ರಾಪ್ತವಾಯಿತು. ಆದರೂ ಅವನಿಗೆ ಅರಮನೆಯನ್ನು ಬಿಟ್ಟುಹೋಗಲು ಅಪ್ಪಣೆಯಿರಲಿಲ್ಲ. ಈ ಅರಮನೆಯ ಸೋಗಿನ ಜೀವನ ಅವನಿಗೆ ಸೆರೆಮನೆಯೇ ಆಯಿತು. ಚಕ್ರವರ್ತಿಯು ಅವನಿಗೆ ಬೇಕಾದ ವಿದ್ಯಾಭ್ಯಾಸಕ್ಕೂ ವಿಲಾಸಕ್ಕೂ ತಕ್ಕ ಏರ್ಪಾಡು ಮಾಡಿದನು. ಆದರೆ ಬೇಸರವು ಅವನ ಬಾಳನ್ನು ಸುತ್ತಿತು.

ಒಂದು ದಿನ ಸಂಜೆ, ಅವನು ಬೇಸರವನ್ನು ಕಳೆಯಲು ಅರಮನೆಯ ಉಪ್ಪರಿಗೆಯನ್ನೇರಿ, ತಂಗಾಳಿಗೆ ಮೈಯನ್ನೊಡ್ಡಿ ಸುತ್ತಲೂ ನೋಡಿದನು. ದೂರದಲ್ಲಿ ಒಬ್ಬ ಮನುಷ್ಯನು ಒಂದು ನಾಯಿಯನ್ನು ಹಿಡಿದುಕೊಂಡು ನೀಲನದಿಯ ದಡದಲ್ಲಿ ನಡೆದುಹೋಗುತ್ತಿದ್ದನು. ರಾಜಕುಮಾರನು ನಾಯಿಯನ್ನೆಂದೂ ನೋಡಿರಲಿಲ್ಲ. ಆದ್ದರಿಂದ ಆ ಪ್ರಾಣಿಯನ್ನು ನೋಡಿದ ಕೂಡಲೇ ಅವನಿಗೆ ಕುತೂಹಲವುಂಟಾಯಿತು. ಅವನು ತನ್ನ ಗೆಳೆಯನನ್ನು ಕರೆದು—ಆ ಪ್ರಾಣಿಯನ್ನು ತೋರಿಸಿ ಅದೇನೆಂದು ಕೇಳಿದನು.

"ಅದು ನಾಯಿ, ಮನುಷ್ಯನ ಗೆಳೆಯ" ಎಂದು ಅವನು ಹೇಳಿದನು. ಕೂಡಲೇ ಅವನು "ನನಗೊಂದು ನಾಯಿ ಬೇಕು" ಎಂದು ಹೇಳಿದನು. ಈ ವರ್ತಮಾನವು ಚಕ್ರವರ್ತಿಯ ಕಿವಿಯನ್ನು ಮುಟ್ಟಿತು. ಚಕ್ರವರ್ತಿಯು ಆಲೋಚನಾಪರನಾದನು. 'ಈ ಕುಮಾರನು ನಾಯಿಗಾಗಿ ಹಟಹಿಡಿಯುವುದರಲ್ಲಿ ಸಂಶಯವಿಲ್ಲ. ಆಗಲಿ ಉತ್ತಮ ಜಾತಿಯ ಒಂದು ನಾಯಿ ಮರಿಯನ್ನು ಅವನಿಗೊಪ್ಪಿಸಲಿ" ಎಂದು ಅಪ್ಪಣೆ ಕೊಟ್ಟನು. ಕೂಡಲೇ ಒಳ್ಳೆಯ ಜಾತಿಯ ನಾಯಿ ಮರಿಯೊಂದು ರಾಜಕುಮಾರನ ಬಳಿ ನಿಂತಿತು. ಅದನ್ನು ನೋಡಿ ರಾಜಕುಮಾರನು ಸಂತೋಷದಿಂದ ನಲಿದನು. ಅದನ್ನೆತ್ತಿಕೊಂಡು ಮುದ್ದಾಡಿದನು.

ಆ ನಾಯಿ ಮರಿಯು ಅವನನ್ನು ಅಗಲುತ್ತಿರಲಿಲ್ಲ. ಅವನ ಬಳಿಯಲ್ಲೇ ಬಿದ್ದಿರುವುದು; ಅವನು ಮಲಗಿದರೆ, ಮಂಚದ ಅಡಿಯಲ್ಲಿಯೇ ಅದು ಮಲಗುವುದು. ಅವನೆದ್ದರೆ ಅದೂ ಏಳುವುದು. ತೋಟದಲ್ಲಿ, ಕೂಟದಲ್ಲಿ, ಮನೆಯಲ್ಲಿ, ಮರೆಯಲ್ಲಿ ಅದು ಅವನೊಡನೆ ಇರುತಿತ್ತು. ಹೀಗೆ ಅನೇಕ ವರ್ಷಗಳು ಕಳೆದವು. ನಾಯಿಮರಿಯು ಬೆಳೆದು ದೊಡ್ಡದಾಯಿತು. ರಾಜಕುಮಾರನಿಗೆ ಬೇಸರವೂ ಹೆಚ್ಚಾಯಿತು. ಅರಮನೆಯನ್ನು ಬಿಟ್ಟು ಹೋಗಲು ಅವನಿಗೆ ಮನಸ್ಸಾಯಿತು. ಅವನು ಒಂದು ದಿನ ಗೆಳೆಯನನ್ನು ಕರೆದು—"ಗೆಳೆಯ ನಾನೊಬ್ಬ ಮಾತ್ರ ಯಾಕೆ ಇಲ್ಲಿರಬೇಕು? ನನ್ನ ಪ್ರಾಯದವರೆಲ್ಲಾ ಬೇಕು ಬೇಕಾದಲ್ಲಿಗೆ ಅಡ್ಡಿ ಇಲ್ಲದೆ ಹೋಗುತ್ತಾರೆ. ಈ ಅರಮನೆಯೇ ನನಗೆ ಸೆರೆಮನೆಯಾಗಿದೆ" ಎಂದನು—ಆಗ ಅವನ ಗೆಳೆಯನು— ರಾಜಕುವರಾ, ರಾಜನಪ್ಪಣೆಯೇ ಹಾಗಿರುವುದು. ನೀನೀ ಸ್ಥಳವನ್ನೇ ಬಿಟ್ಟುಹೋದರೆ ನಿನಗೆ ಮೃತ್ಯು ಒದಗುವುದಂತೆ, ಒಂದು ನಾಯಿ, ನಾಗ, ನೆಗಳೆ ನಿನಗೆ ಮರಣವನ್ನುಂಟುಮಾಡುವವಂತೆ" ಎಂದನು.

ರಾಜಕುಮಾರನು ಕೂಡಲೇ ಒಂದು ಪತ್ರವನ್ನು ತನ್ನ ತಂದೆಗೆ ಹೀಗೆಂದು ಬರೆದನು—"ನನಗೆ ಅರಮನೆಯ ಜೀವನ ಅಸಹ್ಯವಾಗಿದೆ. ನನ್ನ ವಯಸ್ಸಿನವರೆಲ್ಲಾ ಸಂತೋಷದಿಂದ ಇಷ್ಟಬಂದಂತೆ ತಿರುಗುತ್ತಿದ್ದಾರೆ. ನಾನು ಮಾತ್ರ ಇಲ್ಲಿ ಯಾಕೆ ಬಂದಿಯಾಗಿರಬೇಕು? ನನಗೆ ನಾಯಿ, ನಾಗ, ನೆಗಳೆಗಳಿಂದ ಮೃತ್ಯು ನನ್ನ ಹಣೆಯಲ್ಲಿ ಬರೆದಿರುವುದಾದರೆ ಅದನ್ನು

ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಇಲ್ಲಿದ್ದರೂ ನನಗೆ ಮೃತ್ಯು ಒದಗಬಹುದು. ನನ್ನ ಕಾವಲಿನವರೂ ನನ್ನ ಮರಣವನ್ನು ತಪ್ಪಿಸಲಾರರು. ನಾನು ಜೀವಿಸಿರುವ ವರೆಗಾದರೂ ನನಗೆ ಸ್ವಾತಂತ್ರ್ಯವಿರಲಿ. ನನ್ನ ಪ್ರಾಣವಿರುವ ವರೆಗೆ ನನ್ನಿಚ್ಛೆ ಪ್ರಕಾರವಾದರೂ ತಿರುಗುವೆನು."

ಚಕ್ರವರ್ತಿಯು ಕಾಗದ ಸಿಕ್ಕಿದ ಕೂಡಲೆ ಮಗನನ್ನು ನೋಡಲು ಅರಮನೆಗೆ ಹೋದನು. ರಾಜಕುಮಾರನ ತೇಜಸ್ಸನ್ನೂ ಗಂಡಸುತನವನ್ನೂ ನೋಡಿ ಸಂತೋಷಪಟ್ಟು—

"ಕುಮಾರಾ! ನಿನ್ನಿಚ್ಛೆಯಂತೆ ಮಾಡಬಹುದು. ಈಗ ನಿನಗೆ ತಕ್ಕ ಯುಕ್ತಿಶಕ್ತಿಗಳಿವೆ. ನಿನ್ನ ಎಚ್ಚರ ನೀನು ತೆಗೆದುಕೊಳ್ಳಬಹುದು. ನೀನೆಲ್ಲಿಗೆ ಬೇಕಾದರೂ ಹೋಗು. ಆದರೆ ಐಗುಪ್ತ ದೇಶದಲ್ಲಿ ಮಾತ್ರ ನಿಲ್ಲಬೇಡ. ಪರದೇಶದಲ್ಲಿ ನಿನ್ನನ್ನು ಮರಣದಿಂದ ತಪ್ಪಿಸುವವರು ಸಿಗಬಹುದು" ಎಂದು ಹೇಳಿದನು. ರಾಜಕುಮಾರನಿಗೆ ಆನಂದವಾಯಿತು

ಆನಂತರ ಚಕ್ರವರ್ತಿಯು ರಾಜಕುಮಾರನಿಗೆ ಯೋಗ್ಯವಾದ ಪರಿಚಾರಕರನ್ನೂ ಮೈಗಾವಲಿನವರನ್ನೂ ಒದಗಿಸಿ, ಅವನ ಪಯಣಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಮಾಡಿದನು. ರಾಜಕುಮಾರನು ಮೊದಲು ನೀಲನದಿಯಲ್ಲಿ ಜಲಯಾನ ಮಾಡಿದನು. ದೊಡ್ಡ ಹಡಗೊಂದರಲ್ಲಿ ಸಕಲ ಪರಿವಾರದೊಡನೆ ನೀಲ ನದಿಯಲ್ಲಿ ವಿಹರಿಸಿ ಆತ್ಮಸಂತೋಷವನ್ನು ಪಡೆದನು. ಅವನ ನಾಯಿಯೂ ಅವನನ್ನು ಬಿಟ್ಟಿರಲಿಲ್ಲ! ಒಂದು ದಿನ ಅವನು ಪರಿಚಾರಕರನ್ನು ಕರೆದು—ಒಂದು ನಾಗನನ್ನೂ, ಒಂದು ನೆಗಳೆಯನ್ನೂ ಹಿಡಿದು ತಂದು ತೋರಿಸಬೇಕೆಂದು ಹೇಳಿದನು. ಅವನ ಸೇವಕರು ಸರ್ಪವನ್ನೂ, ಮೊಸಳೆಯನ್ನೂ ತಂದು ತೋರಿಸಿದರು. ಅವನ್ನು ನೋಡಿ—ಅವು ಕೆಟ್ಟ ಜಂತುಗಳು—ಎಂದು ನಿಶ್ಚಯಿಸಿದನು.

ನೀಲನದಿಯಲ್ಲಿ ಜಲಯಾನವನ್ನು ಮುಗಿಸಿ ಅವನು ರಥವನ್ನೇರಿ ತನ್ನ ನಾಯಿಯೊಡನೆ ಉತ್ತರಾಭಿಮುಖವಾಗಿ ಹೊರಟನು. ತನ್ನ ದೇಶದ ಗಡಿಯನ್ನು ಮುಟ್ಟಿದಾಗ ತನ್ನ ಮೈಗಾವಲಿನವರನ್ನೆಲ್ಲಾ ಹಿಂದಕ್ಕೆ ಕಳುಹಿಸಿಕೊಟ್ಟು, ನಾಯಿಯನ್ನು ಮಾತ್ರ ಕರಕೊಂಡು ಅವನು ಮುಂದೆ ಪಯಣ ನಡೆಸಿದನು. ಅವನಿಗೆ ಮುಂದೆ ತೋರಿದುದು ಮರುಭೂಮಿ. ಆದರೆ

ಅಲ್ಲಲ್ಲಿ ಬೇಟೆಗಾರರು ಸಂಚರಿಸುತ್ತಿದ್ದರು. ಅವರೊಡನೆ ರಾಜಕುಮಾರನು ಬೇಟೆಯಾಡುವುದರಲ್ಲಿ ಕೆಲವು ದಿನ ಕಳೆದನು. ಆದರೆ ತಾನು ರಾಜಕುಮಾರನೆಂದು ಅವರಿಗೆ ತಿಳಿಸಲಿಲ್ಲ. ಅವನು ಯಾರೋ ಒಬ್ಬ ದೇಶದ್ರೋಹಿ ಎಂದು ಅವರು ತಿಳಿದಿದ್ದರು. ಅವರ ಜೊತೆಯನ್ನು ಬಿಟ್ಟು ರಾಜಕುಮಾರನು ಮುಂದೆ ನಡೆದು ಪೆಲಸ್ತೀನ್ ದೇಶವನ್ನು ದಾಟಿ ನಹರಿ ಎಂಬ ಅರಸನ ರಾಜ್ಯವನ್ನು ಸೇರಿದನು.

ನಹರಿಗೆ ಅತೀ ಚೆಲುವೆಯಾದ ಮಗಳೊಬ್ಬಳಿದ್ದಳು. ಆದರೆ ಅವಳು ಅತ್ಯುನ್ನತವಾದ ಪರ್ವತ ಶಿಖರದ ತುದಿಯಲ್ಲಿ ಕಟ್ಟಿಸಿದ ಒಂದು ಗೋಪುರದಲ್ಲಿ ವಾಸವಾಗಿದ್ದಳು. ಆ ರೂಪವತಿಯ ಹೆಸರು ಎಲ್ಲ ದೇಶಗಳಲ್ಲಿ ಹಬ್ಬಿತ್ತು. ಅವಳನ್ನು ಮದುವೆಯಾಗಲಿಚ್ಛಿಸುವವರು ಪರ್ವತವನ್ನೇರಿ ಗೋಪುರವನ್ನು ಮುಟ್ಟಬೇಕಿತ್ತು. ನಾನಾ ದೇಶದಿಂದ ರಾಜಕುಮಾರರು ಅವಳನ್ನು ಮದುವೆಯಾಗಲು ಉತ್ಸಾಹದಿಂದ ಬಂದು ಆ ಗೋಪುರವನ್ನೇರಲು ಸಾಧ್ಯವಾಗದೆ ನಿರಾಶರಾಗಿ ಹಿಂದಿರುಗುತ್ತಿದ್ದರು.

ರಾಜಕುಮಾರನು ಆ ರಾಜ್ಯವನ್ನು ಸೇರಲು, ಸಮವಯಸ್ಕರು ಅವನ ಸುತ್ತ ನೆರೆದು ಅವನ ವೃತ್ತಾಂತವನ್ನು ಕೇಳಿದರು. ಚಾಣಾಕ್ಷನಾಗಿದ್ದ ರಾಜಕುಮಾರನು ನಿಜವನ್ನು ಹೇಳದೆ, "ನಾನು ತಾಯಿಯನ್ನು ಕಳಕೊಂಡ ತಬ್ಬಲಿ. ನನ್ನ ಚಿಕ್ಕಮ್ಮ ನನ್ನನ್ನು ಬಹಳವಾಗಿ ಹಿಂಸಿಸುವುದರಿಂದ ಮನೆಯನ್ನು ಬಿಟ್ಟು ಬಂದಿರುತ್ತೇನೆ" ಎಂದು ಹೇಳಿದನು. ಅವರು ನಿಜವೆಂದು ತಿಳಿದರು. ಆ ಮೇಲೆ ಅವರು ದೂರದಲ್ಲಿ ತೋರುತ್ತಿದ್ದ ಗೋಪುರವನ್ನು ದಿಟ್ಟಿಸಿ ನೋಡಹತ್ತಿದರು. ಆಗ ರಾಜಕುಮಾರನು, "ಇದೇನು? ನಿಮ್ಮ ದೃಷ್ಟಿಯೆಲ್ಲಾ ದೂರ ಸಾಗುತ್ತಿದೆ, ಕಾರಣವೇನು?" ಎಂದು ಕೇಳಿದನು.

ಅವರಲ್ಲೊಬ್ಬನು—"ವಯಸ್ಯ—ಅದೋ ಅಲ್ಲಿ ಕಾಣುವ ಪರ್ವತ ಶಿಖರದಲ್ಲಿ ಒಂದು ಗೋಪುರವಿದೆ. ಆ ಗೋಪುರದಲ್ಲಿ ನಮ್ಮ ನಾಡಿನರಸನ ಮಗಳಿದ್ದಾಳೆ. ಅವಳ ಹೆಸರು ಗಿರಿಬಾಲೆ. ಅತಿ ಚೆಲುವೆ. ಅವಳನ್ನು ಮದುವೆಯಾಗಲಿಚ್ಛಿಸುವವರು ಪರ್ವತವನ್ನು ಹತ್ತಿ ಶಿಖರವನ್ನೇರಿ, ಗೋಪುರದ ಕಿಟಕಿಯನ್ನು ಸೇರಬೇಕೆಂದು ಅರಸನ ಕಟ್ಟಪ್ಪಣೆ. ನಾವೆಲ್ಲರೂ ಪ್ರಯತ್ನಪಟ್ಟೆವು, ಆದರೆ ಆ ಗಿರಿಯನ್ನೇರಲು ನಮಗೆ ಇದುವರೆಗೆ ಸಾಧ್ಯ

ವಾಗಲಿಲ್ಲ. ನೀನು ಬೇಕಾದರೆ ಪ್ರಯತ್ನ ಮಾಡಬಹುದು" ಎಂದು ಅವನನ್ನು ಗೇಲಿ ಮಾಡಿ ಮಾತಾಡಿದರು.

ರಾಜಕುಮಾರನು ತಲೆಯನ್ನಲ್ಲಾಡಿಸಿ—"ಪ್ರಯತ್ನಮಾಡಿ ನೋಡುವೆನು" ಎಂದು ಮುಂದೆ ನಡೆದನು. ಅವನ ನಾಯಿಯೂ ಅವನ ಮುಂದೆ ನಡೆದು ದಾರಿ ತೋರಿಸುತ್ತಾ ಹೋಯಿತು. ಆ ಯುವಕರು ಅವನು ಮುಂದೆ ಹೋಗುವುದನ್ನೇ ನೋಡುತ್ತಾ ನಿಂತರು. ಅವರೆಣಿಕೆಯಂತೆ ರಾಜಕುಮಾರನು ಹಿಂದಿರುಗಲೇ ಇಲ್ಲ. ನಾಯಿಯನ್ನೇ ಅವನು ಹಿಂಬಾಲಿಸಿ ಪರ್ವತವನ್ನೂ ಹತ್ತಿದನು. ಮಂಗಗಳು ಮರಗಳನ್ನು ಹತ್ತುವಂತೆ ಹಲ್ಲಿಗಳು ಗೋಡೆಯಲ್ಲಿ ನಡೆಯುವಂತೆ; ಸುಲಭವಾಗಿ ಅವನು ಪರ್ವತವನ್ನೇರಿದನು. ಆ ಮೇಲೆ ಶಿಖರವನ್ನೂ ಹತ್ತಿದನು. ಸ್ವಲ್ಪ ಸಮಯದಲ್ಲೇ ಗೋಪುರವನ್ನೂ ಏರಿ ಮೇಲಂತಸ್ತಿನ ಕಿಟಿಕಿಯ ಹತ್ತಿರ ನಿಂತನು. ಅವನ ಬರವನ್ನೇ ಹಾರೈಸುತ್ತಿದ್ದ ಗಿರಿಬಾಲೆಯು ಕಿಟಕಿಯ ಬಾಗಿಲನ್ನು ತೆರೆದು ಅವನನ್ನು ಮನೆಯೊಳಗೆ ಕರಕೊಂಡು ಹೋದಳು.

ದೂರದಲ್ಲಿ ನಿಂತು ನೋಡುತ್ತಿದ್ದ ಯುವಕರು ಕೂಡಲೇ ನಹರಿಯ ಮುಂದೆ ನಿಂತು—"ಮಹಾರಾಜಾ, ನಮ್ಮ ಮಿತ್ರನು ಗೋಪುರವನ್ನೇರಿದ್ದಾನೆ. ಅವನು ಐಗುಪ್ತದೇಶದಿಂದ ಓಡಿ ಬಂದವನು; ಗತಿಯಿಲ್ಲದವನು. ದೇಶದ್ರೋಹಿ" ಎಂದರು. ಅರಸನಿಗೆ ಅವರ ಮಾತು ರುಚಿಸಲಿಲ್ಲ "ಅರಸನ ಪುತ್ರಿ ದೇಶ ದ್ರೋಹಿಯನ್ನು ವರಿಸುವುದೇ? ಎಂದೂ ಆಗದು" ಎಂದು ಹೇಳಿ ಕೂಡಲೇ, ಆ ರಾಜಕುಮಾರನನ್ನು ಹಿಡಿದು ತರಲು ಸೈನಿಕರನ್ನು ಗೋಪುರಕ್ಕೆ ಅಟ್ಟಿದನು

ಸೈನಿಕರು ಗೋಪುರವನ್ನು ಸೇರಿ—"ನೀನು ಕೂಡಲೇ ಐಗುಪ್ತ ದೇಶಕ್ಕೆ ಹೊರಟು ಹೋಗಬೇಕೆಂದು ಅರಸನ ಅಪ್ಪಣೆಯಾಗಿದೆ" ಎಂದು ರಾಜ ಕುಮಾರನಿಗೆ ಹೇಳಿದರು. ಆಗ ಗಿರಿಬಾಲೆಯು ಅವರ ಮುಂದೆ ನಿಂತು "ಅದು ಸಲ್ಲದು. ಅವನನ್ನು ವರಿಸಲು ಬಿಡದಿದ್ದರೆ ನಾನು ಮೃತ್ಯುವನ್ನೇ ವರಿಸುವೆನು" ಎಂದು ಹೇಳಿದಳು. ಸೈನಿಕರು ಬಂದಂತೆ ಹಿಂದಿರುಗಿ ಅರಸನಿಗೆ ಮಗಳ ಮನೋನಿಶ್ಚಯವನ್ನು ತಿಳಿಸಿದರು. ಆದರೆ ಅರಸನು ಜಗ್ಗಲಿಲ್ಲ. "ಐಗುಪ್ತೀಯನು ಹಿಂದಿರುಗದಿದ್ದರೆ ಮರಣದಂಡನೆಯಾಗು

ವುದು". ಎಂದು ಹೇಳಿ ಕಳುಹಿಸಿದನು. ಆ ವರ್ತಮಾನವನ್ನು ತಂದ ಸೇವಕನ ಮುಂದೆ ಗಿರಿಬಾಲೆಯು ಧೈರ್ಯದಿಂದ ಹೇಳಿದಳು. "ಅವನಿಗೆ ಮರಣದಂಡನೆಯಾಗುವುದಕ್ಕಿಂತ ಮುಂಚಿತವಾಗಿಯೇ ನಾನು ಪ್ರಾಣವನ್ನೇ ತೆಗೆದುಕೊಳ್ಳುವೆನು".

ಈ ವಿಷಯವು ನಹರಿಗೆ ತಿಳಿದಕೂಡಲೆ ಅವನು ಮಗಳನ್ನು ರಾಜಕುಮಾರನನ್ನೂ ತನ್ನ ಮನೆಗೆ ಕರೆಸಿಕೊಂಡನು. ಆ ಸ್ವರದ್ರೂಪಿಯೂ ಪೌರುಷವಂತನೂ. ಆದ ರಾಜಕುಮಾರನನ್ನು ನೋಡಿ ಅರಸನ ಸಿಟ್ಟು ಇಳಿಯಿತು. ತನ್ನ ಮಗಳನ್ನು ಅವನಿಗೆ ಮದುವೆ ಮಾಡಿಕೊಟ್ಟನು. ದಂಪತಿಗಳು ಸುಖವಿಲಾಸದಿಂದ ಸಮಯವನ್ನು ಕಳೆದರು. ಅರಸನಿಗೆ ಅಳಿಯನ ಮೇಲೆ ಹೆಚ್ಚು ಪ್ರೀತಿ ವಿಶ್ವಾಸವುಂಟಾಯಿತು. ತನ್ನ ನಂತರ ಅಳಿಯನೇ ಅರಸನಾಗಬೇಕೆಂಬ ಅಪೇಕ್ಷೆ. ಆದರೆ ರಾಜಕುಮಾರನಿಗೆ ಐಗುಪ್ತ ದೇಶಕ್ಕೆ ಹಿಂದಿರುಗುವ ಆಲೋಚನೆಯುಂಟಾಯಿತು

ಒಂದು ದಿನ ಅವನು ತನ್ನ ಸಹಧರ್ಮಿಣಿಯನ್ನು ಕರೆದು—"ಪ್ರಿಯೇ ನಾನು ನಾಡಾಡಿ ಮನುಷ್ಯನಲ್ಲ. ಐಗುಪ್ತ ದೇಶದ ಚಕ್ರವರ್ತಿಯ ಪುತ್ರ. ನನ್ನ ಊರಿನಲ್ಲಿ ನನಗೆ ನಾಯಿ, ನಾಗ, ನೆಗಳೆಗಳು ಮೃತ್ಯುವನ್ನುಂಟು ಮಾಡುವವೆಂದು ಜೋಯಿಸರು ಹೇಳಿದರಿಂದ ಪ್ರಾಣಭಯದಿಂದ ನಾಸಿಲ್ಲಿಗೆ ಬಂದಿರುವೆನು. ನನ್ನ ತಾಯ್ತಂದೆಯರನ್ನು ನೋಡಲು ನಾನು ಬಹಳ ಆತುರಪಡುತಿದ್ದೇನೆ" ಎಂದು ತನ್ನ ರಹಸ್ಯವನ್ನು ಹೇಳಿದನು.

ಗಿರಿಬಾಲೆಗೆ ತನ್ನ ಗಂಡನು ರಾಜಪುತ್ರನೆಂದು ತಿಳಿದು ಸಂತೊಸವಾಯಿತು. "ಪ್ರಿಯನೇ ಮರಣಕ್ಕೆ ಭಯಪಡುವುದೇಕೆ? ನಾನೇ ನಿನ್ನ ನೈಗಾವಲನ್ನು ನೋಡಿಕೊಳ್ಳುವೆನು. ನಾನು ಮೊತ್ತಮೊದಲು ನಿನ್ನ ನಾಯಿಯನ್ನು ಕೊಂದು ಬಿಡುವೆನು. ಅದುವೂ ನಿನ್ನ ಮೃತ್ಯುವಾಗಿರಬಹುದು" ಎಂದಳು. ಆದರೆ ರಾಜಕುಮಾರನು ತನ್ನೊಡನಾಡಿಯಾಗಿದ್ದ ನಾಯಿಯನ್ನು ಕೊಲ್ಲಲು ಬಿಡಲಿಲ್ಲ. "ಅದು ನನ್ನ ಆಬಾಲ ಸ್ನೇಹಿತ, ಆದರಿಂದ ಮರಣವುಂಟಾಗದು" ಎಂದನು. ಆ ಮಾತನ್ನು ಕೇಳಿ ರಾಜಕುಮಾರಿಗೆ ಮುಂದೇನು ಮಾಡಬೇಕೆಂದು ತೋಚಲಿಲ್ಲ. ಅವಳು ಎಲ್ಲಾ ಸಂಗತಿಗಳನ್ನೂ ತನ್ನ ತಂದೆಗೆ ತಿಳಿಸಿದಳು. ತನ್ನಳಿಯನು ಐಗುಪ್ತ ಚಕ್ರ

ವರ್ತಿಯು ಪುತ್ರನೆಂದು ತಿಳಿದು ಅವನು ಸಂತುಷ್ಟನಾದನು. "ಅವನ ವೈ ಗಾವಲಿಗೆ ಯೋಗ್ಯನಾದವನೊಬ್ಬನಿದ್ದಾನೆ. ಅವನ ಹೆಸರು ಪೇರೊಡಲ. ಅವನಿಗೆ ಬೇಕಾದಷ್ಟು ಚಿನ್ನವನ್ನು ಕೊಟ್ಟು ನಿನ್ನ ಗಂಡನ ವೈಗಾವಲಿಗೆ ನೇಮಿಸುತ್ತೇನೆ. ಅವನು ಜೊತೆಯಲ್ಲಿದ್ದಾಗ, ನೆಲ, ಜಲ ಜಂತುಗಳ ಬಾಧೆಯು ತಟ್ಟದು" ಎಂದನು. ರಾಜಪುತ್ರಿಗೆ ಸಂತೋಷವಾಯಿತು. ಮರುದಿನವೇ ರಾಜನು ಆ ಪೇರೊಡಲನ ಮನೆಗೆ ದೂತರನ್ನಟ್ಟಿ ಕರತರಿಸಿ, ಹೇರಳ ದ್ರವ್ಯವನ್ನು ಅವನಿಗೊಪ್ಪಿಸಿದನು. ಪೇರೊಡಲನೂ ರಾಜಕುಮಾರನ ಅಂಗರಕ್ಷಕನಾಗಲೊಪ್ಪಿಕೊಂಡನು. ಅವನ ವೈ ಕೈ ಬಲವನ್ನು ನೋಡಿ ರಾಜಕುಮಾರನಿಗೂ ಸಮಾಧಾನವಾಯಿತು.

ರಾಜನು ಮರುದಿನವೇ ಅಳಿಯನನ್ನೂ ಮಗಳನ್ನೂ ಪೇರೊಡಲ ನೊಡನೆ ಕಳುಹಿಸಿಕೊಟ್ಟನು. ನಾಯಿಯೂ ರಾಜಕುಮಾರನನ್ನು ಬಿಟ್ಟರಲಿಲ್ಲ. ಆ ರಾಜ್ಯದ ಗಡಿಯ ವರೆಗೆ ಮಾತ್ರ ನಹರಿಯ ಸೈನಿಕರು ಅವರನ್ನು ಹಿಂಬಾಲಿಸಿದರು. ಆ ಮೇಲೆ ಮೂವರೂ ದಾರಿ ನಡೆದು ಅನೇಕ ಹಗಲು ರಾತ್ರಿಗಳನ್ನು ಕಳೆದು ಐಗುಪ್ತ ದೇಶದ ಜೋವಾ ಎಂಬ ನಗರವನ್ನು ಒಂದು ದಿನ ಸಾಯಂಕಾಲ ಸೇರಿದರು. ಅಲ್ಲಿ ಒಂದು ಮನೆಯನ್ನು ಗೊತ್ತುಮಾಡಿ ರಾತ್ರಿ ತಂಗುವುದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿ ರಾಜಕುಮಾರನು ತನ್ನ ಪತ್ನಿಯೊಡನೆ ನೀಲ ನದಿಯ ದಂಡೆಯಲ್ಲಿ ಹೋಗುತ್ತಿದ್ದನು. ನಾಯಿಯೂ ಅವನನ್ನೇ ಹಿಂಬಾಲಿಸಿತು. ಪೇರೊಡಲನೂ ವೈಗಾವಲಿಗಾಗಿ ಅವರನ್ನನುಸರಿಸಿದನು. ಆಗ ಸಂಜೆಯಾಗುತ್ತಾ ಬರುತಿತ್ತು. ರಾಜಕುಮಾರನು ಮುಂದೆ ನೀಲನದಿಯ ಮಂದಗಮನವನ್ನು ನೋಡುತ್ತಾ ಮೈ ಮರೆತನು. ಅಷ್ಟರಲ್ಲಿ ನಾಯಿಯು ಗಟ್ಟಿಯಾಗಿ ಬೊಗಳಿತು. ಅದೇನೆಂದು ಗಿರಿಬಾಲೆಯು ನೋಡುತ್ತಿರಲು ಒಂದು ನೆಗಳೆ ನದಿಯ ದಂಡೆಯನ್ನು ಹತ್ತಿ ಬರುತಿತ್ತು. ಅವಳು ಕೂಡಲೇ ಚೀತ್ಕಾರ ಮಾಡಿದಳು; ಪಕ್ಕದಲ್ಲಿಯೇ ಕತ್ತಿದೊಣ್ಣೆಯನ್ನು ಹಿಡಿದಿದ್ದ ಪೇರೊಡಲನು ಓಡಿಬಂದು ಮೊಸಳೆಗೆ ಬಲವಾಗಿ ಹೊಡೆದನು. ತನ್ನ ಕೈಯಲಿದ್ದ ಹಗ್ಗ ಉರುಳು ಹಾಕಿ ಅದನ್ನು ಹಿಡಿಯಲು ಪ್ರಯತ್ನಿಸಿದನು. ಮೊಸಳೆಯು ಉರುಳಿಂದ ತಪ್ಪಿಸಿಕೊಂಡು ನೀರಿಗಿಳಿಯಿತು. ಪೇರೊಡಲನು ಅಲ್ಲಿಯೇ ಮೊಸಳೆಯ ಬರವನ್ನು ನಿರೀ

ಕ್ಷಿಸುತ್ತಾ ಕುಳಿತುಬಿಟ್ಟನು.

ರಾಜಕುಮಾರನು ತನ್ನ ಪತ್ನಿಯೊಡನೆ ಏರ್ಪಾಡು ಮಾಡಿದ್ದ ಮನೆಗೆ ಬಂದು ಆ ದಿವಸ ಅಲ್ಲಿಯೇ ತಂಗಿದನು. ಮರುದಿನ ಪಯಣ ಬೆಳಸಿ ರಾಜಧಾನಿಯನ್ನು ಸೇರಿದನು. ಅವನ ತಾಯ್ತಂದೆಯರು ಬಹು ಆದರದಿಂದ ಮಗನನ್ನೂ ಸೊಸೆಯನ್ನೂ ಬರಮಾಡಿಕೊಂಡರು. ಪೇರೊಡಲನು ರಾಜನ ಸಭಾಮಂಡಲದಲ್ಲಿ ಅಗ್ರಪದವಿಯನ್ನು ಪಡೆದನು. ರಾಜಧಾನಿಗೆ ಹಿಂದಿರುಗಿದ ನಂತರ ರಾಜಕುಮಾರನು ತಾನು ಬಾಲ್ಯವನ್ನು ಕಳೆದ ಅರಮನೆಯಲ್ಲಿಯೇ ಉಳಕೊಂಡನು. ಪೇರೋಡಲನು ಮೈಗಾವಲಿಗಾಗಿ ಅವನೊಡನೆ ಇರುತಿದ್ದನು. ಹೀಗೆ ಒಂದೆರಡು ತಿಂಗಳು ಕಳೆಯಲು, ರಾಜಕುಮಾರನು ಒಂದು ದಿನ ತನ್ನ ಸಂತೋಷವನ್ನು ಸೂಚಿಸುವುದಕ್ಕಾಗಿ ಒಂದು ಔತಣದೂಟವನ್ನೇರ್ಪಡಿಸಿದನು. ಅನೇಕ ಅರಸು ಮಕ್ಕಳೂ, ಸಾಮಂತರೂ ಭೋಜನಕ್ಕೆ ಬಂದಿದ್ದರು. ದಿನವೆಲ್ಲಾ ಸಂತೋಷದಿಂದ ಕಳೆಯಿತು. ಬಂದ ಅತಿಥಿಗಳು ಹಿಂದೆ ತಂತಮ್ಮ ಮನೆಗಳಿಗೆ ಹೋದರು. ಸಾಯಂಕಾಲ ಕುಮಾರನು ತನ್ನ ಕೋಣೆಯಲ್ಲಿ ದಣಿವಾರಿಸಿಕೊಳ್ಳಲು ಮಲಗಿದ್ದನು. ಅವನ ಪತ್ನಿಯೂ ಕೋಣೆಯಲ್ಲಿ ಕುಳಿತು ತಲೆ ಬಾಚಿಕೊಳ್ಳುತ್ತಿದ್ದಳು. ಆಗ 'ಸರ ಸರ' ಶಬ್ದವು ಕೇಳಿಸಿತು. ಗಿರಿ ಬಾಲೆಯು ತಕ್ಷಣವೇ ಎದ್ದು ಸುತ್ತುಮುತ್ತ ನೋಡಿದಳು. ಒಂದು ಹಾವು ಹರಿದು ಬರುವುದು ತೋರಿತು. ಒಡನೆ ಅವಳು ಸೇವಕಿಯನ್ನು ಕರೆದು, ಒಂದು ಲೋಟೆಯಲ್ಲಿ ಹಾಲು ಇನ್ನೊಂದರಲ್ಲಿ ದ್ರಾಕ್ಷಾರಸ ತರುವಂತೆ ಹೇಳಿದಳು. ಸೇವಕಿಯರು ತಂದ ಕೂಡಲೇ ಹಾಲನ್ನೂ ದ್ರಾಕ್ಷಾರಸವನ್ನೂ ಬೆರಸಿ ನೆಲದ ಮೇಲೆ ಹಾವಿನ ಹಾದಿಯಲ್ಲಿ ಒಂದು ಬಟ್ಟಲನ್ನಿಟ್ಟು ಅದಕ್ಕೆ ಹೊಯ್ದಳು. ಹಾವು ಮುಂದೆ ಹರಿದು ಬಂದು ಹಾಲನ್ನು ಕಂಡು, ಅದನ್ನು ಕುಡಿಯಿತು. ಬಟ್ಟಲು ಬರಿದಾಗುವಾಗ ಅದು ತಲೆತಿರುಗಿ ಉರುಳಾಯಿತು, ಕೂಡಲೇ ರಾಣಿಯು ತಾನು ಅಡಗಿಸಿಟ್ಟುಕೊಂಡಿದ್ದ ಬಾಕಿನಿಂದ ಹಾವನ್ನು ತುಂಡು ತುಂಡು ಮಾಡಿ ಬಿಟ್ಟಳು. ಒಂದು ಮೃತ್ಯುವಿನಿಂದ ರಾಜಕುಮಾರನು ಪಾರಾದನು. ಅವನನ್ನು ಎಬ್ಬಿಸಿ ರಾಣಿಯು ಸತ್ತ ಹಾವನ್ನು ತೋರಿಸಿದಳು. ಪತ್ನಿಯ ಜಾಣ್ಮೆಯನ್ನು ಕಂಡು ಅವನು ಹಿಗ್ಗಿದನು. ಅವಳನ್ನು ಹೊಗಳಿದನು.

ಅನಂತರ ಅವರು ದೇವಾಲಯಕ್ಕೆ ಹೋಗಿ ಹರಕೆಗಳನ್ನೊಪ್ಪಿಸಿ ದೇವರನ್ನು ವಂದಿಸಿದರು.

ರಾಜಕುಮಾರನು ಆ ಮೇಲೆ ಕೆಲವು ತಿಂಗಳು ಸುಖವಾಗಿ ಕಾಲಕಳೆದನು. ಒಂದು ದಿನ ಸಾಯಂಕಾಲ ಅವನು ನದಿಯ ದಡದಲ್ಲಿ ನಾಯಿಯನ್ನು ಕರೆದುಕೊಂಡು ನಡೆದು ಹೋಗುತ್ತಿದ್ದನು. ಪೇರೊಡಲನೂ ಅವನನ್ನು ಹಿಂಬಾಲಿಸಿದನು. ನದಿಯ ದಡದಲ್ಲಿದ್ದ ಜೇಣಿಯಲ್ಲಿ ಹಕ್ಕಿಗಳು ಕುಳಿತಿದ್ದವು. ನಾಯಿಯೂ ವಿನೋದದಿಂದ ಅವನ್ನು ಓಡಿಸಾಡುತ್ತಿತ್ತು. ಆಗ ಒಂದು ಮೊಸಳೆ ಬಂತೇ ಬಂತು. ಅದು ಬಾಯನ್ನು ತೆರೆದು ರಾಜಕುಮಾರನನ್ನು ಕೊಲ್ಲಲು ಮುಂದೆ ಹಾರಿತು. ಅವನಿಗೆ ಪ್ರಜ್ಞೆ ತಪ್ಪಿತು. ಕೂಡಲೇ ನಾಯಿಯು ಅದರ ಮೇಲೆ ಬಿದ್ದು ಕಾದಾಡಿತು. ಆ ಶಬ್ದವನ್ನು ಕೇಳಿ ಪೇರೊಡಲನು ಓಡಿ ಬಂದು ರಾಜಕುಮಾರನನ್ನು ಎತ್ತಿಕೊಂಡು ಹೋಗಿ ಸ್ವಲ್ಪ ದೂರ ನೆಲದ ಮೇಲೆ ಮಲಗಿಸಿ ನಾಯಿಗೆ ಬೆಂಬಲ ಕೊಡಲು ಹೊರಟು ಹೋದನು. ಆಗ ಅರಮನೆಯಲ್ಲಿ ಕುಳಿತು ನದಿಯ ದಂಡೆಯನ್ನು ನೋಡುತ್ತಿದ್ದ ರಾಣಿಯು ಪೇರೊಡಲನು ಓಡುವುದನ್ನು ಕಂಡು, ಏನೋ ಅಪಾಯ ಸಂಭವಿಸಿದೆಂದು ತಿಳಿದು, ತನ್ನ ಬಾಕನ್ನು ಹಿಡಿದು ಓಡಿಬಂದಳು. ಮೂರ್ಛೆ ಹೋಗಿದ್ದ ರಾಜಕುಮಾರನನ್ನು ಕಂಡು ಅವನಿಗೆ ಶೈತ್ಯೋಪಚಾರ ಮಾಡಿದಳು.

ಇತ್ತ ನಾಯಿಗೂ ಮೊಸಳೆಗೂ ಘೋರ ಕಾದಾಟ ನಡೆಯಿತು. ಪೇರೊಡಲನ ದೊಣ್ಣೆಯ ಏಟುಗಳು ಎಡೆಬಿಡದೆ ಬಿದ್ದುವು. ಅದರ ಬಲ ಗುಂದಿತು. ಅಷ್ಟರಲ್ಲಿ ಪೇರೊಡಲನು ಉರುಳಿನ ಹಗ್ಗದಿಂದ ಮೊಸಳೆಯನ್ನು ಹಿಡಿದು ಕಟ್ಟಿಹಾಕಿ ಬಿಟ್ಟನು. ಆದರೆ ಕೋಪದಿಂದ ನಾಯಿಗೆ ಹುಚ್ಚು ಹಿಡಿದಿತ್ತು, ಅದು ಹಗ್ಗದ ಉರುಳಿನಿಂದ ಬಂಧಿಸುತ್ತಿದ್ದ ಪೇರೊಡಲನ ಕೈಯನ್ನು ಕಚ್ಚಿ ಗಾಯ ಮಾಡಿತು. ಬಹು ಪ್ರಯತ್ನದಿಂದ ಪೇರೊಡಲನು ಮೊಸಳೆಯನ್ನು ಕೊಂದನು. ಆದರೆ ಹುಚ್ಚುನಾಯಿಯ ವಿಷವು ಅವನ ರಕ್ತವನ್ನು ಸೇರಿ ಅವನ ಶರೀರವನ್ನು ವ್ಯಾಪಿಸಿತು.

ಮೊಸಳೆಯು ಸತ್ತನಂತರ ನಾಯಿಯು ತನ್ನ ಯಜಮಾನನಿದ್ದೆಡೆಗೆ ಓಡಿತು. ಅದರ ನಾಲಗೆಯಿಂದ ನೊರೆಯು ಸುರಿಯುತಿತ್ತು. ಅದರ

ರೋಮಗಳೆಲ್ಲಾ ನೆಟ್ಟಗೆ ನಿಂತಿದ್ದುವು. ತನ್ನ ಪತಿಯ ಸಮೀಪಕ್ಕೆ ಬರುತ್ತಿದ್ದ ನಾಯಿಯನ್ನು ಗಿರಿಬಾಲೆಯು ಕಂಡಳು. ಅದರ ಭಯಂಕರವಾದ ಕಣ್ಣನ್ನೂ, ಬಾಯಿಯ ನೊರೆಯನ್ನೂ ನೋಡಿ ನಾಯಿಗೆ ನಿಜವಾಗಿ ಹುಚ್ಚು ಹಿಡಿದಿದೆಯೆಂದೇ ಅವಳಿಗೆ ತಿಳಿಯಿತು. ಅವಳು ನಾಯಿಯನ್ನು ಕರೆದು "ಮನೆಗೆ ಹೋಗು" ಎಂದಳು. ಹುಚ್ಚು ಹಿಡಿದಿದ್ದ ನಾಯಿಗೆ ಅವಳ ಮಾತಿನ ಮೇಲೆ ಗೋಷ್ಟಿಯೇ ಆಗಲಿಲ್ಲ. ಅದು ಇನ್ನೂ ಹತ್ತಿರ ಬಂತು. ಅಪಾಯವು ಸಮೀಪವಿದೆ ಎಂದು ತಿಳಿದು ಅವಳು ತನ್ನ ಬಾಕನ್ನು ಹಿಡಿದು ನಾಯಿಯನ್ನು ತಿವಿದು ಕೊಂದು ಬಿಟ್ಟಳು

ಸ್ವಲ್ಪ ಹೊತ್ತಿನಲ್ಲಿ ರಾಜಕುಮಾರನು ಮೂರ್ಛೆ ತಿಳಿದೆದ್ದನು. ಅವನು ಸತ್ತು ಬಿದ್ದಿದ್ದ ನಾಯಿಯನ್ನು ನೋಡಿ ವ್ಯಸನಪಟ್ಟನು. ಆಗ ಗಿರಿಬಾಲೆಯು ನಡೆದ ಸಂಗತಿಯನ್ನು ತಿಳಿಸಲು ರಾಜಕುಮಾರನಿಗೆ ಸಮಾಧಾನವಾಯಿತು. ಅಷ್ಟರಲ್ಲಿ ನದಿಯ ದಂಡೆಗೆ ಅವನನ್ನು ಹುಡುಕುತ್ತಾ ಹೋದ ಅವನ ಸೇವಕರು ಸತ್ತು ಬಿದ್ದಿದ್ದ ಮೊಸಳೆಯನ್ನು ಕಂಡರು. ಅದರ ಪಕ್ಕದಲ್ಲಿಯೇ ಪೆರೋಡಲನ ಮೃತಶರೀರವೂ ಇತ್ತು. ಅವರು ತಾವು ಕಂಡ ದೃಶ್ಯವನ್ನು ರಾಜಕುಮಾರನಿಗೆ ತಿಳಿಸಿದರು. ಪೆರೋಡಲಿನ ಮರಣವನ್ನು ತಿಳಿದು ಅವನೂ, ಗಿರಿಬಾಲೆಯೂ ಬಹಳವಾಗಿ ವ್ಯಸನಪಟ್ಟರು. ಆದರೆ ರಾಜಕುಮಾರನು ಮೃತ್ಯುವಿನಿಂದ ಪಾರಾದನು. ಆ ಮೇಲೆ ಅವರು ಪೇರೊಡಲನ ಶವಸಂಸ್ಕಾರಕ್ಕೆ ಏರ್ಪಾಡುಮಾಡಿ ಅರಮನೆಗೆ ಹಿಂತೆರಳಿದರು. ಮಗನಿಗೆ ಬಂದ ವಿಪತ್ತುಗಳೆಲ್ಲಾ ಕಳೆದು ಹೋದುದನ್ನು ನೋಡಿ ಚಕ್ರವರ್ತಿಗೆ ಸಂತೋಷವಾಯಿತು.

ಮರುದಿನವೇ ಚಕ್ರವರ್ತಿಯು ಸಭೆಸೇರಿಸಿ, "ನನ್ನನ್ನು ಮುಪ್ಪು ಆವರಿಸಿದೆ! ನನಗಿನ್ನೂ ರಾಜ್ಯವಾಳಲು ಶಕ್ತಿಯಿಲ್ಲ. ನನ್ನ ಮಗನೂ ರಾಜಸ್ಥಾನವನ್ನೇರಲಿ" ಎಂದನು. ಸಭಾಸದರೆಲ್ಲರೂ ಒಪ್ಪಿಗೆಯನ್ನಿತ್ತು ಜಯಜಯಕಾರವನ್ನು ಮಾಡಿದರು. ರಾಜಕುಮಾರನಿಗೆ ಪಟ್ಟಾಭಿಷೇಕವು ನಡೆಯಿತು. ಅವನು ತನ್ನ ರಾಣಿಯೊಡನೆ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತಾ ಬಹುಕಾಲ ರಾಜ್ಯವಾಳಿ ಕೀರ್ತಿಯನ್ನು ಪಡೆದನು. ಅವನೇ ಪ್ರಸಿದ್ಧನಾದ ರಮೇಶಸ್ ಚಕ್ರವರ್ತಿ,

---

೪. ಸುಖಾರು.

ಯಾರ್ಮ್ಯಾಕು ಚಕ್ರವರ್ತಿಯು ಜಪಾನು ದೇಶವನ್ನು ಆಳುತಿದ್ದಾಗ ಸುಖಾರು ಅವನ ಕೈಕೆಳಗಿನ ಒಬ್ಬ ಅಧಿಕಾರಿಯಾಗಿದ್ದನು. ಸುಖಾರುವಿನ ಮೂರ್ತಿ ಸಣ್ಣದು. ಆದರೆ ಅವನ ಅಧಿಕಾರ ದೊಡ್ಡದು. ಅಧಿಕಾರದೊಡನೆ ಜಂಭವೂ ಹೆಮ್ಮೆಯೂ, ಸೇರಿದುವು. ತಾನು ಚಕ್ರವರ್ತಿಯ ಬಲಗೈ ಬಂಟನೆಂದು ಸುಖಾರುವಿಗೆ ಹೆಮ್ಮೆ. ಆ ಹೆಮ್ಮೆಯೊಡನೆ ಆಡಂಬರವೂ ಹೆಚ್ಚು. ಚಕ್ರವರ್ತಿಯು ಯಾವುದಾದರೂ ಕೆಲಸವನ್ನು ಅವನಿಗೊಪ್ಪಿಸಿದರೆ ಅವನು ಜಂಭದ ಕೋಳಿಯಂತೆ, ತಲೆಯೆತ್ತಿ ನೆಟ್ಟಗೆ ನಡೆಯುವನು, ಪೌರುಷವನ್ನು ಮಾತಿನಲ್ಲಿ ತೋರುವನು. ಚಕ್ರವರ್ತಿಗೆ ಸಲ್ಲುವ ಗೌರವ ತನಗೂ ಸಲ್ಲಬೇಕೆಂದು ಅವನ ಹವಣಿಕೆ, 'ನಾನು ಚಕ್ರವರ್ತಿಯ ಒಳದನಿ' ಎಂದು ತನ್ನ ಕೈಕೆಳಗಿನವರಿಗೆ ಹೇಳುವನು. ತನ್ನ ಹೆಂಡತಿಯ ಮುಂದೆ—"ನಾನೂ ಚಕ್ರವರ್ತಿಯೂ ಜಪಾನನ್ನು ಆಳುತ್ತೇವೆ" ಎಂದು ಜಂಭ ಹೇಳಿಕೊಳ್ಳುವನು.

ಆದರೆ ಸುಖಾರು ಸ್ವಾಮಿಭಕ್ತ, ಉದ್ಯೋಗ ಪ್ರೇಮಿ. ಅವನಿಗೆ ಕೆಲಸಮಾಡಲು ಹೇಳಬೇಕಾಗಿರಲಿಲ್ಲ. ಚಕ್ರವರ್ತಿಯು ಕೆಲಸಕ್ಕಾಗಿ ಕರೆ ಕಳುಹಬೇಕಾಗಿರಲಿಲ್ಲ. ತಾನೇ ಮುಂದಾಗಿ ಬಂದು ಕೆಲಸವೇನಿದೆಯೆಂದು ಕೇಳುವನು. ಕೆಲಸವಿಲ್ಲದಿದ್ದರೂ ತಾನಾಗಿ ಆಗಾಗ ಬಂದು ಚಕ್ರವರ್ತಿಯ ಮುಂದೆ ಹಾಜರಾಗುವನು. ಈ ಕಾರ್ಯದಕ್ಷತೆಯನ್ನು ನೋಡಿ ಚಕ್ರವರ್ತಿಯು ಅವನಿಗೊಲಿದಿದ್ದನು. ಅನೇಕ ವೇಳೆ ಅವನನ್ನು ಹೊಗಳುತ್ತಿದ್ದನು. ಆದರೆ ಒಮ್ಮೊಮ್ಮೆ ಸುಖಾರು ಕೆಲಸವಿಲ್ಲದಿದ್ದರೂ ಕೆಲಸವನ್ನು ಅಪೇಕ್ಷಿಸುವಾಗ ಮಾತ್ರ ಅವನಿಗೆ ಬೇಸರವುಂಟಾಗುತ್ತಿತ್ತು.

ಒಂದು ದಿನ ವಿಲಕ್ಷಣವಾದ ಮೇಘಗರ್ಜನೆ. ಆ ಗುಡುಗಿನ ದನಿಗೆ ಇಡೀ ಜಪಾನೇ ನಡುಗಿತು. ಮಕ್ಕಳೂ ಮರಿಗಳೂ, ಭಯಭೀತರಾದರು. ಚಕ್ರವರ್ತಿಯ ಮಕ್ಕಳೂ ಹೆದರಿಕೆಯಿಂದ ಅಳಲಾರಂಭಿಸಿದರು. ಯಾರೇನು ಮಾಡಿದರೂ ಅವರು ಅಳುವನ್ನು ನಿಲ್ಲಿಸಲಾಗಲಿಲ್ಲ. ಗುಡುಗಜ್ಜ ಅವರನ್ನು ಹಿಡಿದುಕೊಂಡು ಹೋಗಬಹುದೆಂದು ಯಾರೋ ಅವರಿಗೆ ಹಿಂದೆ ಬೆದರಿಕೆ

ಹಾಕಿದ್ದರು. ಆ ಬೆದರಿಕೆಯು ಅವರನ್ನು ಅಳುಬುರಕರನ್ನಾಗಿ ಮಾಡಿತು. ಆಗ ಚಕ್ರವರ್ತಿಯೇ ಅವರನ್ನು ಸಂತೈಸಲು ಮುಂದಾದನು. ಅವನು ಮಕ್ಕಳನ್ನೆತ್ತಿಕೊಂಡು ಅರಮನೆಯ ಹಿಂದಿನ ತೋಟಕ್ಕೆ ಹೋಗಿ—"ಗುಡು ಗಜ್ಜನಿಗೆ ಹೆದರುವುದು ಯಾಕೆ? ಅವನನ್ನು ಹೊಡೆದೋಡಿಸಿಬಿಡುವೆನು. ನಾನು ಚಕ್ರವರ್ತಿಯಲ್ಲವೇ?" ಎಂದು ಹೇಳಿದನು. ಮಕ್ಕಳಿಗೆ ತಂದೆಯ ಮಾತುಗಳಲ್ಲಿ ಭರವಸೆ ತೋರಲಿಲ್ಲ. ಅವು ಅಳುವಿಕೆಯನ್ನು ನಿಲ್ಲಿಸಲಿಲ್ಲ.

ಅಷ್ಟರಲ್ಲಿ ಸುಖಾರುವಿನ ಸವಾರಿ ಬಂತು. ಆದರೆ ಪರಿಚಾರಕರು ಅವನನ್ನು ತಡೆದು "ಚಕ್ರವರ್ತಿಯನ್ನು ಈಗ ನೋಡಲು ಸಾಧ್ಯವಿಲ್ಲ" ಎಂದು ಹೇಳಿಬಿಟ್ಟರು. ಸುಖಾರವು, "ನನಗೆ ಕೆಲಸದ ಅವಸರವಿದೆ, ಚಕ್ರ ವರ್ತಿಯೆಲ್ಲಿದ್ದರೂ ಅವನನ್ನು ನೋಡಲು ನನಗೆ ಪರವಾನಗಿ ಇದೆ" ಎಂದು ಅಧಿಕಾರವಾಣಿಯಿಂದ ಹೇಳಿದನು. ಪರಿಚಾರಕರು ಮರುಮಾತಾಡದೆ ಸುಖಾರುವನ್ನು ಹೂದೋಟಕ್ಕೆ ಕರೆದೊಯ್ದರು. ಸುಖಾರು ಮೆತ್ತಗೆ ನಡೆದು ಸ್ವಲ್ಪ ದೂರದಲ್ಲಿ ನಿಂತುಕೊಂಡನು. ಚಕ್ರವರ್ತಿಯಾದರೋ ಪುನಃ ಪುನಃ ಮಕ್ಕಳನ್ನು ಸಂತೈಸಲು ಪ್ರಯತ್ನ ಮಾಡುತ್ತಿದ್ದನು. "ಗುಡು ಗಜ್ಜ ನಾನು ಹೇಳಿದಂತೆ ಮಾಡಲೇ ಬೇಕು. ನಾನು ಅವನಿಗಿಂತ ದೊಡ್ಡ ವನು. ನಿಮಗೇನೂ ತೊಂದರೆ ಮಾಡಲಾರ" ಎಂದು ಹೇಳುತ್ತಿದ್ದನು.

ಸುಖಾರುವು ಆ ಮಾತುಗಳನ್ನು ಕೇಳಿ ತನಗೆ ಕೆಲಸ ಸಿಕ್ಕಿತೆಂದು ಎಣಿಸಿ ಕೊಂಡನು. ಆದರೆ ಚಕ್ರವರ್ತಿಯು ಅವನನ್ನು ನೋಡಲೇ ಇಲ್ಲ. ಅವನು ಮಕ್ಕಳನ್ನು ಸಂತೈಸುವುದರಲ್ಲಿಯೇ ನಿರತನಾಗಿದ್ದನು. ಆದರೆ ಸುಖಾರವು ಸುಮ್ಮನಿರುವುದೇ? ಅವನಿಗೆ ಕೆಲಸವೂ ಬೇಕಾಯಿತು. ಅವನು ಒಂದು ಅರೆಕೆಮ್ಮು ಕೆಮ್ಮಿದನು. ಚಕ್ರವರ್ತಿಯು ತನ್ನ ಮೋರೆಯನ್ನು ತಿರುಗಿಸಿ ಅವನನ್ನು ನೋಡಿದ ಕೂಡಲೇ ಸುಖಾರು 'ಅಪ್ಪಣೆಯಾಗಲಿ' ಎಂದನು. ಚಕ್ರವರ್ತಿಯು ನಸುನಗುತ್ತಾ—"ಸುಖಾರು ಹೋ, ಸುಖಾರು, ಬಂದೆಯಾ, ನಿನಗೆ ಹೇಳಿಕಳುಹಿಸಬೇಕೆಂದಿದ್ದೆ. ನೀನು ಒಳ್ಳೆಯ ಸಮಯದಲ್ಲಿ ಬಂದೆ. ನೀನು ಹೋಗಿ ಗುಡುಗಜ್ಜನ ಗರ್ಜನೆಯನ್ನು ನಿಲ್ಲಿಸಲು ಹೇಳು. ಈ ನನ್ನ ಮರಿಗಳು ಹೆದರುತ್ತವೆ. ಆ ಗುಡುಗಜ್ಜನನ್ನು ಎಳಕೊಂಡು ನನ್ನ ಮುಂದೆ ನಿಲ್ಲಿಸು. ನನ್ನ ರಾಜ್ಯಕ್ಕೆ ಪ್ರವೇಶ ಮಾಡಲು ಅವನಿಗೆ ಧೈರ್ಯವೇ"

ಎಂದು ಹೇಳಿಬಿಟ್ಟನು. ಈ ಮಾತುಗಳಿಂದ ಚಕ್ರವರ್ತಿಯು ಮಕ್ಕಳ ಅಳುವನ್ನು ನಿಲ್ಲಿಸಲು ಪ್ರಯತ್ನ ಮಾಡಿದನು.

ಆದರೆ ಸುಖಾರುವಿಗೆ ಅದು ಅಪ್ಪಣೆಯೇ ಆಯಿತು. ಅವನಿಗೆ ತನ್ನ ಜಂಭ ತೋರಲು ಒಂದು ಸಂದರ್ಭವೂ ಸಿಕ್ಕಿತು. ಅವನು ಚಕ್ರವರ್ತಿಗೆ ಮುಜುರೆಮಾಡಿ 'ಅಪ್ಪಣೆಯನ್ನು ಶಿರಸಾವಹಿಸಿದೆ' ಎಂದು ಹೇಳಿ ಚಕ್ರವರ್ತಿಯ ಸನ್ನಿಧಿಯಿಂದ ಹೊರಟನು. ಚಕ್ರವರ್ತಿಯು ಮಕ್ಕಳನ್ನು ಮುದ್ದಾಡಿ "ಇನ್ನು ನಿಮ್ಮ ಅಳು ನಿಲ್ಲಲಿ—ಸುಖಾರು ಗುಡುಗಜ್ಜನನ್ನು ಹಿಡಿದುತರಲು ಹೋಗಿದ್ದಾನೆ" ಎಂದನು, ಸುಖಾರುವಿನ ಠೀವಿಯನ್ನು ನೋಡಿ ತಕ್ಷಣ ಮಕ್ಕಳು ಅಳುವುದನ್ನು ನಿಲ್ಲಿಸಿ, ಚಕ್ರವರ್ತಿಯೊಡನೆ ನಗಲಾರಂಭಿಸಿದರು.

ತಮಾಷೆಗಾಗಿ ಹೇಳಿದ ಮಾತು ಸುಖಾರುವಿಗೆ ಕಾರ್ಯವೇ ಆಯಿತು. ಅವನು ಹುಬ್ಬುಗಂಟಿಕ್ಕಿ, ಗುರುಗುಮ್ಮನೆ ಆಲೋಚನಾ ಭಾರದಿಂದ ತನ್ನ ಮನೆಗೆ ನಡೆತಂದು, ಪರೆ ಮದ್ದಳೆಪರೆಯುವರನ್ನೂ, ಕೊಂಬುಕಹಳೆಯುವರನ್ನೂ ಕರೆಯಿಸಿಕೊಂಡನು. ಅನಂತರ ಅವರೊಡನೆ ನಗರದ ಪಕ್ಕದ ಶಿಖರಾಗ್ರವನ್ನೇರಿ ಗುಡುಗಿನ ದನಿಯನ್ನು ಹಾರೈಸಿ ನಿಂತನು. ಗುಡುಗಿನ ದನಿಯು ಕೇಳಿದ ಕೂಡಲೇ ಆ ಮೇಳಗಾರರು ತಮ್ಮ ವಾದ್ಯಗಳನ್ನು ಗಟ್ಟಿಯಾಗಿ ಬಾರಿಸಬೇಕೆಂದು ಅವನ ಅಪ್ಪಣೆಯಾಯಿತು. ಗುಡುಗಿನ ಮೊಳಗು ಆಕಾಶದಲ್ಲಿ ಕೇಳಿದ ಕೂಡಲೇ ವಾದ್ಯಗಾರರು ತಮ್ಮ ವಾದ್ಯಗಳನ್ನು ಬಾರಿಸಿದರು. ಅವುಗಳ ದನಿಯೂ ಶಿಖರದ ಗವಿಗಳಲ್ಲಿ ದನಿಗೊಟ್ಟಿತು. ಹೀಗೆ ಅವರು ಮೂರು ನಾಲ್ಕು ಸಾರಿ ಬಾರಿಸಿದ ಮೇಲೆ ಸುಖಾರು ಆಕಾಶವನ್ನು ನೋಡಿ—"ಹೇ ಗುಡುಗಜ್ಜ! ನಿನ್ನ ಮೊಳಗನ್ನು ಒಡನೆ ನಿಲ್ಲಿಸಬೇಕೆಂದು ಚಕ್ರವರ್ತಿಯ ಅಪ್ಪಣೆ. ನೀನು ಕೆಳಗಿಳಿದು ಬಂದು ಚಕ್ರವರ್ತಿಯನ್ನು ಕಾಣಬೇಕೆಂದೂ ಅಪ್ಪಣೆ" ಎಂದು ಕೂಗಿ ಹೇಳಿ ಹೇಳಿದನು. ಆದರೆ ಗುಡುಗಜ್ಜನಿಗೆ ಇದೆಲ್ಲಾ ಹಾಸ್ಯವಾಗಿ ತೋರಿತೇನೊ! ಮೇಘಗರ್ಜನೆ ಇಮ್ಮಡಿಯಾಯಿತು. ಅವನ ಕಣ್ಣುಗಳು ಕಿಡಿಗಳನ್ನು ಕಾರಿದುವು; ದೊಡ್ಡ ದನಿಯಲ್ಲಿ ಇನ್ನೊಮ್ಮೆ ಹೇಳಿದನು—"ಮೇಘರಾಜಾ, ನೀನು ಬಹು ಸಮರ್ಥನಿರಬಹುದು. ಆದರೆ ನಮ್ಮ ರಾಜ್ಯದಲ್ಲಿ ಪ್ರವೇಶ

ಮಾಡಲು ನಿನಗೆ ಅಧಿಕಾರವಿಲ್ಲ. ನೀನು ಚಕ್ರವರ್ತಿಯ ಅಪ್ಪಣೆಯಿಲ್ಲದೆ ನಮ್ಮ ನಾಡಿನಲ್ಲಿ ಅಕ್ರಮ ಪ್ರವೇಶಮಾಡಿರುವೆ. ಒಡನೆ ನನ್ನಪ್ಪಣೆಯಂತೆ ನಿನ್ನ ಗರ್ಜನೆಯನ್ನು ನಿಲ್ಲಿಸಿ ಕೆಳಗಿಳಿದು ಬಾ ಇಲ್ಲವಾದರೆ ಪರಿಣಾಮ ನೆಟ್ಟಗಾಗದು!” ಎಂದನು.

ಈ ಮಾತಿನಿಂದ ನಿಜವಾದ ಪರಿಣಾಮವುಂಟಾಯಿತು. ಮೇಘ ರಾಜನು ಆಗ ಆಕಾಶದಲ್ಲಿ ನಿಜವಾಗಿ ಹೋಗುತ್ತಿದ್ದನು. ಅವನಿಗೆ ಸುಖಾರುವಿನ ಮಾತುಗಳು ಕೇಳಿದುವು. ‘ಈ ಮರ್ತ್ಯನಿಗೆ ಅಹಂಕಾರವೇ! ಆಗಲಿ, ಅವನಿಗೆ ಬುದ್ಧಿ ಕಲಿಸಲು ನಾನು ಭೂಮಿಗಿಳಿಯುವೆನು’ ಎಂದೆಂದು ಕೊಂಡು ಮನುಷ್ಯಾಕಾರವನ್ನು ತಳೆದು, ಶಿಖರಾಗ್ರದಲ್ಲಿ ಮೈದೋರಿದನು. ಅವನು ಸುಖಾರುವಿನೆದುರು ನಿಂತು ಹುಂಕರಿಸಿ—“ಹುಂ, ನಿನಗೇನು ಬೇಕಾಗಿದೆ” ಎಂದು ಕೇಳಿದನು. ಅವನ ಕಣ್ಣುಗಳಲ್ಲಿ ಬೆಂಕಿಯ ಕಿಡಿಗಳು ಕಾರುತ್ತಿದ್ದುವು. ಬಹುಶಃ ಸುಖಾರುವು ತನ್ನನ್ನು ನೋಡಿ ಕಾಲಿಗೆ ಬಿದ್ದು ಹೇಳಬಹುದೆಂದು ಗುಡುಗಜ್ಜನು ಎಣಿಸಿರಬೇಕು. ಆದರೆ ಸುಖಾರುವು ನೆಟ್ಟಗೆ ನಿಂತು, ಮೇಘರಾಜನನ್ನೇ ದಿಟ್ಟಿಸಿದನು—“ಇವನನ್ನು ಹಿಡಿದು ಪಲ್ಲಕ್ಕಿಯಲ್ಲಿರಿಸಿ ಕಟ್ಟಿಹಾಕಿರಿ” ಎಂಬ ಅಪ್ಪಣೆ ಅವನ ಬಾಯಿಂದ ಹೊರಟಿತು. ಪರಿಚಾರಕರು ಹಿಂದು ಮುಂದು ನೋಡದೆ ಗುಡುಗಜ್ಜನನ್ನು ಹಿಡಿದು ಪಲ್ಲಕ್ಕಿಯಲ್ಲಿರಿಸಿ ಮುಚ್ಚಿಬಿಟ್ಟರು. ಪಲ್ಲಕ್ಕಿಯು ಅರಮನೆಯ ಕಡೆ ಹೊರಟಿತು. ದೊಡ್ಡ ಮೆರವಣಿಗೆಗೆ ಅವಕಾಶವಾಯಿತು. ವಾದ್ಯ ಘೋಷ ಮುಗಿಲನ್ನು ಮುಟ್ಟಿತು. ಸುಖಾರು ಖಡ್ಗವನ್ನು ಕೈಯಲ್ಲಿ ಹಿಡಿದು ಪಲ್ಲಕ್ಕಿಯ ಬಳಿ ಗಾಂಭೀರ್ಯದಿಂದಲೂ, ಬಹು ದರ್ಪದಿಂದಲೂ ನಡೆದುಹೋದನು.

ಈ ದಿಟ್ಟತನದ ವರ್ತಮಾನವು ನಗರದಲ್ಲೆಲ್ಲಾ ಹರಡಿತು. ಜನರು ಗುಂಪು ಗುಂಪಾಗಿ ದಾರಿಯಲ್ಲಿ ಕಲೆತು ಸುಖಾರುವಿನ ದಿಟ್ಟತನವನ್ನು ಹೊಗಳಿದರು. ಆದರೆ ಕೆಲವರಿಗೆ ಸಂಶಯ! ಅವರು ಮೆರವಣಿಗೆಯನ್ನು ನೋಡಿ ‘ಸುಖಾರು ಯಾವ ರಾಜ್ಯದ ಮೇಲೆ ದಾಳಿ ನಡೆಸಿದನು? ಯಾರನ್ನು ಸೆರೆಹಿಡಿದಿರುವನು?”—ಎಂದು ಕೇಳಿದರು. ಪಲ್ಲಕ್ಕಿಯನ್ನು ಹೊತ್ತ ಬೋವಿಗಳು—“ಮಹಾ ಭಯಂಕರನಾದ ಮೇಘರಾಜನನ್ನೇ ಸೆರೆಹಿಡಿದಿ

ರುವನು” ಎಂದು ಧೈರ್ಯವಾಗಿ ಹೇಳಿದರು. ಕೇಳಿದವರು ಆಶ್ಚರ್ಯಚಕಿತರಾಗಿ—“ಅಬ್ಬಾ! ಸುಖಾರು ಶೂರನೇ ಸರಿ; ಮೇಘರಾಜನನ್ನು ಸೆರೆಹಿಡಿದಿರುವನಲ್ಲ! ಆಶ್ಚರ್ಯ! ಆಶ್ಚರ್ಯ! ಇನ್ನು ನಮಗೆ ಗುಡುಗಜ್ಜನ ಬಾಧೆ ತಪ್ಪಿದು” ಎಂದು ಹೇಳಿ ಮೌನಮುದ್ರೆಯನ್ನು ತಾಳಿದರು.

ಮೆರವಣಿಗೆಯು ಸಂಭ್ರಮದಿಂದ ಅರಮನೆಯ ತಲೆವಾಗಿಲನ್ನು ಮುಟ್ಟಿತು. ಸುಖಾರವು ಪಲ್ಲಕ್ಕಿಯನ್ನು ಇಲ್ಲಿರಿಸಿ, ಪರಿಚಾರಕರನ್ನು ಕಾವಲಿಗಿರಿಸಿ ತಾನೊಬ್ಬನೇ ಸಂತೋಷದಿಂದುಬ್ಬಿದ ಮನಸ್ಸಿನಿಂದ ಅರಮನೆಯನ್ನು ಪ್ರವೇಶಿಸಿದನು. ಚಕ್ರವರ್ತಿಯು ಹೂದೋಟದಲ್ಲಿ ಮಕ್ಕಳೊಡನೆ ವಿಹರಿಸುತ್ತಿದ್ದನು. ಸುಖಾರುವು ಮುಜುರೆಮಾಡಿ ನಿಂತು—“ಚಕ್ರವರ್ತಿಯೇ ತಮ್ಮ ಅಪ್ಪಣೆಯನ್ನು ನಡೆಯಿಸಿರುವೆನು” ಎಂದನು. ಚಕ್ರವರ್ತಿಗೆ ಏನೂ ಅರ್ಥವಾಗಲಿಲ್ಲ. “ನೀನು ಹೇಳುವುದೇನು” ಎಂದು ಆವನು ಸುಖಾರುವನ್ನು ಕೇಳಿದನು, ಅವನಾಗ—“ಧೊರೆಯೇ ನಾನು ಮೇಘರಾಜನನ್ನು ಹಿಡಿದುತಂದಿರುವೆ”, ಎಂದನು.

ಚಕ್ರವರ್ತಿಯ ಆಶ್ಚರ್ಯಕ್ಕೆ ಆದಿಯೂ, ಅಂತ್ಯವೂ ಇಲ್ಲದಂತಾಯಿತು. ಆವನು ಸುಖಾರವನ್ನು ನೋಡಿ—“ನೀನು ಶೂರನೇ ಅಹುದು. ನಾನು ಹೇಳಿದ್ದು ತಮಾಷೆಗಾಗಿ, ನೀನು ಕಾರ್ಯವೆಂದದೆಣಿಸಿಕೊಂಡೆ” ಎಂದನು. ಸುಖಾರುವಿನ ಮುಖದಲ್ಲಿ ನಸುನಗು ತೋರಿತು. ಆವನು ಚಕ್ರವರ್ತಿಯನ್ನುದ್ದೇಶಿಸಿ—“ಮೇಘರಾಜನು ಪಲ್ಲಕ್ಕಿಯಲ್ಲಿ ಕುಳಿತು ತಲೆವಾಗಿಲಲ್ಲಿ ತಮ್ಮ ಬರವನ್ನು ಹಾರೈಸುತ್ತಿರುವನು” ಎಂದನು. ಚಕ್ರವರ್ತಿಗೆ ಆಗ ಏನು ಮಾಡಬೇಕೆಂದು ತೋಚಲಿಲ್ಲ. ಅವನು ಮಕ್ಕಳನ್ನು ರಾಣಿವಾಸಕ್ಕೆ ಕರೆದೊಯ್ಯಲು ದಾಸಿಯರಿಗೆ ಅಪ್ಪಣೆಯನ್ನು ಕೊಟ್ಟನು. ಆ ಮೇಲೆ ಸುಖಾರುವಿಗೆ—“ನಿನ್ನ ಸೆರೆಮನೆಯಲ್ಲಿರುವವನನ್ನು ನೋಡುವೆನು, ಎಲ್ಲಿ ತೋರು” ಎಂದನು. ಸುಖಾರವು ಚಕ್ರವರ್ತಿಯನ್ನು ತಲೆವಾಗಿಲಿಗೆ ಕರಕೊಂಡು ಹೋದನು.

ಚಕ್ರವರ್ತಿಯು ತಲೆವಾಗಿಲನ್ನು ತಲಪುವಾಗ ಜನರ ನುಗ್ಗು ಹೆಚ್ಚಾಗಿತ್ತು. ಇಡೀ ನಗರವೇ ಈ ಕೌತುಕವನ್ನು ನೋಡಲು ಅಲ್ಲಿ ನೆರೆದಿತ್ತು. ಚಕ್ರವರ್ತಿಯನ್ನು ಕಂಡು ಎಲ್ಲರೂ ದಾರಿ ಬಿಟ್ಟು ಸರಿದು ನಿಂತರು. ಅವರು

ಏಕಕಂಠದಿಂದ "ಚಕ್ರವರ್ತಿಗೆ ಜಯವಾಗಲಿ" ಎಂದು ಜಯಘೋಷ ಮಾಡಿದರು. ಆಗ ಮೇಘರಾಜನು ತನ್ನ ಮೋರೆಯ ಮುಸುಕನ್ನು ತೆಗೆದು, ಚಕ್ರವರ್ತಿಯನ್ನು ನೋಡಿದನು. ಅವನ ಕಣ್ಣುಗಳು ಮಿಂಚನ್ನು ಕಾರಿದುವು. ಚಕ್ರವರ್ತಿಯ ಕಣ್ಣು ಕುಕ್ಕಿದಂತಾಯಿತು. ಅಲ್ಲಿ ಬೇನೆಯು ತುಂಬಿತು. ಆದ್ದರಿಂದ ಮೇಘರಾಜನನ್ನು ನೋಡಿ ಚಕ್ರವರ್ತಿಗೆ ಹೆದರಿಕೆಯಾಯಿತು. ಕೂಡಲೇ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು "ಸುಖಾರು, ಸುಖಾರು ನನಗೆ ಸಹಿಸಲಾಗುವುದಿಲ್ಲ. ಹಿಂದಕ್ಕೆ ಈ ಮೇಘರಾಜನನ್ನು ಶಿಖರಾಗ್ರಕ್ಕೊಯ್ದು ಅಲ್ಲಿಯೇ ಬಿಟ್ಟುಬಿಡು" ಎಂದು ಕಟ್ಟಪ್ಪಣೆಯನ್ನಿತ್ತನು. ಸುಖಾರು ಕೂಡಲೇ ಪಲ್ಲಕ್ಕಿಯನ್ನು ಶಿಖರಾಗ್ರಕ್ಕೆ ಒಯ್ದು ಮೇಘರಾಜನನ್ನು ಸೆರೆಯಿಂದ ಬಿಟ್ಟನು. ಅವನು ಸ್ವರ್ಗವನ್ನೇರಿ ಕಣ್ಮರೆಯಾಗುವವರೆಗೆ ಅಲ್ಲೇ ನಿಂತು ಹಿಂದಿರುಗಿದನು. ಚಕ್ರವರ್ತಿಯು ಗುಡುಗಜ್ಜನ ಬಂಧನದಿಂದ ದೇಶಕ್ಕೆ ವಿಪತ್ತು ಒದಗಬಹುದೆಂದೆಣಿಸಿ, ರಾಜಪುರೋಹಿತನನ್ನು ಕರೆಯಿಸಿ, ಶಾಂತಿಸಂಸ್ಕಾರಗಳನ್ನು ಮಾಡಿದನು.

ಆದರೆ ಸುಖಾರುವು ಮನೆಗೆ ಬಂದ ಕೂಡಲೇ, ಅವನ ಮೈ ಬಿಸಿಯಾಯಿತು. ತಡೆಯಲಾರದ ಬೇನೆಯಾಯಿತು. ಅವನು ವೈದ್ಯನನ್ನು ಕರೆಯಕಳುಹಿಸಿದನು. ವೈದ್ಯನು ಅವನನ್ನು ಸರಿಯಾಗಿ ಪರೀಕ್ಷಿಸಿ ನೋಡಿ— "ಗುಡುಗಜ್ಜನಿಗೆ ನಿನ್ನ ಮೇಲೆ ಕೋಪವಾಗಿದೆ ಅವನು ನಿನಗೆ ಕೇಡುಬಯಸಿರುವನು. ಇನ್ನು ನೀನು ಬದುಕುವ ಆಶೆಯನ್ನು ಬಿಡಬೇಕು" ಎಂದನು.

ಸುಖಾರು ಹೆದರಲಿಲ್ಲ. ತನ್ನ ಮಕ್ಕಳನ್ನು ತನ್ನ ಬಳಿಗೆ ಕರೆದು— "ಮಕ್ಕಳೇ ನಾನು ರಾಜಸೇವೆಯನ್ನು ಮನಃಪೂರ್ವಕವಾಗಿ ಮಾಡಿದ್ದೇನೆ. ಅವನ ಅಪ್ಪಣೆಯನ್ನು ಪಾಲಿಸಿರುತ್ತೇನೆ. ಶೌರ್ಯವನ್ನೂ ತೋರಿರುತ್ತೇನೆ ನನ್ನಂಥ ಸೇವಾಪರಾಯಣರು ಚಕ್ರವರ್ತಿಗೆ ಸಿಕ್ಕುವುದು ದುರ್ಲಭ. ಈಗ ನನ್ನ ಅಂತಿಮ ಕಾಲವು ಸನ್ನಿಹಿತವಾಗಿದೆ. ನಾನು ಸತ್ತ ಮೇಲೆ ನನ್ನ ಶವವನ್ನು ಆ ಶಿಖರಾಗ್ರದಲ್ಲಿ ಹೂತು ಒಂದು ದೊಡ್ಡ ಗೋರಿಯನ್ನು ಕಟ್ಟಿಸಬೇಕು. ಆ ಗೋರಿಯಲ್ಲಿ "ಸುಖಾರು, ಗುಡುಗಜ್ಜನನ್ನು ಹಿಡಿದವ"ನೆಂದು ಒಕ್ಕಣೆಯನ್ನು ಹಾಲುಗಲ್ಲಿನಲ್ಲಿ ಕೆತ್ತಿಸಿಡಬೇಕು" ಎಂದು ಕೊನೆಯ ಮಾತನ್ನು ಹೇಳಿ ಸುಖಾರು ಸ್ವರ್ಗಸ್ಥನಾದನು.

ಈ ವರ್ತಮಾನವನ್ನು ಕೇಳಿ ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿತು ಚಕ್ರವರ್ತಿಗೆ ತನ್ನ ಬಲಗೈಯೇ ಕಳೆದುಹೋದಂತಾಯಿತು. ಒಂದು ವಾರದ ವರೆಗೆ ಜನರೆಲ್ಲರೂ ವ್ಯಸನ ಸೂಚಿಸಬೇಕೆಂದು ಅಪ್ಪಣೆಯಾಯಿತು. ಸುಖಾರುವಿನ ಇಚ್ಛೆಯಂತೆ ಒಂದು ಭವ್ಯವಾದ ಗೋರಿಯು, ಗುಡುಗಜ್ಜನನ್ನು ಬಂಧಿಸಿದ ಶಿಖರದ ತುದಿಯಲ್ಲಿ ತೋರಿತು. ಅದರಲ್ಲಿ "ಇದು ಗುಡುಗಜ್ಜನನ್ನು ಹಿಡಿದ ಸುಖಾರುವಿನ ಗೋರಿ" ಎಂಬ ಹಾಲುಗಲ್ಲಿನಲ್ಲಿ ಸುವರ್ಣಾಕ್ಷರಗಳನ್ನು ಕೆತ್ತಿದ ಒಕ್ಕಣೆ.

ಆದರೆ ಸುಖಾರುವಿನ ದುರಾದೃಷ್ಟ. ಒಮ್ಮೆ ಗುಡುಗಜ್ಜನು ಆ ಬೆಟ್ಟದ ಕೋಡಿನ ಮೇಲೆ ಹೋಗುತ್ತಿರಲು ಆ ಒಕ್ಕಣೆಯನ್ನು ಕಂಡನು. ಸುಖಾರು ಸತ್ತರೂ ಗುಡುಗಜ್ಜನು ಅವನ ಮೇಲಿನ ಸೇಡನ್ನು ಮರೆಯಲಿಲ್ಲ. ಅವನು ಕೂಡಲೇ ವಜ್ರಾಯುಧವನ್ನು ಗೋರಿಯ ಮೇಲೆ ಎಸೆದನು. ಗೋರಿಯು ಒಡೆದು ಚೂರುಚೂರಾಯಿತು. ಆದರೆ ಸುಖಾರು ಇಲ್ಲದಿದ್ದರೂ ಅವನ ಪಿಶಾಚಿ ಅಲ್ಲಿತ್ತು. ಪಿಶಾಚಿಯಾಗಿದ್ದರೂ ಸುಖಾರು ತನ್ನ ಶೌರ್ಯವನ್ನು ಕಳಕೊಂಡಿರಲಿಲ್ಲ. ಕೂಡಲೇ ಆ ಪಿಶಾಚಿಯು ಗುಡುಗಜ್ಜನನ್ನು ಕೈಕೈ ಕಾಳಗಕ್ಕೆ ಕರೆಯಿತು. ಗುಡುಗಜ್ಜನೂ ಮನುಷ್ಯಾಕಾರವನ್ನು ತಳೆದು ಪಿಶಾಚಿಯ ಮುಂದೆ ನಿಂತನು. ಸುಖಾರುವು ಮುಷ್ಟಿಯುದ್ಧದಲ್ಲಿ ಗಟ್ಟಿಗನಾಗಿದ್ದನು. ಅವನ ಮುಷ್ಟಿಪ್ರಹರದಿಂದ ಗುಡುಗಜ್ಜನು ಹಣ್ಣಾಗಿ ಹೋದನು. ಸುಖಾರುವಿನ ಮುಷ್ಟಿಯ ಏಟುಗಳು ಎಡೆಬಿಡದೆ ಬೀಳುತ್ತಲೇ ಇದ್ದುವು. ಈ ಆಶ್ಚರ್ಯಕರವಾದ ಘಟನೆಯನ್ನು ಜನರು ನೋಡಿ ಭಯಭೀತರಾಗಿ ಚಕ್ರವರ್ತಿಗೆ ವರ್ತಮಾನವನ್ನು ಕೊಟ್ಟರು. ಚಕ್ರವರ್ತಿಗೆ ಭಯವಾಯಿತು. ಗುಡುಗಜ್ಜನು ರೇಗಿ ತನ್ನ ದೇಶಕ್ಕೆ ಅಪಾಯವನ್ನುಂಟುಮಾಡಬಹುದೆಂದು ಎಣಿಸಿ ಅವನು ಬೆಟ್ಟದ ಕೋಡನ್ನೇರಿ, ಸುಖಾರುವಿನ ಪಿಶಾಚಕ್ಕೆ ಪ್ರಾರ್ಥನೆಮಾಡಿಕೊಂಡನು—"ಓ ಸ್ವಾಮಿ ಭಕ್ತನೇ ನೀನು ಶೂರನೂ, ಧೀರನೂ ಅಹುದು. ನೀನು ಗುಡುಗಜ್ಜನನ್ನು ಜಯಿಸಿದೆ. ಅವನನ್ನು ಕ್ಷಮಿಸು. ಅವನು ಹೋಗಲಿ ಬಿಟ್ಟುಬಿಡು—ಉದಾರ ಮನಸ್ಸನ್ನು ತೋರು. ನಿನಗೆ ಬೇರೊಂದು ಗೋರಿಯನ್ನು ಕಟ್ಟಿಸುವೆನು. ಒಕ್ಕಣೆ ಬರೆಯುವೆನು" ಎಂದನು. ಸುಖಾರುವಿನ ಪಿಶಾಚಿಯು ಕೂಡಲೇ

ಯುದ್ಧವನ್ನು ನಿಲ್ಲಿಸಿ, ತನ್ನ ಮುಷ್ಟಿಯನ್ನು ಸಡಿಲಿಸಿತು. ಆಗ ಮೇಘರಾಜನು "ಬದುಕಿದೆ" ಎಂದು ಹೇಳುತ್ತಾ ಮೇಘವನ್ನೇರಿ ಕಾಣೆಯಾದನು. ಸುಖಾರುವಿನ ಪಿಶಾಚಿಯು ಚಕ್ರವರ್ತಿಗೆ ಮುಜುರೆಮಾಡಿ ಮಾಯವಾಯಿತು. ಆ ಮೇಲೆ ಚಕ್ರವರ್ತಿಯು ಹೊಸ ಗೋರಿಯನ್ನು ಕಟ್ಟಿಸಿ, ಚಿನ್ನದ ಅಕ್ಷರಗಳಲ್ಲಿ—"ಸುಖಾರು ಗುಡುಗಜ್ಜನನ್ನು ಹಿಡಿದವ, ಅವನು ಗುಡುಗಜ್ಜನನ್ನು ತನ್ನ ಜೀವಮಾನದಲ್ಲೊಮ್ಮೆ, ಸತ್ತಮೇಲೊಮ್ಮೆ ಜಯಿಸಿದನು! ಎಂದು ಬರೆಸಿದನು.

ಮೇಘರಾಜನು ಆ ಮೇಲೆ ಸುಖಾರುವಿನ ಗೋರಿಯ ತಂಟೆಗೆ ಹೋಗಲೇ ಇಲ್ಲ. ಈ ಹೊತ್ತು ಆ ಗೋರಿಯು ಜಪಾನಿನ ಮೇಘರಾಜ ಗಿರಿಯ ತುದಿಯಲ್ಲಿದೆ.

೫. ಉದಂಕನ ಗುರುದಕ್ಷಿಣೆ.

ದ್ವಾಪರಯುಗದ ಗೌತಮ ಋಷಿಯ ಖ್ಯಾತಿಯು ಇಡೀ ಜಂಬೂದ್ವೀಪದಲ್ಲಿ ಹರಡಿತ್ತು. ಅವನಾಶ್ರಮವು ವಿದ್ಯೆಯ ತವರ್ಮನೆಯಾಗಿತ್ತು. ಕುಲಪತಿಯಾದ ಗೌತಮನ ಮೇಲೆ ಬಡವರಿಗೂ ಸಿರಿವಂತರಿಗೂ ತುಂಬಾ ಅಭಿಮಾನ. ಅವನ ಬಳಿ ವಿದ್ಯಾಭ್ಯಾಸ ಮಾಡಿಸಲು ಅರಸರು ತಮ್ಮ ಮಕ್ಕಳನ್ನು ಕಾಲ್ನಡೆಯಿಂದಲೇ ಕಳುಹಿಸಿಕೊಡುತ್ತಿದ್ದರು. ಅವನ ಪತ್ನಿಯಾದ ಅಹಲ್ಯೆಯೂ ಶಿಷ್ಯರನ್ನು ತನ್ನ ಮಕ್ಕಳೆಂದೇ ಭಾವಿಸುತ್ತಿದ್ದಳು. ಹೀಗಾಗಿ ಗೌತಮಾಶ್ರಮದ ಹೆಸರು ಇಡೀ ಭರತಖಂಡದ ಜನರ ಬಾಯಲ್ಲಿ ಪೂಜ್ಯಭಾವನೆಯಿಂದ ಉಚ್ಚರಿಸಲ್ಪಡುತಿದ್ದುದರಲ್ಲಿ ವಿಶೇಷವೇನು?

ಪೂಜ್ಯ ಗೌತಮನು ಒಂದು ದಿನ ಮುಂಜಾನೆ ನಿತ್ಯ ವಿಧಿಗಳನ್ನು ತೀರಿಸಿ ಆಶ್ರಮದಲ್ಲಿ ಕುಳಿತಿದ್ದನು. ಹೋಮಾಗ್ನಿಯು ಆಶ್ರಮವನ್ನೆಲ್ಲಾ ಬೆಳಗಿಸುತಿತ್ತು. ವಟುಗಳು ವೇದಾಧ್ಯಯನ ಮಾಡುತ್ತಿದ್ದರು. ಶಿಷ್ಯರು ಪಾಠಗಳನ್ನು ಕಲಿಯುತಿದ್ದರು. ಆಗ ಒಬ್ಬ ಹುಡುಗನು ಆಶ್ರಮದ ಬಾಗಿಲಿನಲ್ಲಿ ತೋರಿದನು. ಅವನ ಮುಖವು ಬಾಡಿತ್ತು. ಅವನ ಹೊಟ್ಟೆಯು ಬತ್ತಿತ್ತು. ಆದರೆ ಅವನ ಕಣ್ಣುಗಳಲ್ಲಿ ಹೊಳಪು ತುಂಬಿತ್ತು. ಅವನು ಎಳೆ ವಯಸ್ಸಿನವನೆಂದು ಅವನ ಮೈಗಟ್ಟು ಸೂಚಿಸುತಿತ್ತು

ಆ ಹುಡುಗನು ಚಿಕ್ಕವನಾಗಿದ್ದರೂ ಧೈರ್ಯದಿಂದ ನೆಟ್ಟಗೆ ಬಂದು ಗೌತಮನ ಕಾಲಿಗೆರಗಿದನು. ಕುಲಪತಿಯು ಅವನನ್ನು ಹಿಡಿದೆತ್ತಿ "ಬಾಲಕಾ ನಿನ್ನ ವೃತ್ತಾಂತವೇನು?" ಎಂದು ಕೇಳಿದನು. ಆ ಹುಡುಗನು ತೊದಲ್ನುಡಿಯಲ್ಲಿ "ಪೂಜ್ಯ ಗುರುವರ್ಯ, ಭೃಗುಋಷಿಯು ನನ್ನ ಪೂರ್ವಜನು. ನನ್ನ ಹೆಸರು ಉದಂಕ. ನಾನು ಹುಟ್ಟಿ ಇಂದಿಗೆ ಐದು ವರ್ಷಗಳಾಗಿವೆ—ಹುಟ್ಟಿದ ಕೂಡಲೆ ತಾಯಿಯನ್ನು ಕಳಕೊಂಡೆನು. ಸ್ವಲ್ಪ ದಿನಗಳ ಹಿಂದೆ ತಂದೆಯನ್ನು ಕಳಕೊಂಡೆನು. ಈಗ ನಾನು ತಬ್ಬಲಿ. ತಮ್ಮ ಬಳಿ ವಿದ್ಯಾದಾನವನ್ನಪೇಕ್ಷಿಸಿ ಬಂದಿರುವೆನು" ಎಂದು ಹೇಳಿ ಕಣ್ಣಿನಲ್ಲಿ ನೀರು ತಂದುಕೊಂಡನು.

ಗೌತಮನ ಮುಖದಲ್ಲಿ ವಿಲಕ್ಷಣವಾದ ಕಳೆಯು ತೋರಿತು. ಒಂದು ನಿಟ್ಟುಸಿರು ಹೊರಸೂಸಿತು. ಆಗ ಅವನ ಪಕ್ಕದಲ್ಲಿ ಹೋಮಾಗ್ನಿಯು ಇನ್ನಷ್ಟು ಪ್ರಕಾಶಮಾನವಾಯಿತು. ಅವನು ಕಾರುಣ್ಯ ದೃಷ್ಟಿಯಿಂದ ಹುಡುಗನನ್ನು ನೋಡಿ--“ಮಗೂ ನಿನ್ನಿಚ್ಛೆಯಂತಾಗಲಿ” ಎಂದನು. ಉದಂಕನು ಗೌತಮನ ಶಿಷ್ಯನಾದನು. ತಬ್ಬಲಿಯು ಆಶ್ರಮವನ್ನು ಸೇರಿದನು

ಆ ಕಾಲದಲ್ಲಿ ಆಶ್ರಮವೇ ಶಾಲೆ, ಕಾಲೇಜು, ಪರಿಶೋಧನಾ ಕ್ಷೇತ್ರ. ಅಲ್ಲಿ ವಿದ್ಯಾರ್ಥಿಯರು ಎಳೆವಯಸ್ಸಿನಲ್ಲಿ ಸೇರಿ, ತಮ್ಮ ಕೌಮಾರ್ಯಾವಸ್ಥೆಯನ್ನು ವಿದ್ಯಾಭ್ಯಾಸದಲ್ಲಿಯೇ ಕಳೆದು, ಯೌವನ ಪ್ರಾಪ್ತವಾದಾಗ ತಮ್ಮೂರಿಗೆ ಹಿಂದಿರುಗುತ್ತಿದ್ದರು. ಆಶ್ರಮವು ಬರೇ ಯೋಗಾಭ್ಯಾಸದ ನೆಲೆಮನೆಯಾಗಿರಲಿಲ್ಲ. ಮುನಿಗಳು ಮೂಗು ಹಿಡಿದು ಇಡೀ ದಿನ ತಪಸ್ಸುಮಾಡುವುದರಲ್ಲೇ ನಿರತರಾದ ಯತಿಗಳಾಗಿರಲಿಲ್ಲ. ಅವರು ಸಕಲ ವಿದ್ಯಾಪಾರಂಗತರಾಗಿದ್ದು, ಶಿಷ್ಯರಿಗೆ ಎಲ್ಲಾ ವಿದ್ಯೆಗಳನ್ನು ಹೇಳಿಕೊಡುತಿದ್ದರು. ದೇಶದ ಮತ್ತು ಧರ್ಮದ ರಕ್ಷಣೆಗೆ ಬೇಕಾದಾಗ ನೆರವಾಗುತ್ತಿದ್ದರು.

ಆಶ್ರಮದಲ್ಲಿ ಪಾಠ ಕಲಿಯುವುದಲ್ಲದೆ ಶಿಷ್ಯರು ಗುರುಸೇವೆಯನ್ನೂ ಮಾಡಬೇಕಾಗಿತ್ತು. ಶಿಷ್ಯರೇ ನೀರು ತರುವರು, ಸೌದೆ ತರುವರು, ಕಸ ಗುಡಿಸುವರು. ಬೆಳೆಯನ್ನು ಬೆಳೆಯಿಸುವರು. ಅವರು ನಿತ್ಯವೂ ಆಶ್ರಮದ ಹೋಮಾಗ್ನಿಯನ್ನು ಬೆಳಗಿಸುವರು. ಗುರು ಮತ್ತು ಗುರುಪತ್ನಿ ಹೇಳಿದ ಕೆಲಸವನ್ನು ಮಾಡುವರು. ಇದರಿಂದ ಗುರು ಶಿಷ್ಯರಲ್ಲಿ ಪರಸ್ಪರ ಹೊಂದಿಕೆಯಾಗುತಿತ್ತು. ಶಿಷ್ಯರು ರಾಜರೇ ಆಗಲಿ, ಶ್ರೀಮಂತರೇ ಆಗಲಿ, ಆಶ್ರಮದ ನಿಯಮಗಳನ್ನೆಲ್ಲಾ ಪಾಲಿಸದಿದ್ದರೆ ಅವರಿಗೆ ಆಶ್ರಮದಲ್ಲಿ ಸ್ಥಾನ ಸಿಗುತ್ತಿರಲಿಲ್ಲ.

ಉದಂಕನು ಗೌತಮರ ಶಿಷ್ಯಸಮೂಹದೊಡನೆ ಕಲೆತನು. ಆಶ್ರಮದ ನಿಯಮಗಳನ್ನು ‘ಚಾ’ ‘ಚೂ’ ತಪ್ಪದೆ ಅನುಸರಿಸಿದನು. ಅಲ್ಲದೆ ಅವನು ಬಹು ಚುರುಕು ಬುದ್ಧಿಯುಳ್ಳವನಾಗಿದ್ದು, ಹೇಳಿದ ಪಾಠಗಳನ್ನೆಲ್ಲಾ ಅತ್ಯಲ್ಪ ಸಮಯದಲ್ಲಿ ಕಲಿತುಕೊಂಡನು. ಆದ್ದರಿಂದ ಅವನು ಗೌತಮನ ಪ್ರೀತಿಗೆ ಪಾತ್ರನಾದನು. ಕುಲಪತಿಯು ಅವನ ಜಾಣ್ಮೆಯನ್ನು ನೋಡಿ ಫಲಿದೂಗಿ

ದನ್ನು ಹೊಗಳಿದನು. ಅಲ್ಲದೆ ಬಹು ರಹಸ್ಯವಾದ ಶಾಸ್ತ್ರಗಳನ್ನು ಅವನಿಗೆ ಹೇಳಿಕೊಟ್ಟನು. ಉದಂಕನಿಗಾದರೋ ಗೌತಮನೇ ಗುರು, ಅವನೇ ದೇವರು, ಅವನೇ ತಾಯಿ, ತಂದೆ! ಅವನ ನುಡಿಯಲ್ಲಿ ಎರಡಿರಲಿಲ್ಲ. ನಡೆಯಲ್ಲಿ ಡೊಂಕಿರಲಿಲ್ಲ. ಸೇವೆಯಲ್ಲಿ ಕೊಂಕಿರಲಿಲ್ಲ ಗುರುಸೇವೆಯಲ್ಲಿ ಅವನಿಗೆ ಸಮಾನರಾದ ಶಿಷ್ಯರು ಯಾರೂ ಬೇರೆ ಇರಲಿಲ್ಲ. ಆದ್ದರಿಂದ ಗೌತಮನು ಇಡೀ ಆಶ್ರಮದ ಹೊರೆಯನ್ನೇ ಒಮ್ಮೊಮ್ಮೆ ಅವನ ಮೇಲೆ ಹೊರಿಸಿ ತಾನು ತನ್ನ ಕಾರ್ಯನಿಮಿತ್ತ ದೂರದೇಶಗಳಿಗೆ ಹೋಗಿಬರುತ್ತಿದ್ದನು.

ಒಂದು ದಿನ ಕುರುರಾಜನಿಂದ ಗೌತಮನಿಗೆ ಕರೆ ಬಂತು. ಕುರುರಾಜನು ದೊಡ್ಡ ಯಾಗ ಮಾಡಬೇಕೆಂದು ನಿಶ್ಚಯಿಸಿದ್ದನು. ಗೌತಮನು ಕೂಡಲೇ ಉದಂಕನನ್ನು ಕರೆದು—"ಉಂದಕಾ ನೀನೇ ಆಶ್ರಮವನ್ನು ನೋಡಿಕೊಂಡಿರು. ನಾನು ಸ್ವಲ್ಪ ಕಾಲದಲ್ಲಿಯೇ ಬರುವೆನು" ಎಂದು ಹೇಳಿ ಹೊರಟುಹೋದನು. ಉದಂಕನು, ಇನ್ನೂ ಬಾಲಕನಾಗಿದ್ದನು. ಆದರೂ ಅವನು ನಿತ್ಯ ನಿಯಮಗಳಿಗೆ ಎಳ್ಳಷ್ಟೂ ಲೋಪ ಬಾರದಂತೆ ನೋಡಿಕೊಂಡು ಆಶ್ರಮವನ್ನು ಪಾಲಿಸತೊಡಗಿದನು. ಗೌತಮ ಋಷಿಯು ಸ್ವಲ್ಪ ಸಮಯದಲ್ಲಿಯೇ ಬರುತ್ತೇನೆಂದು ಹೇಳಿದರೂ ವರ್ಷವಾದರೂ, ಹಿಂದಿರುಗಲಿಲ್ಲ. ಒಂದು ವರ್ಷ ಕಳೆಯಿತು, ಎರಡನೆಯ ವರ್ಷ ದಾಟಿತು. ಕುಲಪತಿಯ ಸುಳಿವೇ ಇಲ್ಲ. ಆದರೆ ಉದಂಕನು ಹೆದರಿದನೇ?—"ಗುರುವು ಸ್ವಲ್ಪ ಸಮಯದಲ್ಲೇ ಬರುವನು" ಎಂದು ಶಿಷ್ಯರಿಗೆಲ್ಲಾ ಹೇಳುವನು. ಗುರುಪತ್ನಿಯು ಹೇಳಿದ ಕೆಲಸವನ್ನು ಮಾಡುವನು. ನಾಲ್ಕು ವರ್ಷಗಳು ಕಳೆದ ನಂತರ ಗೌತಮನು ಹಿಂದಿರುಗಿದನು. ಅವನು ಆಶ್ರಮವು ಚಲೋ ರೀತಿಯಿಂದ ನಡೆಯುತ್ತಿದ್ದುದನ್ನು ನೋಡಿ ಸಂತೋಷಭರಿತನಾದನು. ಉದಂಕನನ್ನು ಕೊಂಡಾಡಿದನು.

ಆಶ್ರಮವಾಸವು ಸಾಗಿತು. ಉದಂಕನಿಗೆ ಇಪ್ಪತ್ತು ವರ್ಷಗಳು ತುಂಬಿದವು. ಯೌವನ ಪ್ರವೇಶವಾಯಿತು. ಆಗ ಅವನ ಓರಗೆಯವರನ್ನು ಕುಲಪತಿಯು ಕರೆದು ಅವರಿಗೆ ಬೇಕಾದ ವರಗಳನ್ನು ಕೊಟ್ಟು ಕಳುಹಿದನು. ಆದರೆ ಉದಂಕನನ್ನು ಗೌತಮನು ಕರೆಯಲೂ ಇಲ್ಲ, ವರವನ್ನು ಕೊಡಲೂ ಇಲ್ಲ; ಎಂದಿನಂತೆ ಅವನು ಗುರು ಶುಶ್ರೂಷೆಯಲ್ಲಿ ನಿರತನಾದನು.

ವರ್ಷಗಳು ಉರುಳಿದವು. ಆದರೆ ಉದಂಕನ ವಿದ್ಯಾಭ್ಯಾಸ ಮುಗಿಯಲಿಲ್ಲ. ಗುರುಸೇವೆಯೂ ಅಂತ್ಯವಾಗಲಿಲ್ಲ. ಗೌತಮನ ವರದಾನವು ಉದಂಕನಿಗೆ ದೊರೆಯಲಿಲ್ಲ. ಕಾಲ ಕಳೆಯಿತು. ಯೌವನವೂ ದಾಟಿತು. ಉದಂಕನ ಗುರುಶುಶ್ರೂಷೆ ಕಮ್ಮಿಯಾಗಲಿಲ್ಲ. ಅವನು ತನ್ನ ನಿತ್ಯದ ಕೆಲಸವನ್ನು ತಪ್ಪದೆ ಮಾಡುವನು. ಆದರೂ ತನ್ನ ಮನೆ ತಾನು ಮಾಡಿಕೊಂಡು ಬಾಳುವ ಸಂದರ್ಭ ಬರಲಿಲ್ಲವೆಂದು ಅವನು ಮನಸ್ಸಿನಲ್ಲೇ ಮರುಗುತ್ತಿದ್ದನು.

ಒಂದು ದಿನ ಉದಂಕನು ಸೌದೆ ಹೊರೆಯನ್ನು ಹೊತ್ತು ತಂದು ಆಶ್ರಮದ ಬಾಗಿಲಿನಲ್ಲಿಳಿಸುವಾಗ ಅವನ ಸೌದೆ ಹೊರೆಗೆ ಸಿಕ್ಕಿಕೊಂಡ ಅವನ ತಲೆಯ ಕೂದಲುಗಳು ತುಂಡಾಗಿ ಅದರೊಡನೆ ಕೆಳಗೆ ಬಿದ್ದುವು. ಅವನ ಕೂದಲು ಬೆಳ್ಳಗೆ ತೋರಿದುವು ಕೂಡಲೆ ತನಗೆ ವೃದ್ಧಾಪ್ಯವುಂಟಾದುದನ್ನು ನೋಡಿ ಅವನ ಕಣ್ಣುಗಳಲ್ಲಿ ನೀರು ತುಂಬಿತು. ಆಶ್ರಮದ ಬಾಗಿಲಿನಲ್ಲಿ ನಿಂತಿದ್ದ ಗೌತಮನು ಅದನ್ನು ಕಂಡು—"ವಯಸ್ಯಾ ನಿನ್ನ ಮನಸ್ಸಿನಲ್ಲಿರುವ ಕಳವಳವೇನು?" ಎಂದು ಕೇಳಿದನು. ಉದಂಕನು ಕಣ್ಣನ್ನು ಒರಸಿ "ಗುರುವರ್ಯಾ" ನನ್ನ ಓರಗೆಯವರಿಗೆಲ್ಲಾ ಬೇಕಾದ ವರಗಳನ್ನು ಕರುಣಿಸಿದೆ. ನನ್ನಿಂದ ಎಳೆಯವರಿಗೂ ಗುರುಪ್ರಸಾದ ದೊರಕಿತು. ನಾನು ಗುರುವನ್ನು ಎಳೆಪ್ರಾಯದಿಂದಲೂ ಸೇವಿಸುತ್ತಿರುವೆನಾದರೂ ನನ್ನ ಮೇಲೆ ಗುರುವಿಗೆ ದಯೆಯುಂಟಾಗಲಿಲ್ಲ. ವರ ದಯಪಾಲಿಸಲಿಲ್ಲ. ಈಗ ನನ್ನ ಕೂದಲು ನೆರೆತಿದೆ. ಅದನ್ನು ನೋಡಿ ಕಣ್ಣೀರು ಸುರಿಯಿತು" ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಸಂಯಮೀಶ್ವರನಾಗಿದ್ದ ಗೌತಮನಿಗೆ ಉದಂಕನ ಹೃದಯದ ಒಳತೋಟಿಯರಿವುಂಟಾಯಿತು. ಅವನು ಉದಂಕನನ್ನು ನೋಡಿ—"ಉದಂಕಾ, ಪ್ರಾಯಹೋಯಿತೆಂದು ನೀನು ವ್ಯಸನಪಡಬೇಡ. ಪರಮತೇಜಸ್ವಿಯಾದ ನಿನಗೆ ಸರಿಯಾದ ವಧು ನನ್ನ ಮಗಳು. ಅವಳನ್ನು ನಿನಗೆ ಮದುವೆ ಮಾಡಬೇಕೆಂದು ನಾನು ನಿಶ್ಚಯಮಾಡಿರುವೆನು. ಗುರುಪುತ್ರಿಯನ್ನು ಮದುವೆಯಾಗುವುದು ಪಾಪವೆಂದು ತಿಳಿಯದೆ ನೀನು ಅವಳನ್ನು ಮದುವೆಯಾಗು. ನಿನಗೆ ಯೌವನವನ್ನು ಕೊಟ್ಟಿರುವೆನು", ಎಂದನು.

ಕೂಡಲೇ ಉದಂಕನ ಮುಪ್ಪು ಮಾಯವಾಯಿತು. ಅವನು

ತುಂಬು ಜನ್ಮನವನ್ನು ಧರಿಸಿದನು. ಗುರುವಿಗೆ ತನ್ನ ಮೇಲಿದ್ದ ಪ್ರೇಮಾತಿಶಯವನ್ನು ನೋಡಿ, ಅವನ ಎದೆಯು ಸಂತೋಷದಿಂದ ಉಬ್ಬಿತು. ಅವನು ಗೌತಮನ ಕಾಲುಗಳ ಮೇಲೆ ಬಿದ್ದು—"ಮಹಾತ್ಮಾ ತಮ್ಮಪ್ಪಣೆಯನ್ನು ಅಂಗೀಕರಿಸಿದೆನು. ಆದರೆ ನಾನಿನ್ನೂ ಗುರುದಕ್ಷಿಣೆಯನ್ನು ಸಲ್ಲಿಸಲಿಲ್ಲ. ಗುರುಕಾಣಿಕೆಯನ್ನೊಪ್ಪಿಸದೆ, ನನ್ನ ಬ್ರಹ್ಮಚರ್ಯವು ಕೊನೆಗಾಣದು. ಮನಸ್ಸಿನಲ್ಲಿರುವ ಅಪೇಕ್ಷೆಯನ್ನು ತಿಳಿಸಿದರೆ ಅದನ್ನು ಸಲ್ಲಿಸುವೆನು" ಎಂದನು.

ಗೌತಮನು ಉದಂಕನ ಮೇಲೆ ದಯಾದೃಷ್ಟಿಯನ್ನು ಬೀರಿ ಅವನನ್ನು ಹಿಡಿದೆತ್ತಿ—"ಉದಂಕನೇ ನಿನ್ನ ಸಚ್ಚರಿತವೇ ನನಗೆ ಗುರುಕಾಣಿಕೆ. ನನಗೆ ಬೇರೆ ಗುರುದಕ್ಷಿಣೆಯು ಹಂಗೇಕೆ? ಮನಸ್ಸಿನಲ್ಲಿ ಆಸೆಗೆ ಮನೆಮಾಡಲು ನಾನು ಅವಕಾಶಕೊಡುವವನಲ್ಲ. ನೀನೇನನ್ನೂ ತರುವುದು ಬೇಡ" ಎಂದು ಹೇಳಿದನು. ಉದಂಕನಿಗೆ ಗುರುವಿನ ನಿಷ್ಕಾಮ ಪ್ರೇಮವನ್ನು ನೋಡಿ ಆಶ್ಚರ್ಯವಾಯಿತು. ಅನಂತರ ಅವನು ಮಾತೃಸ್ವರೂಪಿಣಿಯಾದ ಗುರುಪತ್ನಿಯ ಬಳಿಗೆ ಹೋಗಿ, ಅವಳ ಕಾಲುಗಳಿಗೆ ಅಡ್ಡಬಿದ್ದು, "ತಾಯೇ ತಾವಾದರೂ ಗುರುದಕ್ಷಿಣೆಯನ್ನು ಸ್ವೀಕರಿಸಬೇಕು. ತಮ್ಮಿಷ್ಟವನ್ನು ನನಗೆ ಅರುಹಬೇಕು", ಎಂದು ಪ್ರಾರ್ಥಿಸಿಕೊಂಡನು. ಅವಳೂ ತನಗೇನೂ ಬೇಡವೆಂದು ಹೇಳಿದಳು. ಉದಂಕನು ಮತ್ತೂ ಒತ್ತಾಯಮಾಡಲು "ಉದಂಕನೇ ಸೌದಾಸ ಭೂಪತಿಯ ಪತ್ನಿ ಮದಯಂತಿಯೆಂಬವಳ ಕಿವಿಯಲ್ಲಿರುವ ಕುಂಡಲಗಳನ್ನು ತಂದುಕೊಡು" ಎಂದು ಹೇಳಿದಳು. ಉದಂಕನು ಕೂಡಲೇ ಸೌದಾಸನೃಪನನ್ನು ನೋಡಲು ಹೊರಟುಹೋದನು. ಸ್ವಲ್ಪ ಸಮಯದಲ್ಲಿ ಹೊರಗೆ ಹೋಗಿದ್ದ ಗೌತಮ ಋಷಿಯು ಬಂದು ಉದಂಕನಿಲ್ಲದಿರುವುದನ್ನು ನೋಡಿ ಅವನೆತ್ತ ಹೋದನೆಂದು ಅಹಲ್ಯೆಯನ್ನು ಕೇಳಲು ಅವಳು ನಡೆದ ವಿಷಯವನ್ನು ತಿಳಿಸಿದಳು. ಆಗ ಗೌತಮನಿಗೆ ವ್ಯಸನವಾಯಿತು. ಆ ಸೌದಾಸ ನರಪತಿಯು ಶಾಪಗ್ರಸ್ತನಾಗಿ ಅಸುರೀ ಧರ್ಮವನ್ನು ಸ್ವೀಕರಿಸಿ ಕಾಡಿನಲ್ಲಿ ಕಾಲಕಳೆಯುತ್ತಿರುವನು. ಉದಂಕನು ಅವನ ಕೈಗೆ ಸಿಕ್ಕಿ ಮರಣವನ್ನು ಹೊಂದುವ ಸಂದರ್ಭವೊದಗಿತಲ್ಲಾ" ಎಂದು ಅವನು ಮರಗಿದನು. ಈ ವರ್ತಮಾನವನ್ನು ಕೇಳಿ ಅಹಲ್ಯೆಗೆ ಗಾಬರಿಯಾಯಿತು. "ತಿಳಿಯದೆ ನಾನು ಸೌದಾಸನ ಪತ್ನಿಯ ಕರ್ಣಕುಂಡಲವನ್ನು ಅಪೇಕ್ಷಿಸಿದೆ. ಈಗ

ಉದಂಕನನ್ನು ಅಪಾಯದಿಂದ ತಪ್ಪಿಸು” ಎಂದು ಅವಳು ಗೌತಮನನ್ನು ಬೇಡಿಕೊಂಡಳು. ಆಗ ತ್ರಿಕಾಲಜ್ಞಾನಿಯಾದ ಋಷಿಯು ಸ್ವಲ್ಪ ಹೊತ್ತು ಧ್ಯಾನಮಗ್ನನಾದನು. ಆ ಮೇಲೆ ಉದಂಕನಿಗೆ ಅಪಾಯವು ಸಂಭವಿಸಲಾರದೆಂದು ಹೇಳಿ ತನ್ನ ನಿತ್ಯ ಕರ್ಮದಲ್ಲಿ ಆಸಕ್ತನಾದನು.

ಉದಂಕನು ತನ್ನ ಕಾರ್ಯನಿಮಿತ್ತವಾಗಿ ಸೌದಾಸನನ್ನು ಹುಡುಕುತ್ತಾ ಹೋಗಿ ಅವನನ್ನು ಒಂದು ಅಡವಿಯಲ್ಲಿ ಸಂಧಿಸಿದನು. ಸೌದಾಸನು ಅವನನ್ನು ಕಂಡು, “ಭಲಾ ಅರಸುವುದಕ್ಕಿಂತ ಮೊದಲೇ ಬಳ್ಳಿಯೇ ಕಾಲ್ತೊಡಕಿತು. ನೀನಾಗಿಯೇ ನನ್ನ ಕೈಗೆ ಸಿಕ್ಕಿದೆ. ನಿನ್ನನ್ನು ಸಂಹರಿಸುವೆನು” ಎಂದನು. ಆಗ ಉದಂಕನು ಧೈರ್ಯವನ್ನು ಕಳಕೊಳ್ಳದೆ ರಾಜನ ಮುಂದೆ ನಿಂತು —“ಮಹಾರಾಜ! ಗುರು ಕಾರ್ಯಕ್ಕಾಗಿ ನಾನಿಲ್ಲಿಗೆ ಬಂದಿರುವೆನು. ನಾನು ಗೌತಮನ ಶಿಷ್ಯನು ಗುರುದಕ್ಷಿಣಾರ್ಥವಾಗಿ ಇಲ್ಲಿ ನಿಂತಿರುವೆನು. ಬಡವನಾದ ನನ್ನೊಡನೆ ಹಿಂಸಾತ್ಮಕ ಮಾತುಗಳನ್ನು ಹೇಳುವುದು ರಾಜಧರ್ಮವೇ?” ಎಂದು ಕೈಜೋಡಿಸಿ ಹೇಳಿಕೊಂಡನು. ಸೌದಾಸನಿಗೆ ಗೌತಮನ ಹೆಸರು ಕೇಳಿ ಮನಸ್ಸು ಸ್ವಲ್ಪ ಶಾಂತವಾಯಿತು. “ರಾಜಧರ್ಮ ನನಗೆ ಗೊತ್ತಿಲ್ಲ. ಈ ಅಡವಿಯ ಮಧ್ಯದಲ್ಲಿ ಮೂರನೆಯ ದಿನ ಮೂರನೆಯ ಝಾಮದಲ್ಲಿ ಯಾರು ಬರುವರೊ ಅವರನ್ನು ಸಂಹರಿಸಬೇಕೆಂದು ನಿರ್ಜರರು ಹೇಳಿದ್ದಾರೆ. ಆದ್ದರಿಂದ ಈಗ ನಿನ್ನನ್ನು ಕೊಂದರೆ ನನಗಿಂದು ದೋಷವಿಲ್ಲ, ಏನನ್ನುವೆ?” ಎಂದು ಸೌದಾಸನು ಹೇಳಿದನು. ಉದಂಕನಿಗೆ ಮುಂದೆ ಏನೂ ಉಪಾಯ ತೋರಲಿಲ್ಲ, ಅವನು “ಸೌದಾಸನೇ, ನಾನು ಗುರುವಾದ ಗೌತಮರ ಕಾರ್ಯವನ್ನು ಮುಗಿಸಿದ ಮೇಲೆ ಇಲ್ಲಿಗೆ ಬರುವೆನು. ಆ ಮೇಲೆ, ನಿನ್ನಿಷ್ಟದಂತೆ ಮಾಡಬಹುದು. ಈಗ ನನ್ನ ಮನೋಭಿಲಾಷೆಯನ್ನು ಪೂರ್ತಿಗೊಳಿಸು. ನಾನು ಸುಳ್ಳು ಹೇಳುವವನಲ್ಲ” ಎಂದು ಹೇಳಿದನು. ಸೌದಾಸನು —“ಹಾಗೆಯೇ ಆಗಲಿ, ಈಗ ನಿನ್ನ ಮನೋವಾಂಛಿತವೇನು?” ಎಂದು ಕೇಳಲು, ಉದಂಕನು ಅವನ ಪತ್ನಿಯ ಕರ್ಣಕುಂಡಲವನ್ನು ಯಾಚಿಸಿದನು. ಸೌದಾಸನು —“ಕಿವಿಯೋಲೆಯು ನನ್ನ ಹೆಂಡತಿಯದು. ಬೇರೆಯವರ ಆಸ್ತಿಯನ್ನು ನಾನು ನಿನಗೆ ಹೇಗೆ ಕೊಡಲಿ? ನೀನೇ ಹೋಗಿ ಅವಳನ್ನು ಕೇಳು. ಅವಳು ಕೊಡ

ಬಹುದು"— ಎಂದು ಹೇಳಿಕಳುಹಿಸಿದನು.

ಉದಂಕನು ಆ ಮೇಲೆ ಸೌದಾಸನ ರಾಜಧಾನಿಗೆ ಹೋಗಿ ಅಂತಃಪುರದಲ್ಲಿದ್ದ ಮದಯಂತಿಯನ್ನು ಕಂಡು ಅವಳ ಗಂಡನು ಹೇಳಿದ ಮಾತುಗಳನ್ನು ತಿಳಿಸಿದನು. ಮದಯಂತಿಯು ಅವನ ಮಾತನ್ನು ಕೇಳಿ—"ಮುನಿವರ್ಯ, ಬೇಡಿದ್ದನ್ನು ಕೊಡುವುದು ಕ್ಷತ್ರಿಯರ ಪದ್ಧತಿ. ನೀನು ಕೇಳಿದ ಕುಂಡಲಗಳನ್ನು ಕೊಡಲು ನನಗೆ ಅಡ್ಡಿಯಿಲ್ಲ. ಆದರೆ ನನ್ನ ಪತಿಯು ಜೀವಂತನಾಗಿರುವಾಗ ಅವನಪ್ಪಣೆಯಿಲ್ಲದೆ ಕುಂಡಲಗಳನ್ನು ಕೊಡಲು ನನಗೆ ಅಧಿಕಾರವೆಲ್ಲಿ? ನೀನು ನನ್ನ ಪತಿಯಿಂದ ಏನಾದರೂ ಕುರುಹನ್ನು ತಂದೊಪ್ಪಿಸಿದರೆ ನಿನ್ನ ಬಯಕೆಯನ್ನು ಸಲ್ಲಿಸುವೆನು" ಎಂದು ಹೇಳಿದಳು. ಒಡನೆ ಮುನಿಯು ಸೌದಾಸ ಭೂಪಾಲನಿದ್ದ ಸ್ಥಳಕ್ಕೆ ಹೋಗಿ ಮದಯಂತಿಯು ಹೇಳಿದ ಮಾತುಗಳನ್ನು ತಿಳಿಸಿ ಏನಾದರೂ ಕುರುಹನ್ನು ಕೊಡಬೇಕಾಗಿ ಕೇಳಿಕೊಂಡನು. ಆಗ ರಾಜನ ಕೋಪವು ಗೌತಮನ ಮಹಿಮೆಯಿಂದ ತಣಿಯುತ್ತಾ ಬರುತಿತ್ತು. ಅವನು—"ಉದಂಕ ಮುನಿಯೇ, ರಾಜರು ಭೂಸುರರನ್ನು ಪಾಲಿಸುವರು, ಭೂಸುರರೂ ರಾಜರ ಪ್ರಜೆಗಳು. ಪ್ರಜೆಗಳು ಕೇಳಿದ್ದನ್ನು ಕೊಟ್ಟು ಮಕ್ಕಳಂತೆ ಅವರನ್ನು ಪಾಲಿಸುವುದು ರಾಜಧರ್ಮ. ಕೇಳಿದ್ದನ್ನು ಕೊಡದಿದ್ದುದರಿಂದ ನಾನು ಶಾಪಗ್ರಸ್ತನಾದೆನು. ಆದ್ದರಿಂದ ಬೇರೇನನ್ನು ಆಲೋಚಿಸದೆ ತಾನು ಧರಿಸಿರುವ ಕುಂಡಲಗಳನ್ನು ಕೊಡುವುದೇ ಉತ್ತಮ ಕೃತ್ಯವೆಂದು ಕುರುಹಿನ ಮಾತನ್ನು ಒಯ್ಯು", ಎಂದು ಹೇಳಿದನು ಉದಂಕನು ಸಂತೋಷಾತಿಶಯದಿಂದ ಮದಯಂತಿಯ ವಾಸಸ್ಥಾನಕ್ಕೆ ಹೋಗಿ ಸೌದಾಸನ ಕುರುಹಿನ ಮಾತುಗಳನ್ನು ತಿಳಿಸಿದನು. ಕೂಡಲೇ ಮದಯಂತಿಯು ತನ್ನ ಕುಂಡಲಗಳನ್ನು ತೆಗೆದು ಉದಂಕನ ಕೈಯಲ್ಲಿಟ್ಟು—"ಬ್ರಹ್ಮಚಾರಿಯೇ—ಈ ಕುಂಡಲಗಳಲ್ಲಿರುವ ಮಣಿಗಳ ಮಹಿಮೆಯು ಅಗಾಧವಾಗಿದೆ. ಇವನ್ನು ಧರಿಸಿದರೆ ಹಸಿವು ನೀರಡಿಕೆ ತಗ್ಗುವವು, ವಿಷ, ಚಿಂತೆ, ರೋಗ ಮೊದಲಾದವುಗಳ ಪೀಡೆಯುಂಟಾಗದು. ಭೂತ ಭೇತಾಳರೂ ತೊಲಗಿ ಹೋಗುವರು. ಸಕಲೈಶ್ವರ್ಯವೂ ಕೈಸೇರುವುದು. ಆದ್ದರಿಂದ ಸುರನರೋಗರು ಇದನ್ನು ಕಸಿದುಕೊಂಡು ಹೋಗಲು ಸಮಯ ನಿರೀಕ್ಷಿಸುತ್ತಿರುವರು. ಆದ್ದರಿಂದ ನೀನೆ

ಚ್ಚರದಿಂದಿರಬೇಕು. ಈ ಕುಂಡಲಗಳನ್ನು ಮಣ್ಣಿನ ಮೇಲಿಟ್ಟರೆ, ಅವಕ್ಕೆ ಎಂಜಲು ತಾಗಿದರೆ, ಅವನ್ನು ಕೈಯಲ್ಲಿಟ್ಟು ನಿದ್ದೆ ಮಾಡಿದರೆ ಕೂಡಲೇ ಸುರನರೋಗರು ಅವನ್ನು ಅಪಹರಿಸಿಬಿಡುವರು. ಆ ಮೇಲೆ ಅವು ನಿನ್ನ ಕೈಗೆ ಸಿಕ್ಕವು. ನೀನಿವನ್ನು ತೆಗೆದುಕೊಂಡು ಹೋಗಿ ಗುರುಗಳಿಗೊಪ್ಪಿಸಿ ನಿನ್ನಿಷ್ಟಾರ್ಥಗಳನ್ನು ಪಡೆ” ಎಂದು ಹೇಳಿದಳು.

ಉದಂಕನಿಗಾಗ ಕಡು ಬಡವನಿಗೆ ನಿಧಿ ದೊರಕಿದಂತೆ ಹೆಚ್ಚು ಸಂತೋಷವಾಯಿತು. ಅವನು ಈ ಸಂತೋಷವನ್ನು ತೋರಿಸಲು ಸೌದಾಸನಲ್ಲಿಗೆ ಹೋದನು. ಮುನಿಯು ಕೈಯಲ್ಲಿದ್ದ ಕುಂಡಲಗಳನ್ನು ನೋಡಿದ ಕೂಡಲೇ ಆ ರಾಜನ ಶಾಪವಿಮೋಚನೆಯಾಯಿತು. ಅರಸನು ಶಾಂತನಾದನು. ಅವನು ಮುನಿಗೆ ನಮಸ್ಕರಿಸಿ “ಮುನಿವರ್ಯಾ, ನಿನ್ನಿಂದ ನನ್ನ ಶಾಪ ವಿಮೋಚನೆಯಾಯಿತು. ನಾನಿನ್ನು ನನ್ನ ರಾಜ್ಯಕ್ಕೆ ಹೋಗುವೆನು” ಎಂದು ಹೇಳಿ ಅಡವಿಯನ್ನು ಬಿಟ್ಟನು. ಉದಂಕನು ಇದು ಗುರು ಮಹಿಮೆ, ಎಂದು ಮನಸ್ಸಿನಲ್ಲಿ ಅಂದುಕೊಂಡು, ಕುಂಡಲಗಳನ್ನು ತಾನು ಹೊದೆದ ಕೃಷ್ಣಾಜಿನದ ಸೆರಗಿನಲ್ಲಿ ಕಟ್ಟಿ ಗೌತಮಾಶ್ರಮದ ದಾರಿ ಹಿಡಿದನು.

ಆದರೆ ಅವನ ಗುರುಭಕ್ತಿಯನ್ನು ತೂಕಮಾಡಲು ಇನ್ನೊಂದು ಪ್ರಸಂಗ ಒದಗಿತು. ಉದಂಕನು ದಾರಿ ನಡೆದು ಹೋಗುತ್ತಿರಲು ಅವನಿಗೆ ಹಸಿವೆಯಾಯಿತು. ಮುಂದೆ ಅವನಿಗೆ ಕಾಡಿನಲ್ಲಿ ಜಂಬುನೇರಳೆ ಹಣ್ಣಿನ ಮರವು ಕಾಣಸಿಕ್ಕಿತು. ಹಸಿವಿನಿಂದ ಬಳಲಿದ್ದ ಉದಂಕನು ಆ ಮರದಲ್ಲಿದ್ದ ಹಣ್ಣುಗಳನ್ನು ನೋಡಿ, ತಾನು ಹೊದೆದಿದ್ದ ಕೃಷ್ಣಾಜಿನವನ್ನು ಒಂದು ಮರಕ್ಕೆ ತೂಗಹಾಕಿ, ತಾನು ಹಣ್ಣಿನ ಮರವನ್ನೇರಿ ಹಣ್ಣುಗಳನ್ನು ಕೊಯ್ಯುವುದರಲ್ಲಿ ಆಸಕ್ತನಾದನು. ಅಷ್ಟರಲ್ಲಿ ದೂರದಲ್ಲಿ ಯಾವನೋ ಒಬ್ಬ ಮುದುಕನು ನಡೆದುಬರುತ್ತಿದ್ದನು. ಉದಂಕನು ಮರವನ್ನೇರಿದಾಗ ಅವನ ಸುಳಿವು ಸಮೀಪವೇ ತೋರಿತು. ಅವನು ಮರದ ಬುಡವನ್ನು ಸೇರಿದಾಗ ಬಲವಾದ ಗಾಳಿಯೊಂದು ಬೀಸಿತು. ಮರಕ್ಕೆ ತಗಲಿಸಿಬಿಟ್ಟಿದ್ದ ಕೃಷ್ಣಾಜಿನವು ದೊಪ್ಪನೆ ಬಿತ್ತು. ಅದನ್ನು ಕಂಡು ಉದಂಕನು ಸರಸರನೆ ಮರದಿಂದಿಳಿದನು. ಆದರೆ ಆ ಮುದುಕನು ಕೃಷ್ಣಾಜಿನವನ್ನೆತ್ತಿಕೊಂಡು ಕಾಲಿಗೆ ಬುದ್ಧಿ ಹೇಳಿದನು. ಉದಂಕನು ಅವನನ್ನು ಹಿಂಬಾಲಿಸಿದನು. ಆ ಮುದುಕನು

ಮೆಲ್ಲ ಮೆಲ್ಲನೆ ನಡೆಯುತ್ತಿದ್ದವನು ಉದಂಕನನ್ನು ಕಂಡು ವಾಯುವೇಗ ದಿಂದ ಓಡಲಾರಂಭಿಸಿದನು. ಗೌತಮ ಶಿಷ್ಯನು ತನ್ನನ್ನೇ ತಾನು ನಿಂದಿಸಿ ಕೊಂಡನು. ತನ್ನ ತಪ್ಪಿಗಾಗಿ ಮರುಗಿದನು. ಉಸಿರುಕಟ್ಟಿ ಓಡಿ ಮುದುಕ ನನ್ನು ಸಮೀಪಿಸಿದನು. ಆಗ ಆ ಮುದುಕನು ಕೂಡಲೇ ನಾಗನಾಗಿ ಪಕ್ಕ ದಲ್ಲಿದ್ದ ಹುತ್ತವೊಂದನ್ನು ಹೊಕ್ಕು ಕಾಣದಾದನು.

ಬಹು ಪ್ರಯತ್ನದಿಂದ ಪಡೆದ ಕುಂಡಲಗಳು ಕೈತಪ್ಪಿ ಹೋದುವು. ಉದಂಕನ ವ್ಯಸನಕ್ಕೆ ಅಂತ್ಯವೇ ತೋರಲಿಲ್ಲ. ಆದರೆ ಗೌತಮ ಶಿಷ್ಯನು ತನ್ನ ಛಲವನ್ನು ಬಿಡಲಿಲ್ಲ. ತನ್ನ ದಂಡದಿಂದ ಅವನು ಭೂಮಿಯನ್ನು ಅಗೆಯತೊಡಗಿದನು. ಆಗ ಭೂಮಿಯೇ ನಡುಗಿತು. ಭೂಲೋಕದಲ್ಲಿದ್ದ ಜನರೆಲ್ಲರಿಗೆ ಭಯವುಂಟಾಯಿತು. ಆಗ ಒಬ್ಬ ಬ್ರಾಹ್ಮಣನು ಅಲ್ಲಿ ತೋರಿ ದನು. ಅವನು ಉದಂಕನ ಮುಂದೆ ನಿಂತು—"ವಯಸ್ಯಾ, ಇದೇನು ಭೂಮಿ ಯನ್ನು ದಂಡದಿಂದ ಅಗೆಯುತ್ತಿರುವೆ?" ಎಂದು ಕೇಳಿದನು. ಉದಂಕನು ನಡೆದ ಸಂಗತಿಗಳನ್ನೆಲ್ಲಾ ಅವನಿಗೆ ತಿಳಿಸಿದನು. ಆ ವಿಪ್ರೋತ್ತಮನು ತುಸು ವೇಳೆ ಆಲೋಚನಾಮಗ್ನನಾಗಿ "ವಯಸ್ಯಾ—ನಿನ್ನ ಕೈಯಲ್ಲಿದ್ದ ಕುಂಡಲಗಳನ್ನು ಕದ್ದುಕೊಂಡು ಹೋದವನು ಸರ್ಪರಾಜನು. ಅವನು ಪಾತಾಳ ಲೋಕಕ್ಕೆ ಹೋಗಿರುವನು. ನಿನಗಿನ್ನೆಂತು ಕುಂಡಲಗಳು ಲಭಿಸುವವು?" ಎಂದನು.

"ಆ ಕಳ್ಳನು ಪಾತಾಳ ಲೋಕದಲ್ಲೇ ಇರಲಿ! ಇಲ್ಲವೇ ಸ್ವರ್ಗ ಲೋಕದಲ್ಲಿಯೇ ಇರಲಿ! ನಾನು ಅವನನ್ನು ಹುಡುಕಿ ಕುಂಡಲಗಳನ್ನು ತರ ದಿರಲಾರೆನು" ಎಂದು ಉದಂಕನು ಪ್ರತ್ಯುತ್ತರವನ್ನು ಕೊಟ್ಟನು. ಅವನ ಹಟಮಾರಿತನವನ್ನು ಕಂಡು ಆ ವಿಪ್ರನು ತಲೆದೂಗಿದನು—"ನಿನ್ನ ಕಾರ್ಯವು ಜಯವಾಗಲಿ" ಎಂದು ಹೇಳಿ ಅವನು ಮಾಯವಾದನು. ಉದಂಕನು ದಂಡದಿಂದ ಮಣ್ಣನ್ನು ಅಗೆಯುವುದನ್ನು ನಿಲ್ಲಿಸಲಿಲ್ಲ. ಆ ಮುದುಕ ಬ್ರಾಹ್ಮಣನು ಮಾಯವಾದೊಡನೆ ಅವನ ಕೈಯಲ್ಲಿದ್ದ ದಂಡವು ಕುಲಿಶವು ಗಿರಿಗಳನ್ನು ಭೇದಿಸುವಂತೆ ಭೂಮಿಯನ್ನು ಭೇದಿಸಿತು. ಪಾತಾಳ ಲೋಕಕ್ಕೆ ಹೋಗಲು ಒಂದು ಹಾದಿಯೇ ಉಂಟಾಯಿತು. ಅದನ್ನು ನೋಡಿ ಉದಂಕನಿಗೆ ಆಶ್ಚರ್ಯವು ಇಮ್ಮಡಿಯಾಯಿತು. ಅವನು ದಾರಿ ಹಿಡಿದು ನಾಗಲೋಕದ ಕಡೆ ಸಾಗಿದನು.

ಸ್ವಲ್ಪ ಸಮಯದಲ್ಲಿಯೇ ಅವನಿಗೆ ಪಾತಾಳ ಲೋಕವು ಕಾಣಿಸಿತು. ಅದುವೇ ತಕ್ಷಕನ ರಾಜಧಾನಿ. ಅಲ್ಲಿ ಸಾವಿರಾರು ನಾಗರು ವಾಸವಾಗಿದ್ದರು. ಅವರ ಅರಮನೆಗಳು ವಜ್ರವೈಡೂರ್ಯಾದಿಗಳಿಂದ ಅಲಂಕರಿಸಲ್ಪಟ್ಟಿದ್ದುವು. ಆ ನವರತ್ನಗಳ ಹೊಳಪು ಸೂರ್ಯನ ಬೆಳಕನ್ನು ಧಿಕ್ಕರಿಸುತ್ತಿತ್ತು. ಆ ಅರಮನೆಗಳನ್ನು ನೋಡಿದ ಕೂಡಲೆ ಉದಂಕನ ಕಣ್ಣು ಕುಕ್ಕಿದಂತಾಯಿತು. ಆತನಿಗೆ ಮುಂದೆ ಹಾದಿಯೇ ಕಾಣಲಿಲ್ಲ. ಪಾತಾಳ ಲೋಕವಾದರೋ ಪಂಚಯೋಜನ ವಿಸ್ತೀರ್ಣವಾಗಿತ್ತು. ಅಲ್ಲಿ ದಾರಿ ಕಂಡುಹಿಡಿದು ಸರ್ಪರಾಜನ ಮನೆಗೆ ಹೋಗುವ ಬಗೆ ಹೇಗೆ—ಎಂದು ಅವನು ಚಿಂತಿಸಿದನು. ಆದರೆ ಧೈರ್ಯಗುಂದಲಿಲ್ಲ ಅವನು ಗುರುವನ್ನು ಸ್ಮರಿಸುತ್ತಾ ಮುಂದೆ ನಡೆದನು. ಆಗ ಒಂದು ಕುದುರೆಯು ಅಲ್ಲಿಗೆ ಬಂತು ಅದರ ವೈನಯವಾಗಿತ್ತು. ಆದರ ರೋಮಗಳು ಬೆಳ್ಳಿಯಂತೆ ಹೊಳೆಯುತ್ತಿದ್ದುವು. ಅದು ಉದಂಕನ ಬಳಿ ನಿಂತು ಮನುಷ್ಯಭಾಷೆಯಲ್ಲಿ—"ಎಲೈ ಮುನಿಯೇ ನನ್ನ ಪಾದವನ್ನು ಮುಟ್ಟು. ನಿನ್ನಿಷ್ಟಸಿದ್ಧಿಯಾಗುವುದು. ಗೌತಮಾಶ್ರಮದಲ್ಲಿ ನನ್ನ ಉಪಾಸನೆ ನಿತ್ಯವೂ ಮಾಡಿದೆ. ಆದಕ್ಕಾಗಿ ನಾನು ಮೆಚ್ಚಿರುವೆ. ನಿನ್ನ ಗುರುವಿನ ಗುರುವು ನಾನು, ಹೆದರಬೇಡ" ಎಂದಿತು. ಉದಂಕನು ಆ ಮಾತಿಗಾಶ್ಚರ್ಯಪಟ್ಟು, ಗುರು ಮಹಿಮೆಯನ್ನು ಹೊಗಳುತ್ತಾ ಆ ತುರಗದ ಪಾದವನ್ನು ಬಹು ಭಯಭಕ್ತಿಯಿಂದ ಮುಟ್ಟಿ ನಮಸ್ಕರಿಸಿದನು. ಕೂಡಲೇ ಆ ಕುದುರೆಯ ರೋಮಗಳಲ್ಲಿ ಹೊಗೆಯೆದ್ದಿತು. ಆದರ ನಾಸಾಪುಟದಿಂದ ಬೆಂಕಿಯ ಜ್ವಾಲೆಯೆದ್ದು—ಪಾತಾಳ ಲೋಕವನ್ನು ಆವರಿಸಿತು. ಒಡನೆ ಹಾ, ಹಾ, ರವವು ನಾಗಲೋಕದಲ್ಲಿ ಕೇಳಿಸಿತು. ಉರಿಯನ್ನು ಸಹಿಸಲಾರದೆ ನಾಗರು ತಕ್ಷಕನಲ್ಲಿಗೆ ಹೋಗಿ ತಮ್ಮ ಸಂಕಷ್ಟಗಳನ್ನು ಅರಿಕೆಮಾಡಿದರು. ತಕ್ಷಕನು ಪಾತಾಳ ಲೋಕಕ್ಕೆ ಬಂದ ವಿಪತ್ತನ್ನು ನೋಡಿ ಕೂಡಲೇ ಕುಂಡಲಗಳನ್ನು ತೆಗೆದುಕೊಂಡು ಬಂದು ಉದಂಕನ ಮುಂದೆ ನಿಂತು ಅವನನ್ನು ಸ್ತುತಿಸಿ ಅವುಗಳನ್ನು ಅವನಿಗೊಪ್ಪಿಸಿದನು. ಉದಂಕನ ಕೋಪವು ತಣಿಯಿತು. ಆಗ ಕುದುರೆಯು ಅದರ ಬಾಲವನ್ನು ಹಿಡಿದುಕೊಳ್ಳಲು ಹೇಳಿತು. ಉದಂಕನು ಅದರ ಬಾಲವನ್ನು ಹಿಡಿದ ಕೂಡಲೇ ಉದಂಕನು ಭೂಲೋಕವನ್ನು ಸೇರಿ

ದನು. ಆವನು ತುಂಬಿದ ಹರ್ಷದಿಂದ ಕುದುರೆಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿದನು. ಅದು ಕೂಡಲೇ ಮಾಯವಾಯಿತು

ತಡಮಾಡದೆ ಉದಂಕನು ಗೌತಮಾಶ್ರಮವನ್ನು ಸೇರಿದನು. ಗುರು ಪತ್ನಿಯಾದ ಅಹಲ್ಯೆಯನ್ನು ಕಂಡು, ಕುಂಡಲಗಳನ್ನು ಅರ್ಪಿಸಿ, ಆವಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಆಗ ಕುಲಪತಿಯಾದ ಗೌತಮನು ಅಲ್ಲಿಗೆ ಬಂದು, ನಡೆದ ವಿಷಯಗಳನ್ನೆಲ್ಲಾ ಉದಂಕನಿಂದ ತಿಳಿದು— "ವಯಸ್ಯಾ, ನೀನು ಮಹಾ ತೇಜಸ್ವಿಯು. ಇಲ್ಲದಿದ್ದರೆ ಆ ಕುಂಡಲಗಳು ನಿನ್ನ ಕೈಸೇರುತ್ತಿರಲಿಲ್ಲ. ಪಾತಾಳ ಲೋಕಕ್ಕೆ ಹೋಗಲು ಸಹಾಯಮಾಡಿದ ಬ್ರಾಹ್ಮಣನೇ ದೇವೇಂದ್ರನು. ಆವನು ನಿನ್ನ ದಂಡಕ್ಕೆ ಕುಲಿಶದ ಶಕ್ತಿಯನ್ನು ಕೊಟ್ಟದ್ದರಿಂದ ನಿನಗೆ ಪಾತಾಳ ಲೋಕಕ್ಕೆ ಹೋಗಲು ದಾರಿಯಾಯಿತು ಪಾತಾಳ ಲೋಕದಲ್ಲಿಯೂ ಸಹಾಯಮಾಡಿದ ಕುದುರೆಯೇ ಇಂದ್ರನ ಉಚ್ಚೈಃಶ್ರವಸ್ಸು ನಿನಗೆ ದೇವೇಂದ್ರನ ಪ್ರಸಾದವು ನಿನ್ನ ಮಹಿಮೆಯಿಂದ ದೊರಕಿತು. ನಿನ್ನ ಹೆಸರು ಮೂಲೋಕಗಳಲ್ಲಿಯೂ ಹರಡಿತು" ಎಂದನು.

ಆ ಮೇಲೆ ಶುಭಮೂಹೂರ್ತದಲ್ಲಿ ತನ್ನ ಮಗಳನ್ನು ಉದಂಕನಿಗೆ ಧಾರೆಯೆರದು ಕೊಟ್ಟನು. ಉದಂಕನು ಸಂತೋಷಸಾಗರದಲ್ಲಿ ತೇಲಾಡಿದನು.

೬. ಯವನ ವೀರ.

ಸಾವಿರಾರು ವರ್ಷಗಳ ಹಿಂದೆ, ಯವನ ದ್ವೀಪದಲ್ಲಿ ವೈಸಿನಿ ಎಂಬ ನಗರವಿತ್ತು. ಅದು ವೈಭವದಲ್ಲಿ ವೈಜಯಂತಿಗೆ ಸಮಾನವಾಗಿತ್ತು; ಐಶ್ವರ್ಯದಲ್ಲಿ ಅಳಕಾವತಿಗೆ ಸಾಟಿಯಾಗಿತ್ತು, ಸೌಖ್ಯದಲ್ಲಿ ಸ್ವರ್ಗಕ್ಕೆ ಎಣೆಯಾಗಿತ್ತು. ಆ ನಗರದಲ್ಲಿ ವಾಸಿಸುತ್ತಿದ್ದವರು ಯವನರು. ಅವರನ್ನು ಗ್ರೀಕರೆಂದೂ ಕರೆಯುತ್ತಿದ್ದರು. ಗ್ರೀಕರು ಕೆಚ್ಚೆದೆಯ ವೀರರು. ಧೈರ್ಯ, ಸ್ಥೈರ್ಯ ಮತ್ತು ಶೌರ್ಯಗಳಲ್ಲಿ ಅವರನ್ನು ಮೀರಿಸಿದವರೇ ಇಲ್ಲ. ಮಕ್ಕಳನ್ನು ಹುಟ್ಟಿದಂದಿನಿಂದಲೇ ವೀರರನ್ನಾಗಿ ಮಾಡುವ ಪ್ರಯತ್ನ ಅಲ್ಲಿಯ ಜನರದು. ಅವರ ಮಕ್ಕಳ ತೊಟ್ಟಿಲೆಂದರೆ ಕಬ್ಬಿಣದ ಗುರಾಣಿ. ಮರದ ಅಥವಾ ಬಿದಿರಿನ ಹೆಣಿಗೆಯ ತೊಟ್ಟಿಲಲ್ಲ!

ವೈಸಿನಿಯ ಹೆಸರುವಾಸಿಯಾದ ರಾಜ ಅಂಬತ್ರಯ. ಅವನ ರಾಣಿಯ ಹೆಸರು ಅಲಕಾಮಣಿ. ಕೆಲವು ವರ್ಷಗಳ ವರೆಗೆ ರಾಜದಂಪತಿಗಳು ಸುಖವಾಗಿ ಕಾಲಕಳೆದರು. ಆದರೆ ಬಹುಕಾಲದ ವರೆಗೆ ಅವರಿಗೆ ಮಕ್ಕಳಾಗಲಿಲ್ಲ. ಕಡೆಗೆ ಅವರು ದೇವಾಧಿದೇವನಾದ ಜ್ಯೋಯುಸನ್ನು ಪ್ರಾರ್ಥಿಸಿ, ಅವನ ವರಪ್ರಸಾದವನ್ನು ಸಂಪಾದಿಸಿಕೊಂಡರು. ಆ ವರಪ್ರಸಾದದ ಬಲದಿಂದ ಅಲಕಾಮಣಿಯು ಅವಳಿಜವಳಿ ಗಂಡುಮಕ್ಕಳನ್ನು ಹೆತ್ತಳು. ರಾಜನು ತಕ್ಕ ಕಾಲದಲ್ಲಿ ಮಕ್ಕಳಿಗೆ ಜಾತಕರ್ಮಾದಿಗಳನ್ನು ಮಾಡಿಸಿದನು. ಅವರಿಗೆ ಹರಿಕುಲಿಶ ಮತ್ತು ಉಪಕುಲಿಶ ಎಂದು ನಾಮಕರಣ ಮಾಡಿದನು. ಮಕ್ಕಳು ಬೆಳ್ದಿಂಗಳ ಎಳವೆರೆಯ ಸೋಪಾದಿಯಲ್ಲಿ ಬೆಳೆಯುತ್ತಾ ತಾಯ್ತಂದೆಯರ ಮನಸ್ಸಿಗೆ ಸಂತೋಷವನ್ನುಂಟುಮಾಡಿದರು.

ಮಕ್ಕಳಿಗೆ ಹತ್ತು ತಿಂಗಳಾದಾಗ, ಒಂದು ದಿನ ರಾತ್ರಿ ಅಲಕಾಮಣಿಯು ಅವರನ್ನು ಮೀಯಿಸಿ, ಹಾಲೂಡಿಸಿ, ಗುರಾಣಿಯ ತೊಟ್ಟಿಲಲ್ಲಿ ಮಲಗಿಸಿದಳು; ಇಂಪಾದ ಸ್ವರದಿಂದ ಜೋಗುಳ ಹಾಡಿದಳು. ಆ ಹಸುಗೂಸುಗಳು ತಾಯಿಯ ಇಂಪಾದ ಹಾಡನ್ನು ಕೇಳುತ್ತಿದ್ದಂತೆಯೇ ನಿದ್ದೆಹೋದರು. ಅಲಕಾಮಣಿಯು ಅವರನ್ನು ಮುದ್ದಿಸಿ, ಪಕ್ಕದಲ್ಲಿದ್ದ ಮಂಚದಲ್ಲಿ ಮಲಗಿದಳು. ಕೂಡಲೇ ನಿದ್ರಾದೇವಿಯ ವಶಳಾದಳು.

ಆ ಕೋಣೆಯು ನಿಶ್ಶಬ್ದವಾಗಿತ್ತು. ಮಕ್ಕಳ ಉಚ್ಛ್ವಾಸನಿಶ್ವಾಸಗಳ ದನಿಯಲ್ಲದೆ ಮತ್ತೇನೂ ಕೇಳುತ್ತಿರಲಿಲ್ಲ. ಆದರೆ, ಮಧ್ಯರಾತ್ರಿಯಾದಾಗ ಮಕ್ಕಳ ತೊಟ್ಟಿಲು ಅಲುಗಾಡಿತು. ಒಡನೆ ಹರಿಕುಲಿಶನಿಗೆ ಎಚ್ಚರವಾಯಿತು. ಅವನು ಕಣ್ತೆರೆದು ನೋಡಿದನು. ದೀಪದ ಮಿಣಿಮಿಣಿ ಬೆಳಕಿನಲ್ಲಿ ಇದೇನು ಕಾಣುತ್ತಿದೆ! ಎರಡು ಸರ್ಪಗಳು ಹೆಡೆಯೆತ್ತಿ ನಿಂತಿವೆ! ಮಕ್ಕಳನ್ನು ಕಚ್ಚಲು ತಲೆಯನ್ನು ತೂಗುತ್ತಿವೆ! ಆ ವಿಷ ಸರ್ಪಗಳು! ನರಕದ ರೂಪುಗಳು! ಆದರೆ ಹರಿಕುಲಿಶನಿಗೆ ಆ ವಿಷ ಸರ್ಪಗಳು ಹಗ್ಗದ ತುಂಡುಗಳಾಗಿದ್ದಂತೆ ತೋರಿರಬೇಕು. ಅವನು ಒಡನೆ ತನ್ನ ಪುಟ್ಟ ಕೈಗಳಿಂದ ಆ ಸರ್ಪಗಳ ಕತ್ತುಗಳನ್ನು ಹಿಡಿದುಬಿಟ್ಟನು. ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ, ಅವುಗಳ ಕತ್ತುಗಳನ್ನು ಹಿಸುಕಿಯೇ ಬಿಟ್ಟನು. ಅವು ಆ ಮಗುವಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಮಿಸುಕಾಡಿದುವು. ಬಾಲಗಳನ್ನು ಬಡಿದಾಡಿದುವು. ಆದರೆ ಹರಿಕುಲಿಶನ ಹಿಡಿತ ಯಮನ ಹಿಡಿತವಾಗತೊಡಗಿತು. ಆ ಸರ್ಪಗಳಿಗೆ ಉಸಿರುಕಟ್ಟಿತು. ಬಾಲಗಳು ಮಾತ್ರ ಹರಿದಾಡಿದುವು. ಆಗ ಉಪಕುಲಿಶನಿಗೆ ಎಚ್ಚರವಾಯಿತು, ಅವನು ಹಾವುಗಳನ್ನು ನೋಡಿ ಚಿಟ್ಟನೆ ಚೀರಿದನು. ಆ ಶಬ್ದವು ಅಲಕಾಮಣಿಯನ್ನು ಎಚ್ಚರಿಸಿತು ಅವಳು ಕೂಡಲೇ ಅಂಬತ್ರಯನನ್ನು ಕೂಗಿದಳು.

ರಾಜನು ಕಳ್ಳರು ಬಂದಿರಬಹುದೆಂದು ಊಹಿಸಿ, ಒಡನೆ ಎದ್ದನು. ತನ್ನ ಹಾಸಿಗೆಯ ಪಕ್ಕದಲ್ಲೇ ಇದ್ದ ಖಡ್ಗವನ್ನು ಹಿಡಿದುಕೊಂಡನು. ಅಂಗರಕ್ಷಕರನ್ನೂ, ಮೈಗಾವಲಿನವರನ್ನೂ ಕರೆದು, ಸೂಟಿಗಳನ್ನು ಹಿಡಿದುಕೊಂಡು ಬರುವಂತೆ ಹೇಳಿ ಮಕ್ಕಳು ಮಲಗಿದ್ದ ಕೋಣೆಗೆ ಓಡಿದನು. ಅದರಲ್ಲಿ ನೋಡುವುದೇನು! ಹರಿಕುಲಿಶನ ಕೈಗಳ ಹಿಡಿಯಲ್ಲಿ ಎರಡು ಹಾವುಗಳಿವೆ! ಅವನಾದರೋ ಹಗ್ಗದ ತುಂಡುಗಳನ್ನು ಹಿಡಿದುಕೊಂಡಂತೆ ಸುಲಭವಾಗಿ ಅವುಗಳನ್ನು ಹಿಡಿದುಕೊಂಡಿದ್ದಾನೆ! ತಂದೆಯು ಬಂದ ಕೂಡಲೇ ಅವನು ಮುಷ್ಟಿಗಳನ್ನು ಸಡಿಲಿಸಿದನು. ಎರಡು ಸತ್ತ ಹಾವುಗಳು ನೆಲದ ಮೇಲೆ ಬಿದ್ದವು. ಅಂಬತ್ರಯನು ತನ್ನ ಕಣ್ಣುಗಳನ್ನೇ ನಂಬದಾದನು. ಅವನು ಹರಿಕುಲಿಶನ ಕೈಗಳನ್ನು ಪನ್ನೀರಿನಿಂದ ತೊಳೆಯಿಸಿ, ಅವನನ್ನೆತ್ತಿಕೊಂಡು ಮುದ್ದಾಡಿದನು.

ತನ್ನ ಮಗನ ಸಾಹಸಕೃತ್ಯವನ್ನು ನೋಡಿ, ಅಲಕಾಮಣಿಗೆ ಆಶ್ಚರ್ಯವೂ, ಸಂತೋಷವೂ ಒಮ್ಮೆಗೇ ಉಂಟಾದುವು. ಆದರೆ ಅಸಾಧಾರಣವಾದ ಶಕ್ತಿಯು ಮಗುವಿಗೆ ಹೇಗೆ ಬಂತೆಂದು ಅವಳು ತಿಳಿಯಲು ಕುತೂಹಲಪಟ್ಟಳು. "ಆ ಮಗು ನಿಜವಾಗಿಯೂ ನನ್ನ ಮಗುವೇ? ಎಂದು ತನ್ನನ್ನೇ ಪ್ರಶ್ನಿಸಿಕೊಂಡಳು. ಮರುದಿನ ಊರಿನ ಹಿರಿಯ ಜೋಯಿಸನಲ್ಲಿಗೆ ಆಳುಗಳನ್ನು ಅಟ್ಟಿದಳು. ಅವನು ಬಂದ ಕೂಡಲೇ ಹಿಂದಿನ ರಾತ್ರಿಯ ವೃತ್ತಾಂತವನ್ನೆಲ್ಲಾ ಅವನಿಗೆ ತಿಳಿಸಿ ಮಗುವಿನ ಭವಿಷ್ಯವನ್ನು ಕೇಳಿದಳು; ಆ ಜೋಯಿಸನು ಮಗುವನ್ನು ನೋಡಿ, ಅದರ ಮೈ ಕೈ ಕಾಲುಗಳಲ್ಲಿದ್ದ ರೇಖೆಗಳನ್ನೂ, ಗುರ್ತುಗಳನ್ನೂ ಪಟ್ಟಿಮಾಡಿಕೊಂಡನು. ಆ ಮೇಲೆ "ತಾಯಿ! ಈ ನಿನ್ನ ಪುತ್ರನು ವೀರಾಧಿವೀರನಾಗುವನು. ಅವನಿಗೆ ಸರಿಗಟ್ಟುವ ವೀರರು ಹಿಂದೆ ಹುಟ್ಟಿಲ್ಲ, ಇನ್ನು ಹುಟ್ಟಲಾರರು, ಎಂದು ಜನರಾಡುವಂತೆ ಹನ್ನೆರಡು ಅದ್ಭುತ ಕಾರ್ಯಗಳನ್ನು ಮಾಡುವನು. ಅತೀ ಬಲಿಷ್ಠವಾದ ಪ್ರಾಣಿಗಿಂತಲೂ ಅವನು ಬಲಿಷ್ಠನಾಗುವನು. ಆ ಮೇಲೆ ಆಲಿಂಪಿಯ ಗಿರಿಯನ್ನೇರಿ ದೇವಗಡಣವನ್ನು ಸೇರುವನು" ಎಂದನು. ಆ ಮಾತುಗಳನ್ನು ಕೇಳಿ ಅಲಕಾಮಣಿಯು ಸಂತೋಷದ ಸಮುದ್ರದಲ್ಲಿ ತೇಲಾಡಿದಳು. ಆ ಜೋಯಿಸನು ಹೇಳಿದ ವಾರ್ತೆಯನ್ನು ಅಂಬತ್ರಯನು ತಿಳಿದು ವೀರನಿಗುಚಿತವಾದ ವಿದ್ಯೆಯನ್ನು ಮಕ್ಕಳಿಗೆ ಕಲಿಸಲು ಏರ್ಪಾಡು ಮಾಡಿದನು.

ಆ ಮಕ್ಕಳು ಕೃಷ್ಣ ಬಲರಾಮರಂತೆ ಜೊತೆಯಲ್ಲಿಯೇ ಎಲ್ಲಾ ವಿದ್ಯೆಗಳನ್ನು ಸಾಧಿಸಲು ತೊಡಗಿದರು. ಆದರೆ ಹರಿಕುಲೀಶನ ಬುದ್ಧಿಶಕ್ತಿ ಬಹು ತೀಕ್ಷ್ಣವಾಗಿತ್ತು. ಅವನು ಉಪಕುಲೀಶನನ್ನು ಎಲ್ಲಾ ಸಾಧನೆಗಳಲ್ಲಿಯೂ ಮೀರಿದನು. ಮೊದಲು ಅವನು ಅಕ್ಷರಾಭ್ಯಾಸದಲ್ಲಿ ಪ್ರವೀಣತೆಯನ್ನು ತೋರಿದನು. ಆ ಮೇಲೆ ಸಂಗೀತಾಭ್ಯಾಸವೂ ಆಯಿತು. ಅವನ ತಂದೆಯೇ ಸ್ವತಃ ರಥವನ್ನೋಡಿಸುವ ಕ್ರಮವನ್ನು ಕಲಿಸಿದನು. ಈಟಿ ಭರ್ಚಿಗಳ ಪ್ರಯೋಗಾಭ್ಯಾಸವೂ, ಜರಗಿತು. ಕುಸ್ತಿ, ಮುಷ್ಟಿಪ್ರಯೋಗಾದಿಗಳು ಶಾಸ್ತ್ರೀಯ ರೀತಿಯಲ್ಲಿಯೇ ಕಲಿಸಲ್ಪಟ್ಟುವು. ನಿಂತುಕೊಂಡೇ ರಥವನ್ನು ಓಡಿಸುವ ಕ್ರಮದಲ್ಲಿ ಅವನು ಪ್ರವೀಣನಾದನು. ಗರಡಿ

ಸಾಧಕ, ಮತ್ತು ಅಂಗಸಾಧಕಗಳಿಂದ ಅವನ ದೇಹಪುಷ್ಟವಾಯಿತು. ಅವನ ಮಾಂಸಖಂಡಗಳು ಉಕ್ಕಿನ ತುಂಡುಗಳಂತೆ ಗಟ್ಟಿಯಾದುವು, ಹಗಲಿಡೀ ಅವನು ತಂದೆಯೊಡನಿರುವನು. ರಾತ್ರಿಯೂ ಅವನು ತಂದೆಯ ಬಳಿಯಲ್ಲಿಯೇ, ಕೇಸರಿಯ ಚರ್ಮದ ಮೇಲೆ ಮಲಗುವನು. ಹೀಗೆ ಅವನು ಸಕಲ ಶಾಸ್ತ್ರಪಾರಂಗತನಾಗುವಾಗ ಅವನಿಗೆ ತಾರುಣ್ಯವು ಪ್ರಾಪ್ತವಾಯಿತು. ಆಗ ಅವನ ತಂದೆಯು ದೇಶಪದ್ಧತಿಯಂತೆ ಅವನನ್ನು ಸ್ವಲ್ಪ ದೂರದ ಪರ್ವತಾಗ್ರದಲ್ಲಿ ವಾಸಮಾಡುತ್ತಿದ್ದ ಗೋಪಾಲಕರಲ್ಲಿಗೆ ಕಳುಹಿಸಿಕೊಟ್ಟನು. ಅಲ್ಲಿ ಗೋಪಾಲಕರೊಡನೆ ಜೀವನದ ಕಷ್ಟಸುಖಗಳನ್ನು ಅನುಭವಿಸಲೆಂಬುದೇ ಆ ರಾಜನ ಉದ್ದೇಶವಾಗಿತ್ತು.

ಹರಿಕುಲಿಶನು ಗೋಪಾಲಕರೊಡನೆ ಕಲೆತನು. ಅವರ ಬಾಳಿನ ಹುರುಳನ್ನು ತಿಳಿದು, ಅವರ ಕಷ್ಟಸುಖಗಳಲ್ಲಿ ಭಾಗಿಯಾದನು. ಅವನಿಗೇ ಒಂದು ಕುರಿ ಮಂದೆ ಮತ್ತು ದನದ ಹಿಂಡು ಒಪ್ಪಿಸಲ್ಪಟ್ಟಿದ್ದುವು. ಅವುಗಳ ಚ್ಯಾರಿಕೆಯನ್ನು ತೆಗೆದುಕೊಂಡು ಅವನು ಕಷ್ಟದಿಂದ ಜೀವನ ಮಾಡಬೇಕಿತ್ತು. ಹಗಲು ಉರಿಬಿಸಿಲಿನಲ್ಲಿ ಬೆಂದು, ಕಾಳ್ಹೊನಲುಗಳ ನೀರನ್ನು ಕುಡಿದು, ಹಣ್ಣು ಹಂಪಲುಗಳನ್ನು ತಿಂದು ಹಸಿವು ನೀರಡಿಕೆಗಳನ್ನು ಕಳೆದುಕೊಳ್ಳಬೇಕಾಗಿತ್ತು. ಆದರೆ ಕಷ್ಟದ ಜೀವನಕ್ಕೆ ಹರಿಕುಲಿಶನು ಹೆದರುವವನೇ? ರಾಜಮನೆತನದಲ್ಲಿ ಜನ್ಮವೆತ್ತಿದರೂ ಅವನು ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ಗಟ್ಟಿಮುಟ್ಟಾಗಿ ಬೆಳೆದನು.

ಒಂದು ದಿನ ಅವನು ಪರ್ವತದ ಕಣಿವೆಯಲ್ಲಿ ಮಂದೆಯನ್ನು ಮೇಯಬಿಟ್ಟು, ಮಧ್ಯಾಹ್ನದ ಉರಿಬಿಸಿಲನ್ನು ತಡೆಯಲಾರದೆ ಒಂದು ಮರದಡಿಯ ನೆಳಲಿನಲ್ಲಿ ಮಲಗಿದನು. ಅವನಿಗೆ ಕೂಡಲೇ ನಿದ್ದೆ ಬಂತು. ಆಗ ಅವನಿಗೆ ಒಂದು ಕನಸು ಬಿತ್ತು. ಆ ಕನಸಿನಲ್ಲಿ ಅವನು ಒಂದು ಪ್ರದೇಶದಲ್ಲಿ ನಡೆದು ಸಾಗುತ್ತಿದ್ದಂತೆ ಅವನಿಗೆ ತೋರಿತು. ಹಾಗೆ ನಡೆದು ಹೋಗುತ್ತಿದ್ದಾಗ ದಾರಿಯು ಕವಲೊಡೆಯಿತು. ಅವುಗಳಲ್ಲೊಂದು ಕವಲು ಚಲೋದಾದ ದಾರಿ; ಅದರಲ್ಲಿ ಹಳ್ಳತಿಟ್ಟುಗಳಿರಲಿಲ್ಲ, ಅದು ನೇರವಾಗಿ ಸಾಗಿ ಹೋಗಿ, ಸ್ವಲ್ಪ ದೂರದಲ್ಲಿ, ಒಂದು ಬೆಟ್ಟವನ್ನಿಳಿದು, ಮುಂದೆ ಒಂದು ಚೆಂದವಾದ ಪಟ್ಟಣವನ್ನು ಸೇರುವಂತೆ ತೋರಿತು. ಆ ಪಟ್ಟಣದ ಮನೆ

ಗಳ ಉಪ್ಪರಿಗೆಗಳೂ, ಮಾಡುಗಳೂ ಕಾಣಿಸುತ್ತಿದ್ದುವು.

ಆದರೆ ಇನ್ನೊಂದು ಬಹು ಕಷ್ಟದ ಹಾದಿ. ಆ ರಸ್ತೆಯು ಮೈದೊರಗು ಅದು ನರರಿಗೆ ದುರ್ಗಮವಾದ ಹಾದಿ. ಅದರಲ್ಲಿ ಹಳ್ಳ ಕೊಳ್ಳಗಳೂ, ಎತ್ತರ ತಗ್ಗುಗಳೂ ಅಲ್ಲಲ್ಲಿದ್ದುವು. ಅದು ಬೆಟ್ಟಗುಡ್ಡಗಳನ್ನೇರಿ, ಮೇಲೆ ಮೇಲೆ ಹೋಗಿ, ಮುಂದೆ ಒಂದು ಪರ್ವತದ ಶಿಖರದ ತುದಿಯನ್ನು ಸೇರಿ, ಮುಗಿಲನ್ನು ಮುಟ್ಟುತ್ತಿದ್ದಂತೆ ಅವನಿಗೆ ತೋರಿತು. ಆದ್ದರಿಂದ ಮುಂದೆ ಯಾವ ಹಾದಿ ಹಿಡಿಯುವುದೆಂಬ ವಿಷಯವು ಹರಿಕುಲಿಶನಿಗೆ ಬಿಗುವಾದ ಆಲೋಚನೆಗೆಡೆಮಾಡಿತು. ಅವನು ಆಲೋಚಿಸುತ್ತಾ ನಿಂತನು.

ಆಗ ಆ ಪಟ್ಟಣದ ದಾರಿಗಾಗಿ ಯಾರೋ ನಡೆದು ಬರುವಂತೆ ತೋರಿತು. ಆ ವ್ಯಕ್ತಿಯು ಹತ್ತಿರ ಬಂದಾಗ ಎಳೆಹರೆಯದ ಹೆಂಗುಸೆಂದು ಅವನಿಗೆ ಸ್ಪಷ್ಟವಾಯಿತು. ಅವಳು ಸ್ವಲ್ಪ ಹೊತ್ತಿನಲ್ಲೇ ಹರಿಕುಲಿಶನ ಮುಂದೆ ನಿಂತು, ಮಂದಹಾಸದಿಂದ ಮುಗುಳ್ನಗೆಯನ್ನು ಬೀರಿದಳು. ಅವಳು ಜರಿ ಸೀರೆಯನ್ನುಟ್ಟಿದ್ದಳು. ಆ ಸೀರೆಯಲ್ಲಿ ನಾನಾ ಬಣ್ಣದ ಹೂಗಳಿದ್ದುವು. ಆದರೆ ಅವಳು ತಲೆಯಲ್ಲಿ ಮುಡಿದ ಹೂಗಳು ಬಾಡಿಹೋಗಿದ್ದುವು. ಅವಳು ಹರಿಕುಲಿಶನನ್ನು ದಿಟ್ಟಿಸಿ ನೋಡಿ "ಬಹುಶಃ ದಾರಿ ತೋಚದೆ ನಿಂತಿರಬೇಕು" ಎಂದಳು. ಹರಿಕುಲಿಶನು "ಹೌದು ಯಾವ ದಾರಿಗಾಗಿ ನಡೆದು ಹೋದರಾದೀತೆಂದು ಆಲೋಚಿಸುತ್ತಿದ್ದೇನೆ" ಎಂದನು. ಆಗ ಅವಳು— "ಏಕೆ, ನಾನು ಬಂದ ಹಾದಿಯೇ ಉತ್ತಮ. ನೋಡಲ್ಲಿ ಪಟ್ಟಣ, ಆ ಪಟ್ಟಣದ ಜನರೆಲ್ಲಾ ಒಳ್ಳೆಯವರೇ. ನಿನಗೆ ಬೇಕಾದುದನ್ನೆಲ್ಲಾ ಕೇಳಿದ ಕೂಡಲೇ ಅವರು ಕೊಡುವರು ನೀನು ದೂಳಿಗೆ ಕಾಲಿಡುವುದು ಬೇಡ! ಬಿಸಿಲಿಗೆ ಮೋರೆ ತೋರುವುದು ಬೇಡ! ನೀನು ಕೆಲಸ ಮಾಡುವುದೇ ಅಗತ್ಯವಿಲ್ಲ! ಇಡೀ ದಿನ ಉದ್ಯಾನವನಗಳಲ್ಲಿ ಕುಳಿತು, ಕಾರಂಜಿಗಳ ಚಿಮ್ಮುದನಿಯನ್ನೋ ಹಕ್ಕಿಗಳ ಮೇಲುದನಿಯನ್ನೂ ಕೇಳಿ ಆನಂದಪಡೆಯಬಹುದು. ಬೇಕಾದಾಗ ವೀಣಾಗಾನವನ್ನು ಕೇಳಬಹುದು. ಅಲ್ಲಿರುವುದೇ, ಸಿರಿಸಂತಸಗಳ ಸುಗ್ಗಿ ಎನ್ನುವೆ" ಎಂದು ವೈಯ್ಯಾರದಿಂದ ಹೇಳಿ ಒಂದು ಮುಗುಳ್ನಗೆಯನ್ನು ಬೀರಿದಳು. ಆಗ ಅವನು ತನ್ನ ಕಣ್ಣುಗಳನ್ನು ಪಟ್ಟಣದ ಕಡೆ ತಿರುಗಿಸಿದನು. ನಿಜವಾಗಿಯೂ ಇಂಪಾದ ಸಂಗೀತವು ಪಟ್ಟಣದ ಕಡೆ

ಯಿಂದ ಕೇಳಬರುತಿತ್ತು. ಆ ನಗರದ ಸುತ್ತು ಉದ್ಯಾನಗಳಿದ್ದುವು. ಆ ಉದ್ಯಾನದ ಮರಗಳು ಫಲಪುಷ್ಪಗಳಿಂದ ತುಂಬಿದ್ದುವು. ಆ ನೋಟವೇ ಕಣ್ಣುಗಳಿಗೆ ಹಬ್ಬವನ್ನು ಮಾಡುತ್ತಿದ್ದಂತೆ ಅವನಿಗಾಯಿತು. ಅವನ ಮನಸ್ಸು ಪಟ್ಟಣದ ಕಡೆಗೆ ಹರಿಯಿತು. ಆ ಯುವತಿಯ ಮಾತುಗಳ ನ್ನಾದರಿಸುವುದು ಒಳ್ಳೇಯದೆಂದು ಅವನಿಗನಿಸಿತು.

ಅಷ್ಟರಲ್ಲಿ ಅವನ ಕಣ್ಣು ಬೆಟ್ಟದ ಹಾದಿಯು ಸೆಳೆಯಿತು. ಆ ಹಾದಿಗಾಗಿ ಓರ್ವ ಯುವತಿಯು ನಡೆದುಬಂದು ಅವನ ಮುಂದೆ ನಿಂತಳು. ಅವಳ ಮೈಯನ್ನು ಬಿಳಿಯ ಸೀರೆಯು ಮುಚ್ಚಿತ್ತು. ಅವಳ ತಲೆಯಲ್ಲಿ ಬಿಳಿಯ ಹೂಗಳಿದ್ದುವು. ಅವು ಆಗ ತಾನೇ ಕೊಯ್ದ ಹೂಗಳಂತಿದ್ದುವು. ಅವುಗಳ ಪರಿಮಳಕ್ಕೆ ತುಂಬಿಗಳು ಮೇಲೆ ಹಾರಾಡುತ್ತಿದ್ದುವು. ಆ ಯುವತಿಯ ಕಣ್ಣುಗಳಲ್ಲಿ ವ್ಯಸನದ ಸೂಚನೆಯಿದ್ದರೂ, ಧೈರ್ಯವು ಮಿಂಚುತಿತ್ತು. ಅವಳು ಹರಿಕುಲಿಶನನ್ನು ಸಂಬೋಧಿಸಿ:—' ಹರಿಕುಲಿಶ, ನಿಜವನ್ನು ಕೇಳು. ನನ್ನ ಅಕ್ಕ ನಿನಗೆ ಮೋಸವನ್ನೇ ಮಾಡಬೆಣಿಸಿದ್ದಾಳೆ. ಅವಳ ಮಾತುಗಳನ್ನು ಕೇಳಿ ಆ ಪಟ್ಟಣದಲ್ಲಿ ಸುಖಕ್ಕೆ ಮನಸೋತು, ಇಂದ್ರಿಯಗಳ ವಶನಾದರೆ, ನೀನು ಕೊನೆಗೆ ಕಷ್ಟವನ್ನನುಭವಿಸಬೇಕಾದೀತು. ಆ ಪಟ್ಟಣದ ಸುಖವೆಲ್ಲಾ ವ್ಯರ್ಥ! ಅವು ಕ್ಷಣಿಕ! ನೀನು ಮಾಯೆಯೊಳಗಾಗಬೇಡ. ಆ ಪಟ್ಟಣದ ಹಾದಿಯನ್ನು ಬಿಟ್ಟು, ಈ ಬೆಟ್ಟದ ಹಾದಿಯನ್ನು ಹಿಡಿ. ಅದು ಕಷ್ಟವಾದ ಹಾದಿ ಅಹುದು. ಮೇಲೆ ಮೇಲೆ ಹೋದಂತೆ ಅದು ಇನ್ನಷ್ಟು ಕಷ್ಟವಾಗಿ ಪರಿಣಮಿಸಬಹುದು. ಆದರೆ ಕಷ್ಟಗಳನ್ನು ಕಳೆದಂತೆ ನಿನಗೆ ಆತ್ಮಾನಂದವುಂಟಾಗುವುದು. ಬೆಟ್ಟದ ತುದಿಯಲ್ಲಿ ಬೀಸುವ ಗಾಳಿಯನ್ನು ನೀನು ಸೇವಿಸಬಹುದು. ಅವು ನಿನ್ನ ಆರೋಗ್ಯಕ್ಕೆ ಒಳ್ಳೆಯದು. ಅಷ್ಟೇ ಅಲ್ಲ. ನೀನು ಬೆಟ್ಟವನ್ನು ಹತ್ತುವುದರಿಂದ ನಿನ್ನ ಮನುಷ್ಯತ್ವವು ಪ್ರಕಟವಾಗುವುದು. ನಿನಗೆ ಧೈರ್ಯವಿರುವುದಾದರೆ ಮುಂದೆ ನೀನು ಶಿಖರಾಗ್ರವನ್ನೇರಿ ಅಮರನಾಗಿ ದೇವಗಡಣದೊಡನೆ ಸೇರಿಕೊಳ್ಳುವೆ" ಎಂದಳು. ಅವಳ ಮಾತುಗಳನ್ನು ಕೇಳಿ ಹರಿಕುಲಿಶನಿಗೆ ಸಂತೋಷವಾಯಿತು. "ಇದುವೇ ನನ್ನ ಹಾದಿ" ಎಂದುಬಿಟ್ಟನು. ಕೂಡಲೇ ಅವನಿಗೆಚ್ಚರವಾಯಿತು. ಅವನು ಕಣ್ತೆರೆದು ನೋಡಿದನು. ಸೂರ್ಯನು

ಮುಳುಗುವ ವೇಳೆಯಾಗಿತ್ತು; ಇತರ ಗೋಪಾಲಕರು ತುರುವಿಂಡುಗಳನ್ನು ಮನೆಕಡೆ ಹೊಡಕೊಂಡು ಹೋಗುತ್ತಿದ್ದರು. ಹರಿಕುಲಿಶನೂ ತನ್ನ ಕುರಿ ಮಂದೆಗಳನ್ನೂ, ತುರುವಿಂಡುಗಳನ್ನೂ ಮನೆಕಡೆ ತಿರುಗಿಸಿ ಅವನ್ನು ಹಿಂಬಾಲಿಸಿದನು. ಆ ರಾತ್ರಿ ಇತರ ಗೋಪಾಲಕರೊಡನೆ ತನ್ನ ಕನಸಿನ ವಿಷಯಗಳನ್ನು ವಿವರವಾಗಿ ಹೇಳಿದನು. ಅವರು ಹರಿಕುಲಿಶನು ಹೇಳಿದ ವಿಷಯಗಳನ್ನು ಕೇಳಿ ಆಶ್ಚರ್ಯಭರಿತರಾದರು. ಅವರಲ್ಲಿ ಹಿರಿಯನು ಹರಿಕುಲಿಶನ ಬೆನ್ನು ತಟ್ಟಿ "ನೀನು ಭೂಲೋಕದಲ್ಲಿ ಪ್ರಸಿದ್ಧ ಪುರುಷನಾಗುವೆ. ನಿನ್ನನ್ನು ಅಗಲುವ ಕಾಲ ಬಂದಿದೆ. ನೀನು ಕೂಡಲೇ ನಿನ್ನ ರಾಜಧಾನಿಗೆ ಹೊರಡಬೇಕು" ಎಂದು ಹೇಳಿದನು.

ಮರುದಿನ ಬೆಳಿಗ್ಗೆ ಹರಿಕುಲಿಶನು ಎದ್ದು ಪ್ರಾತಃಕಾಲದ ಕರ್ಮಗಳನ್ನು ಪೂರೈಸಿದನು. ವ್ಯೈಸಿನಿಗೆ ಹೊರಡಲು ಉದ್ಯುಕ್ತನಾದನು. ಅವನನ್ನು ಬೀಳ್ಕೊಡಲು ಗೋಪಾಲಕರೆಲ್ಲರೂ ನೆರೆದರು. ಅಷ್ಟರಲ್ಲಿ ಒಬ್ಬ ವೀರಾಳು ಅವರ ಮುಂದೆ ನಿಂತು "ಹರಿಕುಲಿಶನಿಗೆ ಜಯವಾಗಲಿ", ಅಯೋಲನದ ರಾಜಕುಮಾರನಾದ ಜಯಸೇನನು ತಮ್ಮ ಆಗಮನವನ್ನು ಹಾರೈಸುತ್ತಿರುವನು. ಅವನು ಯವನ ವೀರರ ಸಹಾಯವನ್ನು ಕೋರುತ್ತಿರುವನು ತಾವು ವಿಳಂಬ ಮಾಡದೆ ದಯಮಾಡಿಸಬೇಕು" ಎಂದನು. ಗೋಪಾಲಕರು ಆಶ್ಚರ್ಯಭರಿತರಾಗಿ ಒಬ್ಬರ ಮುಖವನ್ನು ಒಬ್ಬರು ನೋಡಹತ್ತಿದರು. ಹರಿಕುಲಿಶನ ನೆರವು ಅಯೋಲಕದ ರಾಜಪುತ್ರನಿಗೆ ಯಾಕೆ ಬೇಕೆಂದು ಗೊತ್ತಾಗಲಿಲ್ಲ, ಆಗ ಆ ವೀರಾಳು ಅವರನ್ನು ಉದ್ದೇಶಿಸಿ ಹೀಗೆಂದನು. "ಅಯೋಲಕದ ರಾಜ ಹಯಸೇನನ ಮಗನೇ ಜಯಸೇನನು. ಅವನು ಚಿಕ್ಕ ಮಗುವಿರುವಾಗ ಪೆಲಿಯಾಸ ಎಂಬ ರಾಜನು ದಂಡೆತ್ತಿ ಬಂದು ಹಯಸೇನನನ್ನು ಸೆರೆಹಿಡಿದು ರಾಜ್ಯವನ್ನು ವಶಮಾಡಿಕೊಂಡನು. ಹಯಸೇನನನ್ನು ಸೆರೆಮನೆಯಲ್ಲಿಟ್ಟು ಬಂಧಿಸಿದನು. ಆದರೆ ಜಯಸೇನನನ್ನು ಓರ್ವ ದಾಸಿಯು ಊರಿನ ಪರ್ವತದಲ್ಲಿ ವಾಸಮಾಡುತ್ತಿದ್ದ ಕಿಂಪುರುಷರಲ್ಲಿಗೆ ಒಯ್ದು ಅವನ ಹೆಂಡತಿಯ ವಶಕೊಟ್ಟಳು. ಅವರಿಗೆ ಮಕ್ಕಳಿಲ್ಲದಿದ್ದುದರಿಂದ ಜಯಸೇನನನ್ನು ಆ ಕಿಂಪುರುಷ ದಂಪತಿಗಳು ಬಹು ಪ್ರೇಮದಿಂದ ಸಾಕಿದರು. ಎಲ್ಲಾ ವಿದ್ಯೆಗಳನ್ನು ಅವನಿಗೆ ಕಲಿಸಿದರು, ಅವನಿಗ ಇಪ್ಪತ್ತು

ವರ್ಷ ಪ್ರಾಯವಾದಾಗ ಆ ಕಿಂಪುರುಷ ದಂಪತಿಗಳು ಅವನನ್ನು ಕರೆದು, ಆವನ ಪೂರ್ವ ವೃತ್ತಾಂತವನ್ನು ತಿಳಿಸಿದರು. ಅವನು ತಂದೆಗಾದ ಅವ ಮಾನವನ್ನೂ ಕಷ್ಟವನ್ನೂ ತಿಳಿದು, ಕೂಡಲೇ ಆಯೋಲಕದ ಕಡೆಗೆ ಹೊರಟನು.

ಅವನು ನಡೆದು ಹೋಗುವಾಗ ದಾರಿಯಲ್ಲಿ ಒಂದು ಹೊಳೆಯು ಸಿಕ್ಕಿತು. ಆ ಹೊಳೆಯ ಬದಿಯಲ್ಲಿ ಒಬ್ಬಳು ಮುದುಕಿಯು ದಾಟಲಾರದೆ ನಿಂತುಕೊಂಡಿದ್ದಳು. ಜಯಸೇನನು ಕರುಣೆಯಿಂದ ಅವಳನ್ನು ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಹೊಳೆಯನ್ನು ದಾಟುವಾಗ ಅವನ ಒಂದು ಕಾಲಿನ ಮೆಟ್ಟು ಮಣ್ಣಿನೊಳಗೆ ಹೂತುಹೋಯಿತು. ಆ ಮೇಲೆ ಅವನು ಆ ಮುದುಕಿಯನ್ನು ಅಚೆದಡದಲ್ಲಿ ಇಳಿಸಿ, ಒಂದೇ ಮೆಟ್ಟನ್ನು ಕಾಲಿಗೆ ಹಾಕಿಕೊಂಡು ಆಯೋಲಕವನ್ನು ಸೇರಿ. ಪೆಲಿಯಾಸ ರಾಜನನ್ನು ಕಂಡು ತನ್ನ ರಾಜ್ಯವನ್ನು ಹಿಂದೆ ಕೊಡಬೇಕೆಂದು ಕೇಳಿದನು. ಆಗ ಪೆಲಿಯಾಸನು ಉಪಾಯ ಕಾಣದೆ ಆಯೋಲಕದ ದೊರೆತನವು ದೊರಕಬೇಕಾದರೆ ಕೋಲಾಚಲದ ಮರದಲ್ಲಿ ತೂಗಹಾಕಿದ ಹೊಂಗುರಿಯ ಹೆಂಗೂದಲನ್ನು ತಂದರೆ ರಾಜ್ಯವನ್ನು ಬಿಟ್ಟುಕೊಡುವೆನೆಂದನು. ಅದಕ್ಕಾಗಿ ಜಯಸೇನನು ಕೋಲಾಚಲಕ್ಕೆ ಹೋಗಲು ಯುವನ ವೀರರ ಸಹಾಯವನ್ನು ಅಪೇಕ್ಷಿಸು ತ್ತಿರುವನು" ಎಂದನು.

ಆ ವೀರಾಳುವಿನ ಮಾತನ್ನು ಕೇಳಿದ ಕೂಡಲೇ ಹರಿಕುಲಿಶನ ಮೈ ಯಲ್ಲಿ ವೀರೋತ್ಸಾಹವು ತುಂಬಿತು. ಅವನ ಮೈ ನವಿರೆದ್ದಿತು. ಅವನು ಗೋಪಾಲಕರಿಗೆ ವಂದಿಸಿ "ನಾನೀಗಲೇ ಜಯಸೇನನನ್ನು ಸೇರುವೆನು" ಎಂದು ಹೇಳಿ ಆಯೋಲಕಾಭಿಮುಖವಾಗಿ ಹೊರಟನು. ಆಗ ಆ ಗೋಪಾಲ ವೃಂದದಲ್ಲಿ ಯಾವಾಗಲೂ ಹರಿಕುಲಿಶನೊಡನೆ ಇರುತಿದ್ದ ಹಯಾಲಾಸನೆಂಬ ಯುವಕನೂ ಅವನನ್ನು ಹಿಂಬಾಲಿಸಿದನು. ಹರಿಕುಲಿಶನು ಆಯೋಲಕ ವನ್ನು ಸೇರಿ, ಜಯಸೇನನ ಸೈನ್ಯವನ್ನು ಕೂಡಿಕೊಂಡನು.

ಪ್ರಯಾಣಕ್ಕೆ ಎಲ್ಲಾ ಸಿದ್ಧತೆಗಳು ಜರುಗಿದುವು. ಆದರೆ ಕೋಲಾ ಚಲಕ್ಕೆ ಹೋಗಬೇಕಾದರೆ ಸಮುದ್ರ ಪ್ರಯಾಣ ಬೆಳೆಯಿಸಬೇಕಾಗಿತ್ತು. ಜಯಸೇನನು ಅದಕ್ಕಾಗಿ ಒಂದು ಹಡಗವನ್ನು ಕಟ್ಟಿಸಿದನು. ಅದನ್ನು

ಅರಗವೆಂದು ಕರೆದರು. ಅವನೊಡನೆ ಕೋಲಾಚಲಕ್ಕೆ ಹೋಗಲೊಪ್ಪಿದ ಯುವಕ ವೀರರೆಲ್ಲಾ ಆ ಹಡಗವನ್ನು ಹತ್ತಿದರು. ಅರಗವನ್ನು ಹತ್ತಿದರಿಂದ ಅವರಿಗೆ ಅರಗಾವಳಿಗರು ಎಂದು ಹೆಸರಾಯಿತು.

ಶುಭ ವಾರದಲ್ಲಿ, ಶುಭ ದಿವಸದಲ್ಲಿ, ಶುಭ ಮುಹೂರ್ತದಲ್ಲಿ ಜಯಭೇರಿನಿನದವೂ, ಬಂಧುಮಿತ್ರರ ಆಶೀರ್ವಾದ ವಚನಗಳೂ ಆಕಾಶಕ್ಕೇರಲು, ಹಡಗು ಅನುಕೂಲ ಮಾರುತದ ಸಹಾಯ ದಿಂದ ಕೋಲಾಚಲದ ಕಡೆ ಹೊರಟಿತು. ಜಯಸೇನನು ವರುಣನನ್ನೂ, ದೇವಗಡಣವನ್ನೂ ಸಂತೈಸುವುದಕ್ಕಾಗಿ ಪೂಜಾವಿಧಿಗಳನ್ನು ಕೈಕೊಂಡನು. ಕಡಲು ಶಾಂತವಾಗಿ, ಜಲಪ್ರಯಾಣಕ್ಕೆ ಇಂಬನ್ನು ಕೊಟ್ಟಿತು. ಎತ್ತಿದ್ದ ಹಾಯಿಗಳನ್ನು ಅನುಕೂಲ ಮಾರುತವು ತುಂಬಿ, ಹಡಗವನ್ನು ಸಮುದ್ರದ ಮೇಲೆ ವೇಗವಾಗಿ ಓಡಿಸಿತು. ಹೀಗೆ ಮೂರು ಹಗಲು, ಮೂರು ಇರುಳು ಪ್ರಯಾಣ ನಡೆಸಿದ ಮೇಲೆ ಅರಗಾವಳಿಗರು ಪ್ರಶಾಂತಿ ಎಂಬ ಸಮುದ್ರವನ್ನು ತಲಪಿದರು. ಆ ಸಮುದ್ರದ ದಡದಲ್ಲಿ ಚೆಂದವಾದ ಕಾಡುಗಳು ಫಲಪುಷ್ಪಗಳಿಂದಿಡಿದು ಪಯಣಿಗರ ಕಣ್ಮನಗಳನ್ನು ಸೆಳೆದುವು. ಅವರು ಲಂಗರು ಹಾಕಿ, ದಡವನ್ನು ಸೇರಿ, ದಣಿವಾರಿಸಿಕೊಳ್ಳಲು ಅಲ್ಲಿ ಬೀಡು ಬಿಟ್ಟರು. ಹಗಲಿಡೀ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸಿ. ಹೂ ಹಣ್ಣುಗಳನ್ನು ಸಂಗ್ರಹಿಸಿದರು. ಹಿಮದಂತೆ ತಣ್ಣಗಾದ ನೀರನ್ನು ಕುಡಿದರು. ನಡುಹಗಲಿನಲ್ಲಿ ಸೂರ್ಯನ ಸೆಕೆಯಿಂದ ಪಾರಾಗಲು, ತಂಪಾದ ನೆರಳಲ್ಲಿ ಮಲಗಿ ವಿಶ್ರಾಂತಿ ಪಡೆದರು. ರಾತ್ರಿಯನ್ನೂ ಅಂದು ಅಲ್ಲೇ ಕಳೆಯಲು ಎಣಿಸಿ ಊಟಕ್ಕೆ ಸನ್ನಾಹ ಮಾಡಿದರು. ಇರುಳು ಕವಿಯಲು, ಅವರ ಬೀಡಿನ ಬೆಂಕಿಯು ಆ ಪ್ರದೇಶದಲ್ಲೆಲ್ಲಾ ಪ್ರಜ್ವಲಿಸಿತು. ಆ ಹರಿಕುಲಿಶನೊಡನಿದ್ದ ಹಯಾಲಸನು ಕೊಡಪಾನವನ್ನು ತೆಗೆದುಕೊಂಡು ಪಕ್ಕದ ನೀರಿನ ವಸತಿಗೆ ಹೋದನು. ಅಲ್ಲಿ ಹೂಗಿಡಗಳು ತುಂಬಿದ್ದುವು. ಅದರ ಸುತ್ತೂ ಹುಲ್ಲು ಬೆಳೆದಿತ್ತು. ಆದರೆ ಅಲ್ಲಿ ಜಲದೇವತೆಗಳು ವಾಸಮಾಡಿಕೊಂಡಿದ್ದರು. ಹಯಾಲಾಸನು ನೀರಿಗಿಳಿದನು. ಆದರೆ ಅವನ ರೂಪಿಗೆ ಮರುಳಾಗಿ ಜಲಕನ್ನಿಕೆಯೊಬ್ಬಳು ಅವನ ಕೈಯನ್ನು ಹಿಡಿದು ನೀರೊಳಕ್ಕೆ ಎಳೆದುಕೊಂಡು ಬಿಟ್ಟಳೆಂದು ಯವನರು ಹೇಳುತ್ತಾರೆ. ಅವನಿಗೆ ನೀರಿನ

ಆಳವು ಗೊತ್ತಿಲ್ಲದಿದ್ದುದರಿಂದ ಕಾಲುಜಾರಿ ಮಡುವಿನೊಳಗೆ ಸಿಕ್ಕಿಬಿದ್ದು ಪ್ರಾಣ ಕಳಕೊಂಡನೆಂದೇ ಹೇಳಬೇಕಾಗುತ್ತದೆ.

ಇತ್ತ ಹರಿಕುಲಿಶನು ಬಹಳ ಹೊತ್ತಿನ ವರೆಗೆ ಹಯಾಲಾಸನ ಬರವನ್ನು ನಿರೀಕ್ಷಿಸಿದನು; ಆದರೆ ಅವನು ಬಾರದಿರಲು, ಅವನನ್ನು ಹುಡುಕುತ್ತಾ ನಡೆದು ಹೋದನು. ಅರಣ್ಯದಲ್ಲೆಲ್ಲಾ ಹಯಾಲಸನನ್ನು ಕೂಗಿದನು. ಆದರೆ ಉತ್ತರವೇ ಇಲ್ಲ. ಅವನನ್ನು ಹುಡುಕುತ್ತಾ ರಾತ್ರಿ ಬಹುದೂರ ಚುಕ್ಕಿಗಳ ಬೆಳಕಿನಲ್ಲಿ ನಡೆದು ಹೋದನು. ಅಷ್ಟರಲ್ಲಿ ಅನುಕೂಲವಾದ ಗಾಳಿಯು ಬೀಸತೊಡಗಿತು. ದಡದಲ್ಲಿದ್ದ ಅರಗಾವಳಿಗರು ಹರಿಕುಲಿಶನು ಮಧ್ಯರಾತ್ರಿಯ ವರೆಗೂ ಬಾರದುದನ್ನು ನೋಡಿ, ಅವನು ತಪ್ಪಿಸಿಕೊಂಡು ಹೋದನೆಂದೆಣಿಸಿ ಹಡಗು ಹತ್ತಿ ಮುಂದೆ ಪಯಣ ಬೆಳೆಸಿದರು. ಹರಿಕುಲಿಶನು ಮೂರು ದಿನಗಳ ವರೆಗೂ ಹುಡುಕಿ ಹಯಾಲಸನನ್ನು ಕಾಣದೆ, ಸಮುದ್ರ ತೀರಕ್ಕೆ ಬಂದು ನೋಡಿದನು. ಹಡಗು ಮಾಯವಾಗಿತ್ತು. ಆದರೂ ಧೈರ್ಯಗುಂದದೆ ಅವನು ನೆಲದಾರಿ ಹಿಡಿದು ಕಾಲುನಡೆಯಿಂದಲೇ ಕೋಲಾಚಲವನ್ನು ಸೇರಿದನು.

ಅರಗಾವಳಿಗರ ಪಯಣವು ಸುಖಕರವಾಗಿರಲಿಲ್ಲ. ಅವರು ಹರಿಕುಲಿಶನನ್ನು ಬಿಟ್ಟು, ಮುಂದೆ ಕೆಲವು ದಿನ ಹಡಗಿನಲ್ಲಿ ಪಯಣ ಮಾಡಿದಾಗ ಒಂದು ಭೂಶಿಖರವು ತೋರಿತು. ಅದರ ಪಕ್ಕಕ್ಕಾಗಿ ಹಡಗು ಹರಿಯಿತು. ಆಗ ದೊಡ್ಡ ರಣಹದ್ದುಗಳು ಆ ಭೂಶಿಖರದ ಮೇಲೆ ಹಾರಾಡುತ್ತಿದ್ದುವು. ಜಯಸೇನನು ಹಡಗಿಗೆ ಲಂಗರು ಹಾಕಿ ಅಲ್ಲಿ ಏನಿದೆಂದು ತಿಳಿಯಲು ಬೋರೆಯಾಸನೆಂಬವನನ್ನು ಕಳುಹಿಸಿದನು. ಅವನು ತೀರವನ್ನು ದಾಟಿ ಮುಂದೆ ಹೋದಾಗ ಅಲ್ಲಿ ಒಂದು ಉದ್ಯಾನದಲ್ಲಿ ಒಬ್ಬ ರಾಜನು ಕುಳಿತಿದ್ದನು. ಅವನ ಊಟಕ್ಕೆ ಎಲ್ಲವೂ ಸಿದ್ಧವಾಗಿತ್ತು. ಆ ರಾಜನು ಒಂದು ತುತ್ತು ಬಾಯಿಗೆ ಎತ್ತಿಕೊಳ್ಳುವುದರೊಳಗಾಗಿ ಒಂದು ರಣಹದ್ದು ಬಂದು, ಅವನ ಆಹಾರವನ್ನೆಲ್ಲಾ ಕಸಿದುಕೊಂಡು ಹೋಯಿತು. ದೇವಶಾಪದಿಂದ ಆ ರಾಜನಿಗೆ ಕಷ್ಟ ಪ್ರಾಪ್ತವಾಗಿತ್ತೆಂದು ಬೋರೆಯಾಸನಿಗೆ ತಿಳಿಯಿತು. ಕೂಡಲೇ ಅವನು ಆ ರಣಹದ್ದುಗಳನ್ನೆಲ್ಲಾ ನಿರ್ಮೂಲ ಮಾಡಿದನು. ಅದನ್ನು ನೋಡಿ ರಾಜನಿಗೆ ಸಂತೋಷವಾಯಿತು. ಅವನಿಗೂ ಶಾಪವಿಮೋ

ಚನೆಯಾಯಿತು. ಅವನು ಬೋರಿಯಾಸನಿಂದ ಅರಗಾವಳಿಗರ ವೃತ್ತಾಂತ ತಿಳಿದು ಹೀಗೆಂದನು—'ಮುಂದೆ ಹಾದಿಯಲ್ಲಿ ಒಂದು ಜಲಸಂದು ಸಿಗುವುದು. ಆ ಜಲಸಂದಿನ ಇಬ್ಬದಿಗಳಲ್ಲಿ ಎರಡು ಪರ್ವತಾಕಾರದ ಬಂಡೆ ಕಲ್ಲುಗಳಿವೆ, ಅವು ತಮ್ಮ ಮಧ್ಯೆ ಯಾವ ವಸ್ತುವನ್ನಾದರೂ ಹೋಗಲು ಬಿಡುವುದಿಲ್ಲ ಯಾವ ವಸ್ತುವಾದರೂ ಹೋಗಲು ಪ್ರಯತ್ನಿಸಿದರೆ ಅವೆರಡೂ ಒಂದುಗೂಡಿ ಅದನ್ನು ಪುಡಿಪುಡಿ ಮಾಡುತ್ತವೆ. ನೀವು ಅಲ್ಲಿಗೆ ಹೋಗುವಾಗ ಜಾಗರೂಕರಾಗಿರಬೇಕು. ಒಂದು ಪಾರಿವಾಳವನ್ನು ಮೊದಲು ಹಾರಲು ಬಿಡಿರಿ. ಅದು ಹಾರುವಾಗ ಆ ಬಂಡೆ ಕಲ್ಲುಗಳು ಒಂದುಗೂಡುತ್ತವೆ. ಅವು ದೂರವಾಗಿ ಪುನಃ ಒಂದುಗೂಡಬೇಕಾದರೆ ಬಹಳ ಹೊತ್ತಾಗಬಹುದು. ಅಷ್ಟರಲ್ಲಿ ನಿಮ್ಮ ಹಡಗು ಸುರಕ್ಷಿತವಾಗಿ ದಾಟಿ ಹೋಗಬಹುದು.” ಬೋರಿಯಾಸನು ಆ ರಾಜನಿಗೆ ನಮಸ್ಕರಿಸಿ ಹಡಗನ್ನು ಸೇರಿದನು.

ಮರುದಿನ ಹಡಗು ಜಲಸಂದನ್ನು ಸೇರಿತು. ಎರಡು ಪರ್ವತಾಕಾರದ ಬಂಡೆಗಳು ಅದರ ಎರಡೂ ಬದಿಗಳಲ್ಲಿ ನಿಂತಿದ್ದುವು. ಜಯಸೇನನು ರಾಜನ ಮಾತಿನಂತೆ ಒಂದು ಪಾರಿವಾಳವನ್ನು ಹಾರಬಿಟ್ಟನು. ಕೂಡಲೇ ಎರಡು ಬಂಡೆಗಳು ತಮ್ಮ ಕಾರ್ಯಕ್ರಮಗಳನ್ನು ಕೈಕೊಳ್ಳಲು ಚಲಿಸಿದುವು. ಅಷ್ಟರಲ್ಲಿ ಪಾರಿವಾಳವು ವಾಯುವೇಗದಿಂದ ಹಾರಿಹೋಯಿತು. ಆ ಬಂಡೆಗಳು ಒಂದಕ್ಕೊಂದು ತಾಗಿ ಹಿಂದಿರುಗಿದುವು. ಅದೇ ಸಮಯವನ್ನು ಕಾದು ಅರಗವು ವಾಯುವೇಗದಿಂದ ದಾಟಿತು. ಆದರೆ ಅದರ ಚುಕ್ಕಾಣಿ ಮಾತ್ರ ಬಂಡೆಗಳ ಇರುಕಿಗೆ ಸಿಕ್ಕಿಬಿಟ್ಟು ನಜ್ಜುಗುಜ್ಜಾಯಿತು. ಆದರೆ ಹಡಗು ಅಪಾಯದಿಂದ ಪಾರಾಯಿತು. ಬಂಡೆಕಲ್ಲುಗಳಾದರೋ ಬಹು ಬಿರುಸಿನಿಂದ ತಾಗಿದರಿಂದ ಚೂರುಚೂರಾಗಿ ಹೋದುವು ಅರಗವು ಮುಂದೆ ಸಾಗಿತು. ಕೋಲಾಚಲವು ಮುಂದೆ ಕಣ್ಣಿಗೆ ತೋರಿತು. ಜಯಸೇನನು ಕಡಲ್ಕರೆಯ ಕಾಡುಗಳ ಮರೆಯಲ್ಲಿ ಲಂಗರು ಹಾಕಿ ಹಡಗನ್ನು ನಿಲ್ಲಿಸಿ, ವೀರರೊಡನೆ ತೀರವನ್ನು ಸೇರಿದನು. ಆಗ ಹರಿಕುಲಿಶನು ಅವನ ಮುಂದೆ ತೋರಿದನು. ಅವನನ್ನು ನೋಡಿ ಜಯಸೇನನಿಗೆ ಆಶ್ಚರ್ಯವೂ, ಸಂತೋಷವೂ ಉಂಟಾದುವು. ಹರಿಕುಲಿಶನು ನಡೆದ ವಿಷಯವನ್ನು ತಿಳಿಸಿದನು.

ಆ ಮೇಲೆ ಅವರು ಮುಂದೆ ಕೊಂಗುರಿಯ ಹೊಂಗೂದಲನ್ನು ಪಡೆಯಲು ಉಪಾಯಗಳನ್ನು ಆಲೋಚಿಸತೊಡಗಿದರು

ಕೋಲಾಚಲವನ್ನು ಐತೇಯನೆಂಬರಸು ಆಳುತ್ತಿದ್ದನು. ಅವನು ಬಹು ಕ್ರೂರಿಯಾಗಿದ್ದನು. ಅವನ ರಾಜ್ಯದಲ್ಲಿ ಹಡಗಿನಲ್ಲಿ ಬಂದಿಳಿದ ಜನರನ್ನೆಲ್ಲಾ ಅವನು ದೇವಗಡಣಕ್ಕೆ ಆಹುತಿಕೊಡುತ್ತಿದ್ದನು. ಆದ್ದರಿಂದ ಜಯಸೇನನು ಮುಂದಿನ ಕೆಲಸವನ್ನು ಬಹು ಜಾಣತನದಿಂದ ಮಾಡಬೇಕಾದ ಕಾರ್ಯಕ್ರಮವನ್ನು ಆಲೋಚಿಸಿದನು. ಕೊನೆಗೆ ಐತೇಯನನ್ನು ತಡಮಾಡದೆ ಕಂಡು ಹೊಂಗೂದಲನ್ನು ಮೊದಲು ಕೇಳಿ ನೋಡುವುದು ಒಳ್ಳೇಯದು ಎಂದು ಎಲ್ಲರೂ ನಿಶ್ಚಯಿಸಿದರು. ಸ್ವಲ್ಪ ಸಮಯದಲ್ಲಿಯೇ ಅವರೆಲ್ಲರೂ ಐತೇಯನ ಮುಂದೆ ನಿಂತರು ಜಯಸೇನನು ಬಂದ ಉದ್ದೇಶವನ್ನು ತಿಳಿಸಿದನು. ಐತೇಯನು ಅರಗಾವಳಿಗರನ್ನೆಲ್ಲಾ ನೋಡಿದನು. ಅವರಲ್ಲಿ ಹರಿಕುಲಿಶನನ್ನು ನೋಡುವಾಗ ಅವನ ಧೈರ್ಯಗುಂದಿತು. ಆದರೂ ಬಲು ವಿನಯದಿಂದ “ನೀವು ಬಂದುದು ಆನಂದವಾಯಿತು. ನಿಮಗೆ ಹೊಂಗೂದಲು ಬೇಕಾಗಿದೆಯಲ್ಲವೇ? ಬಹು ಸಂತೋಷ! ನೀವು ತೆಗೆದುಕೊಂಡು ಹೋಗಬಹುದು. ಆದರೆ ನೀವು ಮುಂಚಿತವಾಗಿ ಒಂದೆರಡು ಕೆಲಸವನ್ನು ಮಾಡಬೇಕಾದೀತು. ನಮ್ಮ ಎತ್ತುಗಳನ್ನು ನೊಗಕ್ಕೆ ಸೇರಿಸಿ ಸ್ವಲ್ಪ ಗದ್ದೆಯನ್ನು ಉಳಬೇಕು. ಬೃಹಸ್ಪತಿಯು ಬೀರಕ್ಕಸರ ಹಲ್ಲುಗಳನ್ನು ನನಗೆ ಕೊಟ್ಟಿದ್ದಾನೆ. ಅವುಗಳನ್ನು ನೀನು ಉತ್ತ ಸ್ಥಳದಲ್ಲಿ ಬಿತ್ತಬೇಕು. ಅಷ್ಟೇ” ಎಂದನು ಜಯಸೇನನು ತಡಮಾಡದೆ ಆಗಬಹುದು’ ಎಂದನು. ಆಗ ಐತೇಯನ ಬಳಿಯಲ್ಲಿ ಅವನ ಏಕಮಾತ್ರ ಪುತ್ರಿಯಾಗಿದ್ದ ಮಾಧವಿ ನಿಂತುಕೊಂಡಿದ್ದಳು.

ಆ ಮೇಲೆ ಐತೇಯನು ಅರಗಾವಳಿಗರನ್ನು ಒಂದು ಅರಮನೆಗೆ ಕಳುಹಿಸಿಕೊಟ್ಟು, ಅತಿಥಿಸತ್ಕಾರಕ್ಕೆ ಎಲ್ಲಾ ಏರ್ಪಾಡು ಮಾಡಿಸಿದನು. ಅನೇಕ ದಿವಸಗಳ ವರೆಗೆ ಭೂರಿ ಭೋಜನಗಳು ನಡೆದುವು, ಯುವನ ವೀರರಿಗೆ ಐತೇಯನ ಅಂತರ್ಯವನ್ನು ಮಾತ್ರ ತಿಳಿಯಲಾಗಲಿಲ್ಲ. ಆದರೆ ಮಾಧವಿಗೆ ಎಲ್ಲವೂ ಗೊತ್ತು. ಅವಳಿಗೆ ತಂದೆಯ ತಂತ್ರವು ಸರಿಯೆಂದು ತೋರಲಿಲ್ಲ.

ರಾಜಸ್ಥಾನದಲ್ಲಿ ಜಯಸೇನನನ್ನು ನೋಡಿದಾಗ ಅವಳಿಗೆ ಅವನ ಮೇಲೆ ಮರುಕವೇ ಉಂಟಾಯಿತು. “ಬಹು ದೂರದಿಂದ ಬಂದು ಈ ತರುಣನು ಮತ್ತು ಅವನ ಅರಗಾವಳಿಗರು ಅನಾವಶ್ಯಕವಾಗಿ ತಮ್ಮ ಪ್ರಾಣವನ್ನು ಕಳ

ಕೊಳ್ಳುವರಲ್ಲ” ಎಂದು ಅವಳು ಮನಸ್ಸಿನಲ್ಲಿಯೇ ನೋದುಕೊಂಡಳು. ಅವರನ್ನೆಲ್ಲಾ ಅಪಾಯದಿಂದ ತಪ್ಪಿಸಲು ನಿರ್ಧರಿಸಿದಳು. ಒಂದು ದಿನ ಮುಂಜಾನೆ ಜಯಸೇನನು ಒಬ್ಬೊಂಟಿಗನಾಗಿಯೇ ಇದ್ದ ವೇಳೆಯನ್ನು ತಿಳಿದು, ತಾನೇ ತಯಾರು ಮಾಡಿದ ಒಂದು ತೈಲದ ಡಬ್ಬಿಯನ್ನೂ, ಒಂದು ಹೂವನ್ನೂ ಹಿಡಿದುಕೊಂಡು ರಹಸ್ಯವಾಗಿ ಅವನಿದ್ದಲ್ಲಿಗೆ ಹೋಗಿ—“ಜಯ ಸೇನ! ತಂದೆ ಹೇಳಿದ ಕೆಲಸಗಳು ಪ್ರಾಣಾಪಾಯಕ್ಕೆ ಕಾರಣವಾಗಿವೆ. ನೀನು ಈ ತೈಲವನ್ನು ಮೈಗೆ ಹಚ್ಚಿಕೊಂಡರೆ, ಬೆಂಕಿಯಾಗಲೀ, ವಿಷವಾ ಗಲೀ ನಿನ್ನನ್ನು ಬಾಧಿಸವು. ಈ ಹೂವನ್ನು ಮೂಸಿದರೆ ಮೈ ಮರೆಯು ವುದು. ಇವು ನಿನ್ನನ್ನು ಎಲ್ಲಾ ಅಪಾಯಗಳಿಂದಲೂ ತಪ್ಪಿಸುವುವು,” ಎಂದು ತನ್ನ ತಂದೆಗೆ ತಿಳಿಯದಂತೆ ಹೇಳಿ ಹೊರಟು ಹೋದಳು.

ಅವಳು ಹೊರಟು ಹೋದ ಕೂಡಲೇ ರಾಜನ ಕರೆ ಬಂತೇ ಬಂತು. “ಇಂದು ಭಾರಿ ಭೋಜನ; ಆ ಮೇಲೆ ಪಂದ್ಯಾಟ; ಪಂದ್ಯಾಟವಾದ ಮೇಲೆ ನಾನು ಹೇಳಿದ ಕೆಲಸ!”, ಎಂಬ ಒಕ್ಕಣೆ ಜಯಸೇನನ ಕೈ ಸೇರಿತು. ಅದನ್ನು ಓದಿ ನೋಡಿ ಅವನು ಅರಗಾವಲಿಗರಿಗೆಲ್ಲಾ ವಿವರಿಸಿ ಹೇಳಿದನು. ಮಧ್ಯಾಹ್ನ ಹೊತ್ತು ರಾಜನೇ ಬಂದು ಅವರನ್ನೆಲ್ಲಾ ಅರಮನೆಗೆ ಕರೆದೊಯ್ದು ಭೋಜನ ಮಾಡಿಸಿದನು. ಆ ಮೇಲೆ ಪಂದ್ಯಾಟವನ್ನೇರ್ಪಡಿಸಿದನು. ಆ ಪಂದ್ಯಾಟಕ್ಕೆ ಕೋಲಾಚಲದ ಜನರೆಲ್ಲಾ ಬಂದು ಸೇರಿದ್ದರು; ಮೊದಲು ಕುದುರೆಗಳ ಓಟ ವಾಯಿತು; ಆ ಮೇಲೆ ಕುಸ್ತಿ ಪಂದ್ಯಾಟವಾಯಿತು ಅನಂತರ ಆ ಆಟದ ಮೈದಾನಿನಲ್ಲಿ ಒಂದು ಜೊತೆ ಎತ್ತುಗಳು ತೋರಿದುವು. ಅವುಗಳ ಮೈ ಹಾಲಿನಂತೆ ಬಿಳುಪಾಗಿತ್ತು. ಅವುಗಳ ಕೊಂಬಿನ ತುದಿಯಲ್ಲಿ ಉಕ್ಕಿನ ಬಾಕುಗಳು ಇದ್ದುವು. ಅವುಗಳ ಗೊರಸುಗಳಿಗೆ ಹಿತ್ತಾಳಿಯ ಎರಕವನ್ನು ಹೊಯ್ದಿತ್ತು. ಅವು ನೋಡಲು ಚೆಂದವಾಗಿಯೂ, ಸಾಧುವಾಗಿಯೂ ಇದ್ದಂತೆ ತೋರಿದುವು. ರಾಜನು ಅವುಗಳ ಕತ್ತಿಗೆ ನೊಗವನ್ನೇರಿಸಿ, ನೇಗಿಲನ್ನು ಸಿಕ್ಕಿಸಿ, ಆ ಪಂದ್ಯಾಟದ ಬಯಲಲ್ಲಿ ಒಂದು ಸಾಲು ಹೊಡೆದನು. ಆ ಸಾಲು ಬಹಳ ಆಳವಾಗಿದ್ದು ನೆಲವನ್ನು ಸೀಳಿದಂತೆ ತೋರಿತು. ರಾಜನು ಆ ಮೇಲೆ ನೊಗ ನೇಗಿಲುಗಳನ್ನು ತೆಗೆದು, ಎತ್ತುಗಳನ್ನು ಬಿಟ್ಟು—“ಇನ್ನು ನಿನ್ನ ಕೆಲಸ” ಎಂದು ಜಯಸೇನನಿಗೆ ಹೇಳಿದನು.

ಕೂಡಲೇ ಅವನು ಎತ್ತುಗಳನ್ನು ಹಿಡಿದು ಹೋದನು. ಅವು ಕತ್ತೆತ್ತಿ ಒಮ್ಮೆ ಅವನನ್ನು ನೋಡಿದುವು. ಅದರೆ ಸಾಧುವಾಗಿದ್ದ ಪ್ರಾಣಿಗಳು ಒಮ್ಮಿಂದೊಮ್ಮೆಗೇ ಕ್ರೂರ ಸ್ವಭಾವವನ್ನು ತಳೆದುವು. ಅವುಗಳ ಮೂಗಿನ ಸೊಳ್ಳೆಗಳಿಂದ ಬೆಂಕಿಯ ಕಿಡಿಗಳು ಸುರಿದುವು. ಅವು ಕಾಲಿನ ಗೊರಸುಗಳಿಂದ ನೆಲವನ್ನು ಕೆರೆದು ಬೆಂಕಿಯನ್ನು ಎಬ್ಬಿಸಿದುವು. ಆ ಬೆಂಕಿಯ ಜ್ವಾಲೆಯು ಸುತ್ತಲೂ ಹಬ್ಬಿತು ಜಯಸೇನನು ಅವುಗಳ ಹತ್ತಿರ ಹೋದಂತೆ ಬೆಂಕಿಯ ಕಿಡಿಗಳ ಮಳೆಯೇ ಅವನ ಮೇಲೆ ಸುರಿಯಿತು ಆದರೆ ಅವನು ಹೆದರಲಿಲ್ಲ. ಮಾಧವಿಯು ಕೊಟ್ಟಿದ್ದ ತೈಲವನ್ನು ಅವನು ಮೊದಲೇ ಮೈಗೆಲ್ಲಾ ಸವರಿಕೊಂಡಿದ್ದನು. ಆದ್ದರಿಂದ ಅವನು ಬೆಂಕಿಗೆ ಯಾಕೆ ಹೆದರಬೇಕು? ಅವನು ಎತ್ತುಗಳ ಹತ್ತಿರ ಹೋಗಿ ಅವುಗಳ ಮೂಗ್ದಾರವನ್ನು ಹಿಡಿದುಕೊಂಡು ನೊಗವನ್ನು ಅವುಗಳ ಕತ್ತಿಗೆ ಜೋಡಿಸಿದನು. ಕೂಡಲೇ ಎತ್ತುಗಳು ಮೆತ್ತಗಾದುವು. ಅದರೆ ಅವುಗಳ ಬಾಯಿಂದಲೂ ಮೂಗಿನಿಂದಲೂ ಬೆಂಕಿಯ ಮಳೆ ಸುರಿಯುವುದು ನಿಲ್ಲಲಿಲ್ಲ. ಜಯಸೇನನು ಅದನ್ನು ಲೆಕ್ಕಿಸದೆ, ನೇಗಿಲನ್ನು ನೊಗಕ್ಕೆ ಸಿಕ್ಕಿಸಿ, ಅದರ ಹಿಡಿಯನ್ನು ಕೈಯಲ್ಲಿ ಹಿಡಿದು, ರಾಜನು ಮಾಡಿದ ಸಾಲಿಗಿಂತ ಆಳವಾದ ಸಾಲನ್ನು ಮಾಡಿದನು. ಇಡೀ ಆಟದ ಮೈದಾನವನ್ನು ಹೂಡಿ ಮುಗಿಸಿಯೇ ಬಿಟ್ಟನು. ಅವನ ಹೂಟಿಯನ್ನು ನೋಡಿ ಜನರೆಲ್ಲರೂ ಬೆರಗಾದರು. ರಾಜನೂ ತನ್ನ ಕಣ್ಣನ್ನೇ ನಂಬದಾದನು "ಹಿಂದೆ ಬಂದಿದ್ದ ರಾಜಪುತ್ರರೆಲ್ಲರೂ ಬೆಂಕಿಯಲ್ಲಿ ಸುಟ್ಟು ಹೋದರು ಇವನೊಬ್ಬನು ನನ್ನನ್ನು ಸೋಲಿಸಿ ಬಿಟ್ಟನಲ್ಲ!" ಎಂದುಕೊಂಡನು.

ಆ ಮೇಲೆ ರಾಜನು ರಕ್ಕಸದಂತಗಳನ್ನು ಜಯಸೇನನ ಮುಂದೆ ತಂದಿರಿಸಿ, "ಇವನ್ನು ಬಿತ್ತುವುದು ನಿನ್ನ ಕೆಲಸ" ಎಂದನು. ಜಯಸೇನನು ತಡಮಾಡದೆ ಅದನ್ನು ಕೈಗೆತ್ತಿಕೊಂಡನು. ಪಕ್ಕದಲ್ಲಿ ಮಾಧವಿಯು ನಿಂತುಕೊಂಡು ಎಲ್ಲಾ ಚಮತ್ಕಾರಗಳನ್ನು ನೋಡುತ್ತಿದ್ದಳು. ಅವಳ ಕೈಯಲ್ಲಿ ಒಂದು ಕಲ್ಲು ಇತ್ತು. ಜಯಸೇನನು ಅವಳನ್ನು ನೋಡಿದ ಕೂಡಲೇ ಆ ಕಲ್ಲನ್ನು ಒಗೆದು ಬಿಟ್ಟಳು. ಆ ಮೇಲೆ ರಾಜನ ಅಪ್ಪಣೆಯಂತೆ ಜಯಸೇನನು ಆ ರಕ್ಕಸದಂತಗಳನ್ನು ನೇಗಿಲಿನ ಸಾಲುಗಳಲ್ಲಿ ಬಿತ್ತಿ ಮಣ್ಣನ್ನು ಮುಚ್ಚಿದನು. ಬಿತ್ತಿದ ಕೂಡಲೇ ಆ ಹಲ್ಲುಗಳು ಬೆಳೆದು, ಮಣ್ಣಿನೊಳಗಿಂದ ಮೇಲಕ್ಕೆದ್ದು

ಈಟಿಯ ಮೊನೆಗಳಂತೆ ತೋರಿದುವು. ಅನಂತರ ವಿವಿಧ ಶಸ್ತ್ರಗಳನ್ನು ಹಿಡಿದುಕೊಂಡಿದ್ದ ಸೈನಿಕರ ಸಾಲುಗಳು ಮೇಲಕ್ಕೆದ್ದುವು. ಜಯಸೇನನನ್ನು ನೋಡಿ ಆ ಮಾಯಾ ಸೈನಿಕರು ಈಟಿ ಭರ್ಜಿ ಖಡ್ಗಗಳನ್ನು ಹಿಡಿದು ಅವನೊಡನೆ ಯುದ್ಧ ಮಾಡಲು ಮುಂದಾದರು. ಆಗ ಅವನು ಒಂದು ಕಲ್ಲನ್ನು ಅವರ ಮಧ್ಯಕ್ಕೆ ಎಸೆದು ಬಿಟ್ಟನು. ಕೂಡಲೇ ಆ ಸೈನ್ಯದಲ್ಲಿ ಗೊಂದಲವೆದ್ದಿತು. ಆ ಕಲ್ಲನ್ನು ಸೈನಿಕರಲ್ಲಿ ಯಾರೋ ಹೊಡೆದರೆಂದು ತಿಳಿದು ಒಬ್ಬರನ್ನೊಬ್ಬರು ಹೊಡೆಯಲು ತೊಡಗಿದರು. ಈ ಯಾದವ ಕಲಹದಿಂದ ಅವರೆಲ್ಲರೂ ಹತರಾದರು. ಅರಗಾವಲಿಗರ ಸಂತೋಷವನ್ನು ಆಗ ಹೇಳತೀರದು. ಅದರಲ್ಲಿ ಹರಿಕುಲಿಶನು ಜಯಸೇನನನ್ನು ಹೆಗಲ ಮೇಲೆ ಕುಳ್ಳಿರಿಸಿ ಜಯಘೋಷ ಮಾಡಿದನು. ಐತೇಯನಿಗೆ ಸಂತೋಷವಾಗುವುದರ ಬದಲು ಭಯವಾಯಿತು. ಆದರೂ ಹೆಂಗೂದಲನ್ನು ಅವನಿಂದ ತರಲು ಸಾಧ್ಯವಾಗಲಾರದೆಂದೆಣಿಸಿ ಮೊದಲೇ ಹೇಳಿದ ಮಾತಿನಂತೆ ಅವನ್ನು ತರಲು ಅವನು ಹೋಗಬಹುದೆಂದು ಹೇಳಿದನು.

ಹೆಂಗೂದಲು ಅಂಗಾರವರ್ಮನ ತೋಟದಲ್ಲಿತ್ತು. ಆದರದು ಸುಲಭವಾಗಿ ಕೈಗೆ ಸಿಕ್ಕುವಂತಿರಲಿಲ್ಲ. ಆ ತೋಟದ ಮಧ್ಯದಲ್ಲಿ ಒಂದು ತೋಪು ಇತ್ತು. ಆ ತೋಪಿನಲ್ಲಿ ಒಂದು ಮರದ ಕೆಳಗೊಂಬೆಗೆ ಅದು ತೂಗ ಹಾಕಲ್ಪಟ್ಟಿತ್ತು. ಆ ಮರವನ್ನು ಒಂದು ದೊಡ್ಡ ಹೆಬ್ಬಾವು ಕಾದುಕೊಂಡಿರುತ್ತಿತ್ತು. ಅದರ ತಲೆಯಲ್ಲಿ ಕೊಂಬುಗಳೂ ಮೈಯಲ್ಲಿ ಚಿಪ್ಪುಗಳೂ ಇದ್ದುವು. ಅದಕ್ಕೆ ಮರಣವೂ ಇಲ್ಲ; ನಿದ್ದೆಯೂ ಇಲ್ಲ. ಆದ್ದರಿಂದ ಅದರ ಕಣ್ಣಿಗೆ ಬಿದ್ದವರು ಹಿಂದಿರುಗುವುದೇ ಅಸಾಧ್ಯವಾಗಿತ್ತು. ಆ ತೋಟವಾದರೂ ಸುಲಭವಾಗಿ ಮನುಷ್ಯರ ಕಣ್ಣಿಗೆ ಬೀಳುತ್ತಿರಲಿಲ್ಲ. ಅಲ್ಲಿಗೆ ಹೋಗುವುದು ಕಷ್ಟವೇ ಆಗಿತ್ತು.

ಜಯಸೇನನು ಹರಿಕುಲಿಶನನ್ನು ಕರಕೊಂಡು ನಡೆದು ಹೋದನು, ಆದರೆ ಅಲ್ಲಿಗೆ ಹೋಗುವಾಗ ಸೂರ್ಯನು ಕಂತಿದನು. ಚಂದ್ರನು ಉದಯಿಸಿದ್ದನು. ತಿಂಗಳು ಬೆಳಕು ಎಲ್ಲೆಲ್ಲಿಯೂ ಹಬ್ಬಿತು. ಆಗ ಯಾರೋ ನಡೆದು ಬರುವ ಶಬ್ದ ಕೇಳಿಸಿತು. ಜಯಸೇನನು ಹಿಂದಿರುಗಿ ನೋಡಿದನು —ಮಾಧವಿ! ಆದರೆ ಜಯಸೇನನು ಮಾಧವಿಯೆಂದು ಹೇಳುವುದಕ್ಕೆ ಬಾಯ್ತೆರೆಯುವಷ್ಟರಲ್ಲಿ ಅವಳು ತನ್ನ ಬೆರಳನ್ನು ತುಟಿಯ ಮೇಲಿಟ್ಟು

ಮಾತಾಡಬಾರದೆಂದು ಸಂಜ್ಞೆ ಮಾಡಿದಳು. ಮೂವರೂ ಆ ಮೇಲೆ ಮೆತ್ತಗೆ ನಡೆದು ಮುಂದೆ ಹೋದರು. ಆ ಅಂಗಾರವರ್ಮನ ತೋಟವು ಹೆಸರಿಗೆ ತಕ್ಕಂತೆ ಅಂಗಾರದಿಂದಲೇ ಕೂಡಿತ್ತು. ಅಲ್ಲಿ ಹುಲ್ಲು ಮೊಳೆಯುತ್ತಿರಲಿಲ್ಲ; ಕಗ್ಗಲ್ಲುಗಳೇ ನೆಲದಲ್ಲಿದ್ದುವು. ಅವುಗಳ ಬದಿಗಳು ಬಾಕುಗಳಂತೆ ಮೊನಚಾಗಿದ್ದುವು. ಅಲ್ಲಿಯ ಮರಗಿಡಗಳಲ್ಲಿ ಎಲೆಗಳ ಬದಲು ಬರಿಯ ಮುಳ್ಳುಗಳೇ ಬೆಳೆಯುತ್ತಿದ್ದುವು. ಆದ್ದರಿಂದ ಮೂವರೂ ಬಹು ಎಚ್ಚರಿಕೆಯಿಂದ ಹಾದಿ ನಡೆದು ಹೋಗಿ, ತೋಪನ್ನು ಸೇರಿದರು. ಆ ತೋಪಿನ ಮಧ್ಯದಲ್ಲಿ ಒಂದು ದೊಡ್ಡ ಆಲದ ಮರವಿತ್ತು. ಅದರ ಕೆಳಗಿನ ಕೊಂಬೆಯಲ್ಲಿ ಹೊಂಗೂದಲು ತೂಗಾಡುತ್ತಿತ್ತು. ಮಾಧವಿಯು ಕೈಸನ್ನೆಯಿಂದ ಆಲದ ಮರವನ್ನೇ ತೋರಿಸಿದಳು. ಅದರಲ್ಲಿ ತೂಗಾಡುತ್ತಿದ್ದ ಹೊಂಗೂದಲಿನ ಪ್ರಕಾಶದಿಂದ ಆ ಪ್ರದೇಶವೆಲ್ಲಾ ಬೆಳಗುತ್ತಿತ್ತು. ಜಯಸೇನನು ಮುಂದೆ ಆಲದ ಮರದ ಬಳಿಗೆ ಹೋದನು. ಹೆಬ್ಬಾವು ಮರವನ್ನು ಸುತ್ತಿಕೊಂಡು ತಲೆಯನ್ನು ಕೆಳಗಿರಿಸಿತ್ತು: ಅದು ಜಯಸೇನನನ್ನು ಕಂಡ ಕೂಡಲೇ ತಲೆಯನ್ನೆತ್ತಿ, ಗುಡುಗಿನಂತೆ ಧ್ವನಿ ಮಾಡಿತು. ಆ ಶಬ್ದವು ಕೋಲಾಚಲಕ್ಕೂ ಮುಟ್ಟಿ ಜನರ ಹೃದಯವನ್ನೇ ನಡುಗಿಸಿತು. ಒಡನೆ ಆ ವೀರನು ಮಾಧವಿ ಕೊಟ್ಟಿದ್ದ ಹೂವನ್ನು ಕೈಯಲ್ಲಿ ಹಿಡಿದನು. ಆಗ ಒಂದು ವಿಧದ ಪರಿಮಳವು ಆ ಪ್ರದೇಶವನ್ನೆಲ್ಲಾ ತುಂಬಿತು. ಆ ಮೇಲೆ ಜಯಸೇನನು ಕೈ ನೀಡಿ ಆ ಹೂವನ್ನು ಆ ಹೆಬ್ಬಾವಿನ ಮುಂದುಗಡೆ ಹಿಡಿದನು. ಅದರ ಪರಿಮಳವು ಹೆಬ್ಬಾವಿನ ಮೂಗಿನ ಸೊಳ್ಳೆಗಳನ್ನು ತುಂಬಿತು. ಕೂಡಲೇ ಅದು ಮೂರ್ಛೆ ಹೋಗಿ, ಅದರ ತಲೆಯು ನೆಲದ ಮೇಲೆ ಬಿದ್ದು ಬಿಟ್ಟಿತು. ಜಯಸೇನನು ತಡ ಮಾಡದೆ ಬೇಕಾದಷ್ಟು ಹೊಂಗೂದಲನ್ನು ಖಡ್ಗದಿಂದ ಕತ್ತರಿಸಿ ತೆಗೆದುಕೊಂಡು ಹಿಂದಿರುಗಿದನು. ಅಷ್ಟರಲ್ಲಿ ಮಾಧವಿಯು ಅವನ ಬಳಿ ಬಂದು—“ನನ್ನನ್ನು ಬಿಟ್ಟು ಹೋಗುವುದೇ? ಈ ಜಯಕ್ಕೆ ನಾನೇ ಕಾರಣಳೆಂದು ರಾಜನು ತಿಳಿದರೆ, ನನ್ನ ಪ್ರಾಣಕ್ಕೂ ಸಂಚಕಾರವಾಗುವುದೇ ಸರಿ. ನಾನೂ ಬಳಸು ದಾರಿಗಾಗಿ ಬಂದು ಹಡಗನ್ನು ಸೇರುವೆನು, ಇನ್ನು ತಡ ಮಾಡದೆ ಕೋಲಾಚಲವನ್ನೇ ಬಿಡಬೇಕು. ಇಲ್ಲವಾದರೆ ಅಪಾಯ ಒದಗಬಹುದು” ಎಂದು ಹೇಳಿ ಕಣ್ಮರೆಯಾದಳು. ಜಯಸೇನನು ಪರಿಕುಲಿಶನೊಡನೆ ಕೂಡಲೇ ಅಂಗಾರವರ್ಮನ ತೋಟದಿಂದ ನೇರವಾಗಿ ಅರಗವಿದ್ದ

ಸ್ಥಳಕ್ಕೆ ಹೋಗಿ ಎಲ್ಲರೂ ಹಡಗನ್ನು ಹತ್ತುವಂತೆ ಹೇಳಿದನು. ಮಾಧವಿಯೂ ಬಂದು ಅವರನ್ನು ಸೇರಿದಳು. ಹಡಗು ಹಾಯಿಯೆತ್ತಿ ತೀರವನ್ನು ಬಿಟ್ಟಿತು.

ಮರುದಿನ ಬೆಳಿಗ್ಗೆ ಐತೀಯನು ಒಂದು ದೊಡ್ಡ ಸೈನ್ಯದೊಡನೆ ತೀರದಲ್ಲಿ ಕಾಣಿಸಿಕೊಂಡನು. ತನ್ನ ರಣನೌಕೆಗಳನ್ನು ನೀರಿಗಿಳಿಸಿ ಅಂಗವನ್ನು ಹಿಡಿಯುವಂತೆ ಹೇಳಿದನು. ಆದರೆ ಆರಗವು ಸಮುದ್ರವನ್ನು ಸೇರಿ ಕಾಣದಾಯಿತು.

ಜಯಸೇನನು ಆಯೋಲಕವನ್ನು ಬಹು ವಿಜೃಂಭಣೆಯಿಂದ ಸೇರಿ, ರಾಜ್ಯವನ್ನು ಪಡೆದು, ಮಾಧವಿಯನ್ನು ಲಗ್ನಮಾಡಿಕೊಂಡು, ಹರಿಕುಲಿಶನನ್ನೂ, ಇತರ ಯುವನ ವೀರರನ್ನೂ ಅವರ ಊರಿಗೆ ಕಳುಹಿಸಿಕೊಟ್ಟನು;

ಹರಿಕುಲಿಶನು ಆಯೋಲಕದಿಂದ ಬರುವಷ್ಟರಲ್ಲಿ ಅವನ ತಂದೆಯು ತೀರಿಹೋಗಿದ್ದನು. ದೇಶಪದ್ಧತಿಯಂತೆ ರಾಜ್ಯವು ಹಿರಿಯನಾಗಿದ್ದ ದಾಯಾದಿ ಯೂರಿಸ್ತೇಯನ ಕೈಸೇರಿತು. ಆದ್ದರಿಂದ ಹರಿಕುಲಿಶನು ದಾಯಾದಿಯ ಆಡಿಯಾಳಾಗಬೇಕಾಯಿತು. ಅಡಿಯಾಳುಗಳು ಯಜಮಾನರು ಹೇಳಿದ ಕೆಲಸವನ್ನು ಮಾಡಬೇಕಿತ್ತು. ಹಾಗೆ ಮಾಡಿದರೆ ಅವರು ಸ್ವಾತಂತ್ರ್ಯವನ್ನು ಪಡೆಯಲು ಯೋಗ್ಯರಾಗುತ್ತಿದ್ದರು. ಯಜಮಾನರು ಕಷ್ಟತರದ ಕೆಲಸವನ್ನು ಕೊಡುತ್ತಿದ್ದರು. ದೇಶ ಪದ್ಧತಿಯಂತೆ ಹರಿಕುಲಿಶನು ದಾಯಾದಿಯ ಮುಂದೆ ನಿಂತನು. ಅವನ ಗಟ್ಟಿಮುಟ್ಟಾದ ದೇಹ, ವಿಶಾಲವಾದ ಎದೆ, ಕಬ್ಬಿಣದ ತುಂಡುಗಳಂತಿದ್ದ ತೋಳುಗಳು ಯೂರಿಸ್ತೇಯನಿಗೆ ಭಯವನ್ನುಂಟುಮಾಡಿದುವು. "ಹರಿಕುಲಿಶನು ನನ್ನ ಸಿಂಹಾಸನವನ್ನು ಕಿತ್ತುಕೊಳ್ಳದಿರಲಾರ" ಎಂದು ಅವನು ಮನಸ್ಸಿನಲ್ಲಿಯೇ ಅಂದುಕೊಂಡನು. ಹರಿಕುಲಿಶನಾದರೋ ತನ್ನ ಪರಾಕ್ರಮವನ್ನು ತೋರಲು ಸಿದ್ಧನಾಗಿಯೇ ಇದ್ದನು. ಆದ್ದರಿಂದ ಅವನು ರಾಜ್ಯದಲ್ಲಿ ನಿಲ್ಲದೆ ವಿಪತ್ಕಾರಕವಾದ ಕಾರ್ಯಗಳಲ್ಲಿ ಪ್ರವೃತ್ತನಾಗುವಂತೆ ಮಾಡುವುದರಿಂದ, ತನಗೆ ಕೇಡುವುಂಟಾಗದೆಂದೆಣಿಸಿ ಯೂರಿಸ್ತೇಯನು ಕುಹಕೋಪಾಯಗಳಿಗೆ ಶರಣುಹೋದನು. ಅವನು ಹರಿಕುಲಿಶನನ್ನು ಮನ್ನಿಸಿದಂತೆ ನಟಿಸಿ ಒಂದು ಅರಮನೆಯನ್ನು ಅವನಿಗೊಪ್ಪಿಸಿ ಅವನ ಜೀವನಕ್ಕೆ ತಕ್ಕ ವ್ಯವಸ್ಥೆಮಾಡಿ, ಮರುದಿನ ರಾಜನನ್ನು ಕಾಣಬೇಕೆಂದು ಅಪ್ಪಣೆಕೊಟ್ಟನು.

ಯೂರಿಸ್ತೇಯುನ ಅಪ್ಪಣೆಯಂತೆ, ಮರುದಿನ ಹರಿಕುಲಿಶನು ರಾಜಸಭೆಯಲ್ಲಿ ಕಾಣಿಸಿಕೊಂಡನು. ರಾಜನು ಅವನನ್ನು ನೋಡಿ, 'ಹರಿಕುಲಿಶಾ! ನೀನೇ ನಮ್ಮ ರಾಜ್ಯದ ರಕ್ಷಕವಚ. ಈಗ ನೀನೊಂದು ದೊಡ್ಡ ಮಹತ್ಕಾರ್ಯವನ್ನು ಮಾಡಬೇಕಾಗಿದೆ. ನಮ್ಮ ನಾಡಿನ ಗಡಿಯಲ್ಲಿ ದ್ಯುಪಿತೃವಿನ ಗುಡಿಯ ಬಳಿ ಒಂದು ಸಿಂಹವು ಮನೆಮಾಡಿಕೊಂಡು, ಗಂಡಾಂತರವನ್ನುಂಟುಮಾಡುತ್ತಿದೆ. ದೇವಸ್ಥಾನದ ಬಳಿಯಲ್ಲಿ ನೀಮಿಯ ಬಯಲಿನ ದನ ಕುರಿಗಳನ್ನು ರಾತ್ರಿ ನಾಶ ಮಾಡುತ್ತಿದೆ. ಆ ನರಭಕ್ಷಕನ ಹಾವಳಿಯನ್ನು ತಡೆಗಟ್ಟು. ಈಗಲೇ ಹೊರಟುಹೋಗಿ, ಅದನ್ನು ನೀನು ನಾಶಮಾಡಬೇಕು' ಎಂದು ಹೇಳಿದನು. ಈ ಕೆಲಸದಲ್ಲಿ ಹರಿಕುಲಿಶನು ಸಿಂಹದ ಬಾಯಿಗೆ ತುತ್ತಾಗುವುದೇ ಸರಿ ಎಂದು ಅವನು ಎಣಿಸಿದನು. ಆದರೆ ಹರಿಕುಲಿಶನಿಗಾವುದೂ ಗೋಚರವಾಗಲಿಲ್ಲ. ಅವನು ಅಪ್ಪಣೆಯನ್ನು ಶಿರಸ್ಸಾವಹಿಸಿದನು.

ಆ ಯುವನ ವೀರನು ಹಿಂದು ಮುಂದು ನೋಡದೆ, ತನ್ನರಮನೆಗೆ ಹೋಗಿ, ಬಿಲ್ಲು ಬಾಣಗಳನ್ನು ತೆಗೆದುಕೊಂಡು ರಾಜಧಾನಿಯಿಂದ ಹೊರಟು, ನೀಮಿಯ ಬಯಲಿನ ಕಡೆ ನಡೆದನು. ದಾರಿಯಲ್ಲಿ ಒಂದು ಪರ್ವತವು ಸಿಕ್ಕಿತು. ಆ ಪರ್ವತಾಗ್ರದಲ್ಲಿ ಒಂದು ಬಂಡೆಕಲ್ಲಿನ ಮೇಲೆ ಒಂದು ಆಲೀವು ಮರವಿತ್ತು. ಹರಿಕುಲಿಶನು ಆ ಮರವನ್ನು ಬೇರು ಸಹಿತ ಕಿತ್ತು, ಆದರಿಂದ ಒಂದು ದೊಡ್ಡ ಗದೆಯನ್ನು ತಯಾರಿಸಿ, ಅದನ್ನು ಹೆಗಲ ಮೇಲೇರಿಸಿ ಮುಂದೆ ನಡೆದು, ದ್ಯುಪಿತೃವಿನ ಗುಡಿಯನ್ನು ಸೇರಿದನು. ಆದರೆ ಅಲ್ಲಿ ಜನರ ಸುಳಿವೇ ಇರಲಿಲ್ಲ. ಆದ್ದರಿಂದ ಸಿಂಹದ ಸುಳಿವನ್ನು ಕಂಡು ಹಿಡಿಯುವುದು ಕಷ್ಟವಾಯಿತು. ಅವನು ಗುಡಿಯ ಬಳಿಯಿದ್ದ ಸಿಂಹದ ಗುಹೆಯ ಬಳಿಯೇ ಕಾದುನಿಂತನು. ಆ ಸಿಂಹವು ಹಗಲೆಲ್ಲಾ ಕೊಳ್ಳೆ ಹೊಡೆದು, ರಾತ್ರಿಯಾಗುವಾಗ, ಆ ಗುಹೆಯ ಬಳಿಯನ್ನೈದಿತು. ಅದು ನೋಡಲು ಭಯಂಕರಾಕಾರವನ್ನೇ ತಳೆದಿತ್ತು. ಅದರ ಕೇಸರವೆಲ್ಲಾ ರಕ್ತದಿಂದ ತೊಯ್ದಿತ್ತು. ಅದರ ಬಾಯಲ್ಲಿಯೂ ಗಡ್ಡದಲ್ಲಿಯೂ ರಕ್ತವು ಸುರಿಯುತಿತ್ತು. ಹರಿಕುಲಿಶನು ಅಲ್ಲೇ ಪೊದರುಗಳ ಮರೆಯಲ್ಲಿ ನಿಂತು ಅದರ ಬರವನ್ನೇ ನಿರೀಕ್ಷಿಸಿ ತನ್ನ ಬಿಲ್ಲಿಗೆ ಬಾಣವನ್ನು ಹೂಡಿ ನಿಂತುಕೊಂಡನು. ಅದು ಸಾಕಷ್ಟು ಸಮೀಪಕ್ಕೆ ಬಂದಾಗ ಬಾಣವನ್ನೆಸೆದನು. ಆದರೆ ಆ ಬಾಣವು ಅದರ ಮೈಯನ್ನು ಒರಸಿಕೊಂಡು ಹೋಯಿತು. ತಿರುಗಿ

ಇನ್ನೊಂದು ಬಾಣ ಹೊಡೆದನು, ಅದೂ ಸಿಂಹದ ಮೈಗೆ ತಾಗಲಿಲ್ಲ. ಆದರ ಚರ್ಮವು ಕಬ್ಬಿಣದಂತೆ ಗಟ್ಟಿಯಾಗಿತು. ಆಗ ಸಿಂಹವು ಬಾಯ್ತೆರೆದು, ಬಾಲವನ್ನು ನೆಲಕ್ಕಪ್ಪಳಿಸಿ, ಗರ್ಜಿಸಿತು. ಆ ಗರ್ಜನೆ ಭೂಮಿಯನ್ನೇ ನಡುಗಿಸಿ ಬಿಟ್ಟಿತು. ಕೂಡಲೇ ಅದು ಹರಿಕುಲಿಶನ ಮೇಲೆ ನೆಗೆಯಿತು. ಅದೇ ಸಮಯವನ್ನು ಕಾದಿದ್ದ ಹರಿಕುಲಿಶನು ತನ್ನ ಗದೆಯಿಂದ ಸಿಂಹದ ನೆತ್ತಿಗೆ ಬಲವಾಗಿ ಹೊಡೆದನು. ಆ ಏಟಿನಿಂದ ಅದರ ತಲೆ ಒಡೆಯಿತು. ಅದು ನೆತ್ತರು ಕಾರಿತು. ಹರಿಕುಲಿಶನು ಅದರ ಕತ್ತನ್ನು ಹಿಸುಕಿ ಹಾವುಗಳನ್ನು ಕೊಂದಂತೆ ಕೊಂದುಬಿಟ್ಟನು. ಅದರ ಚರ್ಮ ಸುಲಿದನು. ಆ ಚರ್ಮವನ್ನು ಹೆಗಲ ಮೇಲೆ ಹೊದ್ದು, ಅದರ ತಲೆಯನ್ನು ತನ್ನ ತಲೆಯ ಮೇಲೆ ಹೊತ್ತು ಸೀದಾ ಯೂರಿಸ್ತೇಯನ ಮುಂದೆ ನಿಂತನು. ಅವನಿಗೆ ಸಜೀವ ಸಿಂಹವೇ ತನ್ನೆದುರಿಗೆ ನಿಂತಂತೆ ಆಯಿತು; ಅವನ ಎದೆ ಗುಂಡಿಗೆಯೇ ಹೊಡಕೊಂಡಿತು ಹರಿಕುಲಿಶನು ಸಿಂಹದ ತಲೆಯನ್ನು ಅವನ ಕಾಲಡಿಯಲ್ಲಿ ಒಗೆದು, ಅರಮನೆಗೆ ಹೋದನು. ಮರುದಿನ ಇನ್ನೊಂದು ಗದೆಯನ್ನು ತಯಾರುಮಾಡಿಕೊಂಡನು. ಆ ಮೇಲೆ ಗದೆಯು ಅವನ ಹೆಗಲನ್ನು ಬಿಡಲಿಲ್ಲ,

ಸಿಂಹವನ್ನು ಕೊಂದನಂತರ ಹರಿಕುಲಿಶನ ಮೇಲೆ ಜನರಿಗೆ ಪ್ರೀತಿಯು ಹೆಚ್ಚಾಯಿತು. ಅವನ ಧೈರ್ಯವನ್ನು ಹೊಗಳಿದರು. ಆದರೆ ಯೂರಿಸ್ತೇಯನಿಗೆ ಭಯವೇ ಹೆಚ್ಚಾಯಿತು. ಆದ್ದರಿಂದ ಹರಿಕುಲಿಶನನ್ನು ಅಪಾಯಕ್ಕೆ ಗುರಿಮಾಡಲು ಉಪಾಯ ಹುಡುಕಿದನು.

ಮೈಸಿನಿಯಿಂದ, ಸ್ವಲ್ಪ ದೂರದಲ್ಲಿ ಅಮಿಯೋನ ಎಂಬ ಊರಿತ್ತು. ಆ ಊರಿನಲ್ಲಿ ಒಂದು ಕಾರಂಜಿಯು ಇತ್ತು. ಅದು ಸದಾಕಾಲ ನೀರಿನಿಂದ ತುಂಬಿರುತಿತ್ತು. ಆದರೆ ಅದರ ಬಳಿ ಗವಿಯಲ್ಲಿದ್ದ ಒಂದು ಸರ್ಪವು ಆ ಕಾರಂಜಿಯ ನೀರನ್ನು ಉಪಯೋಗಿಸಲು ಬಿಡುತ್ತಿರಲಿಲ್ಲ. ಸರ್ಪವಾದರೋ ವಿಷದ ತುಂಡು. ಅದಕ್ಕೆ ಒಂಭತ್ತು ಹೆಡೆಗಳಿದ್ದುವು. ಅದರ ಒಂದು ಹೆಡೆಗೆ ಮರಣವೇ ಇರಲಿಲ್ಲ ಅದು ಬೇಸಗೆ ಕಾಲದಲ್ಲಿ ಎಲ್ಲಾ ಕಾರಂಜಿಗಳಲ್ಲಿ ನೀರು ಬತ್ತಿಹೋದಾಗ, ಗವಿಯಿಂದ ಹೊರಗೆ ಬಂದು ಗಾಳಿಯನ್ನು ಸಹ ವಿಷದಿಂದ ತುಂಬಿ ಬಿಡುತ್ತಿತ್ತು. ನೀರಿಗಾಗಿ ಬಂದವರು ವಿಷದ ಗಾಳಿಯ ಸೇವನೆಯಿಂದಲೇ ಸತ್ತು ಹೋಗುತ್ತಿದ್ದರು. ಯೂರಿಸ್ತೇ

ಯನು ಈ ವಿಷಯವನ್ನು ತಿಳಿದು, ಆ ಸರ್ಪವನ್ನು ಕೊಂದು ಜನರಿಗೆ ಉಪಕಾರಮಾಡಬೇಕೆಂದು ಹರಿಕುಲಿಶನಿಗೆ ಹೇಳಿದನು. ಅವನು ಒಡನೆಯೇ ರಾಜನ ಅಪ್ಪಣೆಯಂತೆ ಅವಿ:ಯೋನದಲ್ಲಿದ್ದ ಕಾರಂಜಿಯ ಕಡೆ ಹೊರಟು ಹೋದನು. ತನ್ನ ಸಂಗಡ ಉಪಕುಲಿಶನ ಮಗನಾದ ಆಯೋಲಪನೆಂಬವನನ್ನು ಕರಕೊಂಡನು.

ಇಬ್ಬರೂ ಬಹುದೂರ ನಡೆದು ಕಾರಂಜಿಯನ್ನು ಸೇರಿದರು. ಆ ಸರ್ಪವು ಗವಿಯ ಬಾಗಿಲಲ್ಲಿ ತಲೆಯನ್ನು ಚಾಚಿ ಮಲಗಿತ್ತು. ಹರಿಕುಲಿಶನು ಅಲ್ಲಿಗೆ ಬಂದ ಕೂಡಲೇ ಅದು ತನ್ನ ಒಂಬತ್ತು ಹೆಡೆಗಳನ್ನೆತ್ತಿ ಫೂತ್ಕಾರ ಮಾಡಿತು. ಆ ಹೆಡೆಗಳು ವಿಷವನ್ನುಗುಳುತಿದ್ದುವು. ಹರಿಕುಲಿಶನು ತನ್ನ ಚಂದ್ರಾಯುಧದಿಂದ ಸರ್ಪದ ಹೆಡೆಗಳನ್ನು ಕತ್ತರಿಸ ತೊಡಗಿದನು. ಆದರೆ ಹೆಡೆ ತುಂಡಾದ ಕೂಡಲೇ ಅದು ಪುನಃ ಶರೀರಕ್ಕೆ ಅಂಟಿಕೊಂಡು ಬಿಡುತಿತ್ತು. ಹೀಗಾಗಿ ಹೆಡೆಗಳು ಹೆಚ್ಚಾಗುದುವು. ಅಷ್ಟರಲ್ಲಿ ಒಂದು ಏಡಿಯೂ ಬಂದು ಅವನ ಕಾಲನ್ನು ಹಿಡಿಯಿತು. ಇದನ್ನು ನೋಡಿ ಅವನು ಆಯೋಲನನನ್ನು ಕರೆದು, ಹತ್ತಿರದ ಮರಗಳಿಗೆ ಬೆಂಕಿ ಹಚ್ಚಿಸಿ ಆ ಮರಗಳ ಉರಿವ ಕೊಳ್ಳಿಗಳನ್ನು ತರ ಹೇಳಿದನು. ಸರ್ಪದ ಹೆಡೆಗಳನ್ನು ಕತ್ತರಿಸಿದಂತೆಯೇ, ಅವುಗಳನ್ನು ಉರಿವ ಕೊಳ್ಳಿಯಿಂದ ಸುಟ್ಟುಬಿಟ್ಟನು. ಕೊನೆಗೆ ಒಂದು ಹೆಡೆ ಮಾತ್ರ ಉಳಿಯಿತು. ಅದನ್ನೂ ಪ್ರಯತ್ನಪಟ್ಟು ತುಂಡು ಮಾಡಿದನು. ಆದರದು ಸಾಯದೆ ವಿಷವನ್ನೇ ಕಾರುತ್ತಾ ನೆಲದ ಮೇಲೆ ಬಿದ್ದಿತು. ಆ ವಿಷದಲ್ಲಿ ತನ್ನ ಬಾಣದ ಅಲಗುಗಳನ್ನು ಅದ್ದಿ, ಆ ಹೆಡೆಯ ಮೇಲೆ ಒಂದು ದೊಡ್ಡ ಕಲ್ಲನ್ನು ಹೇರಿ ಅದು ಪುನಃ ಸರ್ಪದ ಶರೀರವನ್ನು ಸೇರದಂತೆ ಮಾಡಿದನು. ಹೆಡೆಯಿಲ್ಲದ ಆ ಶರೀರವು ಸ್ವಲ ಸಮಯದಲ್ಲಿಯೇ ಸತ್ತು ಹೋಯಿತು. ಸರ್ಪದ ಉಪದ್ರವವೂ ತಪ್ಪಿತು.

ಈ ವಿಷಯವನ್ನು ಕೇಳಿ ಯೂರಿಸ್ತೇಯುನಿಗೆ ಸಂತೋಷವಾಗಲಿಲ್ಲ. ಅವನು ಹರಿಕುಲಿಶನನ್ನು ಇನ್ನೊಂದು ವಿಪತ್ಕಾರಕ ಕೆಲಸಕ್ಕೆ ಹಚ್ಚಿದನು. ಅವನ ನಾಡಿನ ಗಡಿಯಲ್ಲಿ ಎರಿಮಂತ ಎಂಬ ಪರ್ವತವಿತ್ತು. ಆ ಪರ್ವತದಲ್ಲಿ ಒಂದು ದೊಡ್ಡ ಎಕ್ಕಲ ವಾಸಮಾಡಿಕೊಂಡಿತ್ತು. ಆದಕ್ಕೆ ಆದಿ ಮರಾಹದಂತೆ ಕ್ರೂರವಾದ ಕೋರೆಗಳಿದ್ದುವು. ಅದು ಊರಿಗೆ ತುಂಬಾ ಹಾವಳಿ ಮಾಡುತ್ತಿತ್ತು. ಆದ್ದರಿಂದ ಅದನ್ನು ಕೊಲ್ಲದೆ ಜೀವ

ಸಹಿತವಾಗಿ ಹಿಡಿದು ತರುವಂತೆ ಹರಿಕುಲಿಶನಿಗೆ ಅಪ್ಪಣೆಯಾಯಿತು. ಅವನು ಕೂಡಲೇ ಎರಿಮಂತ ಪರ್ವತದ ಹಾದಿ ಹಿಡಿದನು. ದಾರಿಯಲ್ಲಿ ಅವನ ಸ್ನೇಹಿತನಾದ ಒಬ್ಬ ಕಿಂಪುರುಷನು ವಾಸವಾಗಿದ್ದನು. ಅವನು ಹರಿಕುಲಿಶನನ್ನು ಬರಮಾಡಿಕೊಂಡು ಊಟಕ್ಕೆ ಅಣಿ ಮಾಡಿದನು ಅವನ ಮನೆಯಲ್ಲಿ ದಿವ್ಯ ಮಧುವು ಇತ್ತು. ಅದನ್ನು ಮಧು ದೇವತೆಯೇ ಹರಿಕುಲಿಶನಿಗಾಗಿ ಕಳುಹಿಸಿ ಕೊಟ್ಟಿದ್ದಳು. ಆದರದು ಎಲ್ಲಾ ಕಿಂಪುರುಷರ ಹಕ್ಕಾಗಿತ್ತು. ಆ ಕಿಂಪುರುಷನು ಆ ಮಧು ಪಾತ್ರೆಯನ್ನು ತೆರೆದ ಕೂಡಲೇ ಅದರ ಪರಿಮಳವು ಅರಣ್ಯದಲ್ಲೆಲ್ಲಾ ಹಬ್ಬಿತು. ತಮ್ಮ ಒಪ್ಪಿಗೆಯಿಲ್ಲದೆ ಮಧು ಪಾತ್ರೆಯನ್ನು ತೆರೆದುದನ್ನು ನೋಡಿ ಅವರಿಗೆ ಸಿಟ್ಟು ಬಂತು. ಕೂಡಲೇ ಅವರು ಕೈಗೆ ಸಿಕ್ಕಿದ ಆಯುಧಗಳನ್ನು ಹಿಡಿದು, ಹರಿಕುಲಿಶನ ಮೇಲೆ ಬಿದ್ದರು. ಅವನು ತನ್ನ ಬಾಣಗಳನ್ನು ಉಪಯೋಗಿಸಿ ಅವರನ್ನೆಲ್ಲಾ ಅಟ್ಟಿಬಿಟ್ಟನು. ಆಗ ಕೆಳಗೆ ಬಿದ್ದ ಒಂದು ಬಾಣವನ್ನು ಕಿಂಪುರುಷನು ಎತ್ತಿಕೊಂಡು ಅದರ ಹರಿತವನ್ನು ಪರೀಕಿಸ ತೊಡಗಿದನು. ಅದು ಕೈ ತಪ್ಪಿ ಅವನ ತೊಡೆಯ ಮೇಲೆ ಬಿದ್ದು ಘಾಯ ಮಾಡಿತು. ಆ ಬಾಣದ ತುದಿಯು ವಿಷಕ್ಕೆ ಅದ್ದಲ್ಪಟ್ಟದ್ದರಿಂದ, ಅದು ತಾಗಿದ ಕೂಡಲೇ ವಿಷವೇರಿ, ಆ ಕಿಂಪುರುಷನು ಪ್ರಾಣವನ್ನೇ ಕಳಕೊಂಡನು. ಹರಿಕುಲಿಶನಿಗೆ ಆಗ ಪಶ್ಚಾತ್ತಾಪವುಂಟಾಯಿತು. ಸರ್ಪದ ವಿಷದಲ್ಲಿ ಬಾಣಗಳನ್ನು ಅದ್ದಿದ್ದು ಸರಿಯಲ್ಲವೆಂದು ತೋರಿತು. ಬಹು ವ್ಯಸನದಿಂದ ಅವನು ಆ ಮೇಲೆ ಮುಂದೆ ಆರಿಮಂತ ಪರ್ವತವನ್ನು ಹತ್ತಿ, ಕಾಡು ಹಂದಿಯನ್ನು ಜೀವ ಸಹಿತ ಹಿಡಿದುಕೊಂಡು ಮೈಸಿನಿಗೆ ಬಂದನು.

ಯೂರಿಸ್ತೇಯನು ಹರಿಕುಲಿಶನು ಬರುವ ರೀತಿಯನ್ನು ನೋಡಿ ಹೆದರಿ, ತನ್ನರಮನೆಯಲ್ಲಿದ್ದ ಒಂದು ಕಂಚಿನ ಗುಡಾಣದಲ್ಲಿ ಅಡಗಿಕೊಂಡು ಅದರ ಮುಚ್ಚಳವನ್ನು ಹಾಕಿಕೊಂಡನು. ಹರಿಕುಲಿಶನು ರಾಜನರಮನೆಗೆ ಹೋಗಿ ಅವನನ್ನು ಕಾಣದೆ, ಆ ಕಂಚಿನ ಗುಡಾಣವನ್ನು ನೋಡಿ, ಆ ಹಂದಿಯನ್ನು ರಾಜನು ಬರುವ ವರೆಗೆ ಅದರಲ್ಲಿ ಇರಿಸುವುದು ಒಳ್ಳೆಯದೆಂದು ನಿಶ್ಚಯಿಸಿ, ಯೂರಿಸ್ತೇಯನು ಆ ಗುಡಾಣದಲ್ಲಿ ಇರುವನಾದರೂ, ಆ ವಿಷಯವನ್ನು ತಿಳಿಯದವನಂತೆ ನಟಿಸಿ ಹಂದಿಯನ್ನು ಅದರೊಳಗೆ ಹಾಕಿಬಿಟ್ಟನು. ಹರಿಕುಲಿಶನ ಹಿಡಿತಕ್ಕೆ ಸಿಕ್ಕುಬಿದ್ದ ಹಂದಿಯು ಏಟನಿಂದ ಮೆತ್ತಗಾಗಿ

ಹೋಗಿತ್ತು. ಅದು ಗುಡಾಣದ ಒಂದು ಬದಿಯಲ್ಲಿ ಬಿದ್ದುಕೊಂಡು ಬಿಟ್ಟಿತು. ಹರಿಕುಲಿಶನು ಆ ಮೇಲೆ ತನ್ನ ಮನೆಗೆ ಹೊರಟು ಹೋದನು.

ರಾಜನು ಗುಡಾಣದ ಮುಚ್ಚಳವನ್ನು ತೆಗೆದು ಹೊರಗೆ ಬಂದನು. ಅವನ ಮುಖವು ಲಜ್ಜಾಭರಿತವಾಗಿತ್ತು. ಅವನ ಶರೀರವು ಭಯದಿಂದ ನಡುಗುತ್ತಿತ್ತು. ಆದರೂ ಅವನ ಮನಸ್ಸಿನಲ್ಲಿದ್ದುದು ಹರಿಕುಲಿಶನಿಗೆ ಇನ್ನೂ ಕಷ್ಟದ ಕೆಲಸಕ್ಕೆ ಹಚ್ಚುವ ವಿಚಾರ! ಆದರಲ್ಲೂ ಅವನ ತಲೆಯಲ್ಲಿದ್ದುದು ಪ್ರಾಣಿಗಳಿಂದಲೇ ದಾಯಾದಿಯನ್ನು ನಾಶಮಾಡುವ ವಿಚಾರ. ಆದ್ದರಿಂದ ಮರುದಿನವೇ ರಾಜನು ಹರಿಕುಲಿಶನಿಗೆ ಇನ್ನೊಂದು ಕೆಲಸವನ್ನು ಒಪ್ಪಿಸಿದನು.

ಮೈಸಿನಿಗೆ ಸ್ವಲ್ಪ ದೂರದಲ್ಲಿ ಆರ್ಕೇಡು ಎಂಬ ನಾಡು ಇತ್ತು. ಆ ನಾಡಿನಲ್ಲಿ ಒಂದು ಅರಣ್ಯವಿತ್ತು. ಆ ಅರಣ್ಯದಲ್ಲಿ ಒಂದು ಜಿಂಕೆಯನ್ನು ದೇವ ಬೇಟೆಗಾರ್ತಿ, ಚಂದ್ರಕಲಾ ದೇವಿಯು ಸಾಕುತ್ತಿದ್ದಳು. ಅವಳ ದೇವಸ್ಥಾನವು ಆ ಅರಣ್ಯದ ಮಧ್ಯದಲ್ಲಿತ್ತು. ಜಿಂಕೆಯು ಯಾವಾಗಲೂ ಆ ದೇವಸ್ಥಾನದ ಬಳಿಯೇ ಹುಲ್ಲು ಮೇಯುತ್ತಿರುತ್ತಿತ್ತು. ಅದಕ್ಕೆ ಚಿನ್ನದ ಕೋಡುಗಳೂ, ಹಿತ್ತಾಳಿಯ ಗೊರಸುಗಳೂ ಇದ್ದುವು. ಅದರ ಓಟದ ವೇಗವು ಅಸಾಧಾರಣವಾಗಿತ್ತು. ಒಂದೇ ಸಾರಿ ಅದು ನೂರು ಗಜ ನೆಗೆಯುತ್ತಿತ್ತು. ವಾಯುವನ್ನು ಹಿಂದಿಕ್ಕಿ ಓಡುವ ಶಕ್ತಿ ಅದರದು. ಬೇಟೆಗಾರರು ಅದನ್ನು ಹಿಂಬಾಲಿಸಿ ಬಲು ಪೇಚಾಟಕ್ಕೆ ಸಿಕ್ಕುಬೀಳುತ್ತಿದ್ದ ವರ್ತಮಾನವು ಆಗಾಗ ಕೇಳ ಬರುತ್ತಿತ್ತು. ಆ ಜಿಂಕೆಯನ್ನು ಹಿಡಿದು ತರುವಂತೆ ರಾಜನ ಅಪ್ಪಣೆ.

ಹರಿಕುಲಿಶನು ಪಿಟ್ಟೆನ್ನದೆ ಚಂದ್ರಕಲಾದೇವಿಯ ಗುಡಿಗೆ ಹೋದನು. ಅಲ್ಲೇ ಪಕ್ಕದ ಪೊದೆಗಳ ಮರೆಯಲ್ಲಿ ಜಿಂಕೆಯು ಬರುವ ದಾರಿಗಳನ್ನು ನೋಡುತ್ತಾ ಕುಳಿತುಕೊಂಡನು. ದಾರಿ ನೋಡಿ ನೋಡಿ ಅವನ ಕಣ್ಣು ಕೆಂಪಗಾಯಿತು. ಆದರೂ ಜಿಂಕೆಯ ಸುಳಿವೇ ಇಲ್ಲ. ಕಾದುಕುಳಿತುಕೊಳ್ಳುವುದೂ ಅವನಿಗೆ ಕಷ್ಟವಾಗಿ ತೋರಿತು. ಕಾಡುನೊಣಗಳು ಅವನ ಮೈಯ ನೆತ್ತರನ್ನು ಹೀರಿದುವು. ಹಲ್ಲಿ ಹಾವುಗಳು ಅವನ ಕಾಲಮೇಲೆ ಹರಿದಾಡಿದುವು. ಆದರೂ ಅವನು ಮಿಸುಕಾಡಲಿಲ್ಲ. ಕೊನೆಗೆ ಸೂರ್ಯನು ಮುಳುಗುವ ವೇಳೆ, ಕಿರಿಟೆಗಳು ಕಿರಿಗುಟ್ಟುತ್ತಿದ್ದಾಗ ಜಿಂಕೆಯ ಸವಾರಿ

ಬಂತು. ಅದರ ಚಂದವನ್ನು ನೋಡಿ ಹರಿಕುಲಿಶನಿಗೆ ಉಂಟಾದ ಸಂತೋಷ ವನ್ನು ವರ್ಣಿಸಲು ಸಾಧ್ಯವೇ ಇಲ್ಲ. ಅದರ ಚಿನ್ನದ ಕೋಡುಗಳು ಹೊನ್ನ ಕಿರೀಟದಂತೆ ತೋರಿದುವು. ಅದರ ಕಣ್ಣುಗಳು ಮಿಂಚಿನ ಮರಿಗಳಂತೆ ಮಿಂಚುತ್ತಿದ್ದುವು ಅದರ ಮೈ ಹೊನ್ನಿನ ನೀರಿನಲ್ಲಿ ಅದ್ದಿದ್ದಂತೆ ಮಿರುಗು ತಿತ್ತು. ಹರಿಕುಲಿಶನು ಅದು ಸಮೀಪಕ್ಕೆ ಬಂದ ಕೂಡಲೇ ಮುಂದೆ ನೆಗೆದು ಅದನ್ನು ಹಿಡಿಯಲು ಹೋದನು—ಆದರದು ವಾಯುವೇಗದಿಂದ ಓಡಿ ಹೋಯಿತು.

ಆದರೆ ಆ ಯುವನ ವೀರನು ಹತಾಶನಾಗಲಿಲ್ಲ. ಅವನು ಜಿಂಕೆಯನ್ನು ಹಿಂಬಾಲಿಸಿದನು. ಅದು ಗುಡ್ಡ ಬೆಟ್ಟ ನದಿ ತೊರೆಗಳನ್ನು ದಾಟಿ ಓಡಿತು. ಆರ್ಕೇಡಿನ ಗಡಿಯನ್ನು ದಾಟಿತು. ಆದರೆ ಹರಿಕುಲಿಶನು ಅದರ ಹಿಂದೆಯೇ ಓಡಿದನು. ಹೀಗೆ ಐರೋಪಿಯ ದೇಶಗಳನ್ನೆಲ್ಲಾ ಸುತ್ತಿತು. ವೀರನು ಮಾತ್ರ ಒಂದು ವರ್ಷವಾದರೂ ಅದರ ಬೆನ್ನನ್ನು ಬಿಡಲೇ ಇಲ್ಲ. ಕಡೆಗೆ ಅದಕ್ಕೆ ಆಯಾಸವಾಯಿತು. ಅದರ ಶಕ್ತಿ ಕುಂದಿತು, ಕೊನೆಗೆ ಅದು ಚಂದ್ರ ಕಲಾದೇವಿಯ ಗುಡಿಗೆ ಹಿಂದಿರುಗಿ ಬಂದು, ನಿಂತುಕೊಂಡಿತು. ಆಗ ಹರಿ ಕುಲಿಶನು ಆ ಜಿಂಕೆಯನ್ನು ಹಿಡಿಯಲು ಕೈನೀಡಿದನು. ಅಷ್ಟರಲ್ಲಿ ಚಂದ್ರ ಲೋಕದಿಂದ ಚಂದ್ರಕಲಾ ದೇವಿಯೂ ಇಳಿದು ಬಂದು—"ಹರಿಕುಲಿಶಾ! ಇದು ನನ್ನ ಜಿಂಕೆ. ಕೈಗೆ ಸಿಗುವ ವಸ್ತುವಲ್ಲ. ನೀನು ಮೈಸಿನಿಗೆ ಹೋಗಿ ಯೂರಿಸ್ತೇಯನಿಗೆ ಈ ವಿಷಯವನ್ನು ಹೇಳು. ನೀನು ಕೈಕೊಂಡ ಕೆಲಸವು ಪೂರೈಸಿತು" ಎಂದಳು. ಹರಿಕುಲಿಶನು ಹಿಂದಿರುಗಿ ಯೂರಿಸ್ತೇಯನಿಗೆ ಎಲ್ಲಾ ವಿಷಯವನ್ನು ತಿಳಿಸಿದನು.

ಮರುದಿನ ರಾಜನು ದಾಯಾದಿಯನ್ನು ಕರೆದು—"ನಮ್ಮ ಸ್ತಂಭಾ ಲಯ ಬಯಲಿನಲ್ಲಿ ವಿಚಿತ್ರತರದ ಪಕ್ಷಿಗಳಿವೆ. ಅವು ಬೆಳೆಗಳನ್ನು ಹಾಳು ಮಾಡುವುವಲ್ಲದೆ, ಮಕ್ಕಳನ್ನು ಎತ್ತಿಕೊಂಡು ಹೋಗಿ ಪ್ರಜೆಗಳಿಗೂ ತೊಂದರೆ ಯನ್ನುಂಟುಮಾಡಿವೆ. ಅವುಗಳ ಉಗುರುಗಳು ಉಕ್ಕಿನ ಅಲಗುಗಳಂತೆ ಹರಿತವಾಗಿವೆ. ಅವುಗಳ ಗರಿಗಳು ಮುಳ್ಳುಹಂದಿಯ ಮುಳ್ಳುಗಳಂತೆ ಚೂಪಾಗಿವೆ. ಅವು ಮುಳ್ಳುಗಳನ್ನು ಬಿಟ್ಟು ಜನರಿಗೆ ನೋವನ್ನುಂಟು ಮಾಡುತ್ತಿವೆ. ಅವುಗಳನ್ನು ನಾಶಮಾಡುವುದು ನಿನ್ನ ಕೆಲಸ" ಎಂದನು. ಹರಿಕುಲಿಶನು ಕೂಡಲೇ ಸ್ತಂಭಾಲಯದ ಬಯಲಿಗೆ ಹೋದನು. ಆ ಬಯ

ಲಿನ ಬಳಿ ಒಂದು ಅಡವಿಯಿತ್ತು. ಆ ಅಡವಿಯ ನಡುವಿನಲ್ಲಿ ಒಂದು ಕೊಳವಿತ್ತು. ಆ ಕೊಳದ ಸುತ್ತುಮುತ್ತಲಿನ ಮರಗಳಲ್ಲಿ ಹಕ್ಕಿಗಳು ಗೂಡು ಕಟ್ಟಿದ್ದುವು, ಹರಿಕುಲಿಶನು ಆ ಪಕ್ಷಿಗಳ ಗೂಡುಗಳನ್ನು ಕಂಡುಹಿಡಿದು ಅವುಗಳನ್ನು ಓಡಿಸಲು ಒಂದು ಸುಲಭೋಪಾಯವನ್ನು ಕೈಕೊಂಡನು ಅವನು ಮೆತ್ತಗೆ ನಡುಕೊಳದ ಬದಿಯಲ್ಲಿ ನಿಂತು, ತನ್ನ ಗುರಾಣಿಯನ್ನು ಬಡಬಡನೆ ಬಡಿಯತೊಡಗಿದನು. ಎಂದೂ ಕೇಳದ ಈ ಶಬ್ದವು ಆ ಪಕ್ಷಿಗಳಿಗೆ ದಿಗಿಲನ್ನುಂಟುಮಾಡಿತು. ಒಡನೆ ಒಂದು ಹಿಂಡು ಥಕ್ಕನೆ ಆಕಾಶಕ್ಕೆ ಹಾರಿತು. ಅಲ್ಲಿಂದಲೇ ಆ ಪಕ್ಷಿಗಳು ತಮ್ಮ ಮುಳ್ಳುಗಳನ್ನು ಎಸೆದವು. ಆದರೆ ಗುರಾಣಿಯ ದೆಸೆಯಿಂದ ಹರಿಕುಲಿಶನಿಗೆ ಅಪಾಯವಾಗಲೇ ಇಲ್ಲ. ಪಕ್ಕದ ಮರಗಳು ಮಾತ್ರ ಸೀಳಿ ಹೋದುವು. ಅವುಗಳೊಡನೆ ಪಕ್ಷಿಗಳ ಗೂಡುಗಳೂ ನಾಶವಾದುವು. ಮುಳ್ಳುಗರಿಗಳನ್ನು ಕಳಕೊಂಡ ಮೇಲೆ ಆ ಪಕ್ಷಿಗಳು ತಮ್ಮನ್ನು ರಕ್ಷಿಸಿಕೊಳ್ಳುವ ಉಪಾಯ ಕಾಣದೆ ಆ ಊರನ್ನೇ ಬಿಟ್ಟು ಹಾರಿ ಹೋದುವು. ಅವುಗಳಲ್ಲಿ ಕೆಲವು ಹರಿಕುಲಿಶನ ಬಾಣಗಳಿಗೆ ತುತ್ತಾದುವು. ದೇಶಕ್ಕೆ ಕ್ಷೇಮವಾಯಿತು. ಆದರೂ ಹರಿಕುಲಿಶನ ಕೆಲಸಕ್ಕೆ ಅಂತ್ಯವಿಲ್ಲದಾಯಿತು.

ಕೂಡಲೇ ರಾಜನು ಅವನನ್ನು ಬಹು ಕಷ್ಟತರದ ಕೆಲಸಕ್ಕೆ ನೇಮಿಸಿದನು, ಜಯಸೇನನ ಅರಗಾವಳಿಗರಲ್ಲಿ ಆಗೇಯನೆಂಬೊಬ್ಬ ಅರಗುವರನು ಇದ್ದನು. ಅವನು ಪಶುಪಾಲಕನಾಗಿದ್ದನು. ಅವನಿಗೆ ಲೆಕ್ಕವಿಲ್ಲದಷ್ಟು ಗೋವುಗಳು ಇದ್ದುವು; ಸಾಯಂಕಾಲ ಅವು ಹಟ್ಟಿಗೆ ಬರುವಾಗ, ಮಂದಾನಿಲನಟ್ಟುವ ಬೆಳ್ಮುಗಿಲಿನೋಳಿಯಂತೆ ಅವುಗಳ ಹಿಂಡು ತೋರುತಿತ್ತು. ಆ ಗೋವೃಂದದಲ್ಲಿ ಹಿಮದಂತೆ ಬೆಳ್ಳಗಿದ್ದ ಏಳೆತ್ತುಗಳು ಇದ್ದುವು. ಅವುಗಳಲ್ಲೊಂದು ಸಲಗದಂತಿದ್ದ ನಾಯಕ. ಅದರ ಹೆಸರು ಪೈತಾನ. ಅದು ತನ್ನ ಸಂಗಡವಿರುತ್ತಿದ್ದ ಆರು ದನಗಳೊಡನೆ ಇಡೀ ಗೋವೃಂದವನ್ನು ಕ್ರೂರ ಪ್ರಾಣಿಗಳಿಂದಲೂ, ವೈರಿಗಳಿಂದಲೂ ಕಳ್ಳರಿಂದಲೂ ರಕ್ಷಿಸುತಿತ್ತು. ಆದರೆ ಅವುಗಳ ಹಟ್ಟಿಯ ಸೆಗಣಿ ತೆಗೆದು ಶುಚಿಯಾಗಿಡುವುದು ಸುಲಭವಾಗಿರಲಿಲ್ಲ. ದನಗಳ ನುಗ್ಗು ಪೈತಾನನ ಹಿಗ್ಗು ಯಾರಿಗೂ ಪ್ರವೇಶ ಕೊಡುತ್ತಿರಲಿಲ್ಲ. ಒಂದೇ ದಿನದಲ್ಲಿ ಆ ಹಟ್ಟಿಯನ್ನು ಶುದ್ಧಮಾಡಿ ಬರಬೇಕೆಂದು ಹರಿಕುಲಿಶನಿಗೆ ರಾಜನ ಅಪ್ಪಣೆ. ಆ ಯುವನ

ವೀರನು ಸಿಂಹದ ಚರ್ಮವನ್ನು ಹೊದೆದು ಅಗೇಯನ ಗೋವೃಂದದ ಮಧ್ಯೆ ಹೋಗಿ ನಿಂತನು. ಆಗ ಸಿಂಹದ ಸಿಂಡು ವಾಸನೆಯು ಪೈಶಾಸಿನ ಮೂಗಿಗೆ ಮುಟ್ಟಿತು. ಕೂಡಲೇ ಅದು ಸಿಂಹವೇ ಬಂತೆಂದೆಣಿಸಿ ಗುಟುರಿಡುತ್ತಾ ಹರಿಕುಲಿಶನಿದ್ದಲ್ಲಿಗೆ ಬಂತು. ಆದರೆ ಅವನು ಕದಲಲಿಲ್ಲ. ಆ ದನದ ಕೊಂಬನ್ನು ಹಿಡಿದು ತಲೆಯನ್ನೂ ನೆಲಕ್ಕೆ ಬಗ್ಗಿಸಿಬಿಟ್ಟನು. ಪೈಶಾನ್ ಕದಲದೆ ನಿಂತು ಬಿಟ್ಟಿತು. ಆ ಮೇಲೆ ಅದು ಹರಿಕುಲಿಶನು ಹೇಳಿದಂತೆ ಮಾಡಿತು. ಅವನು ಅದನ್ನು ಆ ದನಗಳ ಹಟ್ಟಿಯ ಬಳಿ ನಿಲ್ಲುವಂತೆ ಮಾಡಿದನು. ಅದನ್ನು ಹಿಂಬಾಲಿಸಿ ದನಗಳೆಲ್ಲಾ ನಿಂತವು. ಅವುಗಳ ಹಟ್ಟಿಗಳು ಒಂದು ಹೊಳೆಯ ಬದಿಯಲ್ಲಿ ಕಟ್ಟಲ್ಪಟ್ಟಿದ್ದವು. ಹರಿಕುಲಿಶನು ಆ ಹೊಳೆಯ ಎತ್ತರಭಾಗದಲ್ಲಿ ಒಂದು ಕಾಲುವೆಯನ್ನು ತೋಡಿ, ಹೊಳೆಯ ನೀರೆಲ್ಲಾ ಹಟ್ಟಿಗಳೊಳಗೆ ಹೋಗುವಂತೆ ಮಾಡಿದನು. ಹೊಳೆಯ ನೀರು ಹರಿದು ಹಟ್ಟಿಗಳನ್ನೆಲ್ಲಾ ತೊಳೆದುಬಿಟ್ಟಿತು. ತನ್ನ ಕೆಲಸ ಪೂರೈಸಿ ಹರಿಕುಲಿಶನು ಹಿಂದಿರುಗಿದನು.

ಸ್ವಲ್ಪ ದಿನಗಳಲ್ಲೇ ಅವನಿಗೆ ಇನ್ನೊಂದು ಕೆಲಸ ಮಾಡಲು ಅಪ್ಪಣೆಯಾಯಿತು. ಕ್ರೀಡಾ ದ್ವೀಪದಲ್ಲಿ ಒಂದು ಹೋರಿಯು ತೊಂದರೆ ಕೊಡುತಿತ್ತು. ಅದನ್ನು ಹಿಡಿದುಕೊಂಡು ಬರಲು ರಾಜನ ಆಜ್ಞೆ. ಆ ಹೋರಿಯಾದರೋ ದೇವಾಂಶ ಸಂಭೂತವಾದುದು. ಹಿಂದೆ ಕ್ರೀಡಾ ದ್ವೀಪದ ಮೈನೋ ಚಕ್ರವರ್ತಿಯು ದ್ಯುಪಿತೃನಿಗೆ ಯಜ್ಞ ಮಾಡಬೇಕೆಂದು ನಿಶ್ಚಯಿಸಿ, ಯಜ್ಞವೇದಿಕೆಯನ್ನು ಕಡಲ ಬಳಿ ನಿರ್ಮಿಸಿ, ಯಜ್ಞಾಹುತಿಗಾಗಿ ಒಂದು ಪ್ರಾಣಿಯನ್ನು ಕಳುಹಿಸಿಕೊಡಬೇಕೆಂದು ವರುಣನನ್ನು ಪ್ರಾರ್ಥಿಸಿಕೊಂಡನು. ಅವನ ಪ್ರಾರ್ಥನೆಯನ್ನು ಮನ್ನಿಸಿ ವರುಣನು ಒಂದು ಹೋರಿಯನ್ನು ಕಳುಹಿಸಿದನು ಅದರ ಮೈ ಹಿಮದಂತೆ ಬೆಳ್ಳಗಿತ್ತು. ಅದರ ಕೊಂಬುಗಳು ಬೆಳ್ಳಿಯಂತೆ ಬೆಳಗುತ್ತಿದ್ದುವು; ಅಂತಹ ಚೆಂದವಾದ ದನವು ಭೂಮಿಯಲ್ಲಿರಲಿಲ್ಲ; ಆದ್ದರಿಂದ ಮೈನಾ ಚಕ್ರವರ್ತಿಗೆ ಅದನ್ನು ಯಜ್ಞದಲ್ಲಿ ವಧಿಸಲು ಮನಸ್ಸು ಬರಲಿಲ್ಲ. ಅದರ ಸಾಧು ಸ್ವಭಾವವನ್ನು ನೋಡಿ ಚಕ್ರವರ್ತಿಯು ಅದನ್ನು ತನ್ನ ತುರುವಿಂಡಿನಲ್ಲಿ ಸೇರಿಸಿಕೊಂಡನು. ಆದರೆ ದ್ಯುಪಿತೃವಿನ ಯಜ್ಞಕ್ಕಾಗಿ ಕಳುಹಿಸಿದ್ದ ಗೋವನ್ನು ಚಕ್ರವರ್ತಿಯು ಇಟ್ಟುಕೊಂಡುದು ದೇವತೆಗಳಿಗೆ ಸರಿತೋರಲಿಲ್ಲ. ಅವರು ಗೋವಿನ ಸಾಧು ಸ್ವಭಾವವು

ಹೋಗುವಂತೆ ಮಾಡಿಬಿಟ್ಟರು. ಆದ್ದರಿಂದ ಅದು ಭಯಂಕರ ರೂಪವನ್ನು ತಳೆದು ಸ್ವೇಚ್ಛೆಯಾಗಿ ಸಂಚರಿಸುತ್ತಾ ಜನರಿಗೆ ಅಪಾಯವನ್ನುಂಟುಮಾಡಿತು. ಅದರ ಉಗ್ರ ಸ್ವಭಾವದಿಂದ ಅನೇಕರು ಮರಣ ಹೊಂದಿದರು. ಅದನ್ನು ಹಿಡಿದು ತರಲು ಹರಿಕುಲಿಶನು ತಕ್ಕವನೆಂದು, ಕ್ರೀಡಾದ್ವೀಪದ ಜನರು ನಿಶ್ಚಯಿಸಿದರು. ಅವರ ಬೇಡಿಕೆಯಂತೆ ಯೂರಿಸ್ತ್ರೇಯನು ಅವನನ್ನು ಕಳುಹಿಸಿಕೊಟ್ಟನು.

ಹರಿಕುಲಿಶನು ಕ್ರೀಡಾದ್ವೀಪಕ್ಕೆ ಪ್ರಯಾಣಮಾಡಿ, ಆ ಹೋರಿಯು ಹೆಚ್ಚಾಗಿ ಇರುತ್ತಿದ್ದ ಕಾಡಿಗೆ ಹೋದನು. ಅವನ ವಾಸನೆಯನ್ನು ತಿಳಿದು ಆ ಹೋರಿಯು ಅವನಿಗೆ ಇರಿಯಲು ಓಡಿಬಂತು. ಹರಿಕುಲಿಶನು ಅದನ್ನು ಕಂಡು ನಿಮಿಷಾರ್ಧದಲ್ಲಿ ಆ ಹೋರಿಯ ಕೊಡುಗಳನ್ನು ಹಿಡಿದು, ಅದನ್ನು ಬಗ್ಗಿಸಿ ನಿಲ್ಲಿಸಿಬಿಟ್ಟನು ಅವನ ಕೈಯಿಂದ ತಪ್ಪಿಸಿಕೊಳ್ಳಲು ಹೋರಿಯು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತು. ಆ ಮೇಲೆ ಅದು ಕುರಿಯಂತೆ ಸಾಧುವಾಯಿತು. ಅವನು ಅದರ ಬೆನ್ನ ಮೇಲೆ ಕುಳಿತುಕೊಂಡನು. ಅದು ದಾರಿಯಲ್ಲಿದ್ದ ಸಮುದ್ರದಲ್ಲಿ ಈಜಿ ಅವನನ್ನು ಮ್ಯೆಸಿನಿಗೆ ಕೊಂಡೊಯ್ದಿತು. ಅವನದನ್ನು ಯೂರಿಸ್ತ್ರೇಯನಿಗೊಪ್ಪಿಸಿದನು.

ಆದರೂ, ಅವನ ಕೆಲಸ ಮುಗಿಯಲಿಲ್ಲ. ಮ್ಯೆಸಿನಿಗೆ ಬಡಗು ದಿಕ್ಕಿನಲ್ಲಿ ತ್ರೇಸ್ ಎಂಬ ದೇಶವಿತ್ತು. ಆ ದೇಶದ ರಾಜನ ಹೆಸರು ದಯಾಮಿದ. ಆದರೆ ಇವನಲ್ಲಿ ದಯೆ ಎಳ್ಳಷ್ಟೂ ಇರಲಿಲ್ಲ. ಕಪ್ಪಲೊಡೆದು ಅಪಾಯಕ್ಕೆ ಸಿಕ್ಕಿ, ಅವನ ದೇಶದ ತೀರದಲ್ಲಿ ಕಾಣಿಸಿಕೊಂಡ ನಾವಿಕರನ್ನೆಲ್ಲಾ ಅವನು ಕೊಂದು, ಅವರ ಮಾಂಸವನ್ನು ತನ್ನ ರಣವಾಜಿಗಳಿಗೆ ಕೊಡುತ್ತಿದ್ದನು. ಆ ಕುದುರೆಗಳಾದರೋ ಉಗ್ರ ಸ್ವಭಾವದವುಗಳಾಗಿದ್ದುವು. ಅವುಗಳ ಮೇಲೇರಿ ದಯಾಮಿದನು ಯುದ್ಧಮಾಡಿ ನೆರೆಕರೆಯ ದೇಶದ ಜನರನ್ನು ಗೋಳಾಡಿಸುತ್ತಿದ್ದನು. ಅವುಗಳನ್ನು ಹಿಡಿದು ತರಲು ಹರಿಕುಲಿಶನನ್ನು ರಾಜನು ಕಳುಹಿಸಿದನು.

ಆ ಯುವನ ವೀರನು ಹಲವು ದಿನ ದಾರಿನಡೆದು ದಯಾಮಿದನ ರಾಜಧಾನಿಯನ್ನು ಸೇರಿ, ಅವನ ಕುದುರೆಯ ಲಾಯಗಳಿಗೆ ನೇರವಾಗಿ ಹೋದನು. ಪಹರೆಯವರನ್ನು ಸೀಳಿ ಹಾಕಿದನು. ಲಾಯದ ಒಳ ಹೊಕ್ಕು, ಕುದುರೆಗಳನ್ನು ಕಟ್ಟಿದ ಕಬ್ಬಿಣದ ಸರಪಳಿಗಳನ್ನು ಕೈಯಲ್ಲಿ ಹಿಡಿದು ತನ್ನ ದೇಶದ ಕಡೆ

ಹೊರಟನು. ಸ್ವಲ್ಪ ದೂರ ಹೋಗುವುದರೊಳಗಾಗಿ ದಯೂವಿಂದನ ಸೈನಿಕರು ಅವನನ್ನು ಅಡ್ಡಗಟ್ಟಿದರು. ದಯೂವಿಂದನೂ ಅವರನ್ನು ಸೇರಿದನು. ಅವರೊಡನೆ ಘೋರ ಯುದ್ಧವು ಜರುಗಿತು. ಆದರೆ ಹರಿಕುಲಿಶನು ಅವರನ್ನೆಲ್ಲಾ ಸೋಲಿಸಿ, ದಯೂವಿಂದನನ್ನು ಸೆರೆ ಹಿಡಿದು ಕುದುರೆಗಳನ್ನು ಊರಿಗೆ ಕೊಂಡೊಯ್ದನು. ತನ್ನ ದಾಯಾದಿಗೆ ಅವುಗಳನ್ನು ಒಪ್ಪಿಸಿದನು.

ಇದರೆ ಆ ದಾಯಾದಿಯು ಕೂಡಲೇ ಅವನನ್ನು ಘೋರಕನ್ಯಾಪುರಕ್ಕೆ ಕಳುಹಿಸಿ, ಆ ಪುರದ ರಾಣಿಯ ಮೇಖಲೆಯನ್ನು ತರಲು ಅಪ್ಪಣೆ ಕೊಟ್ಟನು. ಆ ಪುರದಲ್ಲಿ ವಾಸಿಸುತ್ತಿದ್ದವರೆಲ್ಲಾ ಕನ್ನಿಕೆಯರೇ. ಅದು ಕೌಕಾಸ್ಯ ಪರ್ವತದ ಕಿಬ್ಬದಿಯಲ್ಲಿತ್ತು. ಆ ರಾಣಿಯ ಮೇಖಲೆಯನ್ನು ರಣದೇವತೆಯೇ ತಯಾರಿಸಿ ಅವಳಿಗೆ ಒಪ್ಪಿಸಿದ್ದನು. ಅದರ ಬಲದಿಂದ ಆ ಕನ್ನಿಕೆಯರು ಯುದ್ಧದಲ್ಲಿ ಅಜೇಯರಾಗಿದ್ದರು. ಅನೇಕ ವೇಳೆ ಅವರು ಯುವನರನ್ನು ಸೋಲಿಸಿ, ತಮ್ಮ ಖಡ್ಗದ ರುಚಿ ತೋರಿಸಿದ್ದರು. ಆದ್ದರಿಂದ ಅದನ್ನು ಯುವನರ ಹಿತದೃಷ್ಟಿಯಿಂದ ಅವರ ಕೈ ತಪ್ಪಿಸಿ ಪಡೆದುಕೊಳ್ಳುವುದು ಒಳ್ಳೆಯದೆಂದು ಯೂರಿಸ್ತೇಯನ ಮಗಳು ಹೇಳಿದಳು. ಅವಳ ಕೇಳಿಕೆಯಂತೆ ಹರಿಕುಲಿಶನು ಘೋರಕನ್ಯಾಪುರಕ್ಕೆ ಹೋಗಲೇ ಬೇಕಾಯಿತು.

ಹರಿಕುಲಿಶನು ಹಡಗು ಹತ್ತಿ ಕಪ್ಪು ಸಮುದ್ರವನ್ನು ದಾಟಿ ಆ ಪುರದ ಬಂದರಿನಲ್ಲಿ ಲಂಗರು ಹಾಕಿದನು. ತನ್ನ ರಾಜ್ಯಕ್ಕೆ ಬರುವವನು ವೀರನೇ ಇರಬೇಕೆಂದೆಣಿಸಿ ರಾಣಿಯು ಅವನ ಹಡಗಿಗೆ ಬಂದು ಅವನಿಗೆ ಸನ್ಮಾನ ಮಾಡಿದಳು. ಆ ವೀರನ ಕೇಳಿಕೆಯನ್ನು ಮನ್ನಿಸಿ, ತನ್ನ ಮೇಖಲೆಯನ್ನು ಅವನಿಗೆ ಕೊಟ್ಟು ಬಿಟ್ಟಳು. ಆದರೆ ಅವಳ ಸಖಿಯರೂ, ಪರಿಚಾರಕರೂ ಅದನ್ನು ತೆಗೆದುಕೊಂಡು ಹೋಗಲು ಬಿಡದೆ, ಅವನೊಡನೆ ಯುದ್ಧ ಮಾಡಿದರು ಹರಿಕುಲಿಶನು ಯುದ್ಧದಲ್ಲಿ ಅವರನ್ನು ಸೋಲಿಸಿ, ಉಪಾಯದಿಂದ ಹಾಯಿಯನ್ನು ಎತ್ತಿ, ತನ್ನ ಊರಿಗೆ ಪಯಣ ಬೆಳಸಿ, ನವರತ್ನ ಖಚಿತವಾದ ಮೇಖಲೆಯನ್ನು ಯೂರಿಸ್ತೇಯನ ಮಗಳಿಗೊಪ್ಪಿಸಿದನು.

ಆದರೂ ಹರಿಕುಲಿಶನಿಗೆ ತನ್ನೂರಲ್ಲಿ ನಿಲ್ಲಲು ಅವಕಾಶವಿರಲಿಲ್ಲ. ಪಡುದೆಸೆಯಲ್ಲಿ ಒಂದು ದ್ವೀಪವಿತ್ತು, ಅದನ್ನಾಳುತ್ತಿದ್ದ ಗೇರಿಯನೆಂಬ ರಾಕ್ಷಸನು ಸಾವಿರಾರು ಕೆನ್ನದನವಿಂಡುಗಳಿಗೊಡೆಯನಾಗಿದ್ದನು. ಅವನ

ಕೆಂದನಗಳನ್ನು ಹಿಡಿದು ತರಲು ಹರಿಕುಲಿಶನಿಗೆ ರಾಜನು ಅಪ್ಪಣೆ ಕೊಟ್ಟನು. ಆದರೆ ಬಹು ದೂರದ ದೇಶಕ್ಕೆ ಹೋಗುವುದೆಂತು? ವಿಶಾಲವಾದ ಸಮುದ್ರವನ್ನು ದಾಟುವುದೆಂತು? ಹರಿಕುಲಿಶನು ಸೂರ್ಯದೇವನನ್ನು ಪ್ರಾರ್ಥಿಸಿ, ಅವನಿಂದ ಹರಗೋಲಿನಂತಹ ಒಂದು ನೌಕಾ ಪಾತ್ರೆಯನ್ನು ಪಡಕೊಂಡನು. ಆ ನೌಕಾ ಪಾತ್ರೆಯು ಹಡಗಿನಂತೆ ನೀರಿನಲ್ಲಿ ತೇಲುವುದು; ಬೇಕಾದಾಗ ಹಿಗ್ಗುವುದು ಇಲ್ಲವೇ ಕುಗ್ಗುವುದು. ಹರಿಕುಲಿಶನು ಅದನ್ನು ಕಡಲ ಮೇಲೆ ಇಟ್ಟು, ತಾನು ಅದರೊಳಗೆ ಕುಳಿತುಕೊಂಡನು. ಆ ನೌಕಾ ಪಾತ್ರೆಯು ತೇಲುತ್ತಾ ಪಡುಗಡಲನ್ನು ದಾಟಿ, ಮನುಷ್ಯರ ಪಾದ ಸೋಂಕದ ವರುಣನ ರಾಜ್ಯವನ್ನು ಮುಟ್ಟಿತು ಆಗ ವರುಣನಿಗೆ ಸಿಟ್ಟೇರಿತು. ಅವನು ದೊಡ್ಡ ಬಿರುಗಾಳಿಯನ್ನೆಬ್ಬಿಸಿದನು. ಕಡಲ ಸುಳಿಗಳನ್ನುಂಟುಮಾಡಿದನು. ಸಮುದ್ರವು ಅಲ್ಲೋಲಕಲ್ಲೋಲವಾಯಿತು. ಆ ಪಾತ್ರೆಯು ಸಿಕ್ಕಾಬಟ್ಟೆ ತೇಲಾಡಿತು. ಆಗ ಹರಿಕುಲಿಶನು ರೇಗಿ ಬಾಣದ ಮಳೆಯನ್ನು ವರುಣನ ಮೇಲೆ ಸುರಿದನು. ಆದರೆ ವರುಣನನ್ನು ಗೆಲ್ಲಲು ಸಾಧ್ಯವೇ? ಹರಿಕುಲಿಶನ ತುಂಟತನವನ್ನು ನೋಡಿ ಅವನಿಗೆ ನಗೆಯೇ ಬಂತು. ಕೂಡಲೇ ಸಮುದ್ರವು ಶಾಂತವಾಯಿತು. ಹರಿಕುಲಿಶನು ಸ್ವಲ್ಪ ಸಮಯದಲ್ಲಿಯೇ ಗೇರಿಯನ ರಾಜ್ಯವನ್ನು ಸೇರಿ, ಒಂದು ಪರ್ವತವನ್ನೇರಿ ದನಗಳ ಇರುವಿಕೆಯನ್ನು ಕಂಡು ಹಿಡಿಯಲು ಅತ್ತಿತ್ತ ನೋಡಿದನು. ಆಗ ಆ ರಾಕ್ಷಸನ ನಾಯಿಯೊಂದು ಬಂದು ಅವನನ್ನೆದುರಿಸಿತು. ಹರಿಕುಲಿಶನು ಗದೆಯನ್ನು ಪಯೋಗಿಸಿ ನಾಯನ್ನು ಕೊಂದನು. ಕೂಡಲೇ ಗೋಪಾಲಕರು ಅವನನ್ನು ಮುತ್ತಿದರು. ಅವರನ್ನೂ ಸುಲಭವಾಗಿ ಗದೆಯಿಂದ ಕೊಂದು ಬಿಟ್ಟನು. ಅಷ್ಟರಲ್ಲಿ ರಾಕ್ಷಸನೇ ಓಡಿ ಬರುವುದು ಅವನಿಗೆ ತೋರಿತು. ಆ ರಾಕ್ಷಸನ ರೂಪು ಭಯಂಕರವಾಗಿತ್ತು. ಅವನಿಗೆ ಮೂರು ಮೈ, ಮೂರು ತಲೆ! ಕಾಲುಗಳೋ ಆರು! ಕೈಗಳೂ ಆರು! ಪ್ರತಿಯೊಂದು ಕೈಯಲ್ಲಿ ಒಂದೊಂದು ಗದೆಯಿತ್ತು. ಅವನು ಆರು ಗದೆಗಳನ್ನು ಬೀಸುತ್ತಾ ಬರುತ್ತಿದ್ದನು. ಕೂಡಲೇ ಆ ಯುವಕ ವೀರನು ತನ್ನ ವಿಷಾಸ್ತ್ರಗಳನ್ನುಪಯೋಗಿಸಿ ಅವನನ್ನು ಕೆಡವಿದನು. ಆ ಮೇಲೆ ಎಲ್ಲಾ ದನಗಳನ್ನು ಸಮುದ್ರ ತೀರಕ್ಕೆ ಒಯ್ದು, ನೌಕಾಪಾತ್ರೆಯಲ್ಲಿ ತುಂಬಿ, ತನ್ನೂರಿಗೊಯ್ದನು. ಆದರೆ ದಾರಿಯಲ್ಲಿ ಅವುಗಳಲ್ಲಿ ಕೆಲವನ್ನು ಸೊಣಗಳ ಹಾವಳಿಯಿಂದಲೂ,

ಕಳ್ಳರ ಬಾಧೆಯಿಂದಲೂ ಕಳೆಕೊಳ್ಳಬೇಕಾಯಿತು. ಊರನ್ನು ಸ್ಥಾಪಿಸಿ ಗೊಯ್ದನು.

ತನ್ನ ದಾಯಾದಿಯು ಸುರಕ್ಷಿತವಾಗಿ ಊರಿಗೆ ಹಿಂದಿರುಗಿದುದನ್ನು ನೋಡಿ, ರಾಜನ ಹೆದರಿಕೆಯು ಇಮ್ಮಡಿಯಾಯಿತು. ಅವನನ್ನು ಅದಷ್ಟು ದೂರ ಇಡಲು ಇನ್ನೊಂದು ಉಪಾಯ ಮಾಡಿದನು. ಪಶ್ಚಿಮಾಂಬುಧಿಯ ತೀರದಲ್ಲಿ ಸಂಧ್ಯಾಪುತ್ರಿಯರು ಒಂದು ತೋಟವನ್ನು ಮಾಡಿದ್ದರು. ಅದರಲ್ಲಿ ಒಂದು ಸೇಬಿನ ಮರವಿತ್ತು. ಆ ಮರದಲ್ಲಿ ಚಿನ್ನದ ಹಣ್ಣುಗಳಿದ್ದುವೆಂದು ಯೂರಿಸ್ತೇಯನು ಕೇಳಿದ್ದನು. ಅದನ್ನು ದಾಯಾದಿಯು ತಂದುಕೊಡ ಬೇಕೆಂದು ಹೇಳಿದನು. ಈ ಕೆಲಸವು ಬಹು ಕಷ್ಟವಾದುದೇ. ಆದರೂ ಹರಿಕುಲಿಶನು ನಗುಮೊಗದಿಂದಲೇ ವಾಯುವ್ಯಾಭಿಮುಖವಾಗಿ ಹೊರಟು, ಸಂಜೆ ಹೊತ್ತಿಗೆ ಒಂದು ನದಿಯನ್ನು ಕಂಡನು. ಅದರ ಹೆಸರು ರೋವಣ ಆ ನದಿಯ ಹತ್ತಿರ ಜಲಕನ್ಯೆಯರು ನೀರಾಟವಾಡುತ್ತಿದ್ದರು. ಅವರನ್ನು ಹರಿಕುಲಿಶನು ಕಂಡು ತನ್ನ ಕತೆಯನ್ನೆಲ್ಲಾ ಹೇಳಿ ಸಂಧ್ಯಾಪುತ್ರಿಯರಿದ್ದ ತೋಟಕ್ಕೆ ಹಾದಿಯನ್ನು ತೋರಿಸಬೇಕೆಂದು ಕೇಳಿಕೊಂಡನು. ಅವರು ಅವನ ಮೇಲೆ ಕನಿಕರವನ್ನು ತೋರಿ 'ಹರಿಕುಲಿಶಾ, ನಮಗೆ ಆ ತೋಟ ವಿರುವ ದಿಕ್ಕು ತಿಳಿಯದು. ನೀನು ಈ ನದಿಯು ಕಡಲನ್ನು ಸೇರುವಲ್ಲಿಗೆ ಹೋದರೆ ಅಲ್ಲಿ ಜಲದೇವನಿರುವನು. ಅವನಿಗೆ ಮಾತ್ರ ಆ ಹಾದಿ ಗೊತ್ತಿರು ವುದು. ಆದರೆ ಅವನು ಕೇಳಿದ ಕೂಡಲೇ ರಹಸ್ಯವನ್ನು ತಿಳಿಸುವವನಲ್ಲ. ಅವನನ್ನು ಕಂಡ ಕೂಡಲೇ ಹಿಂದು ಮುಂದು ನೋಡದೆ ಗಟ್ಟಿಯಾಗಿ ಹಿಡಿದು ಕೊಳ್ಳಬೇಕು. ಏನು ಮಾಡಿದರೂ ಹಿಡಿತವನ್ನು ಮಾತ್ರ ಬಿಡಬಾರದು. ಹಾಗಾದರೆ ಮಾತ್ರ ಅವನು ನಿನ್ನ ಕೇಳಿಕೆಯನ್ನು ಮನ್ನಿಸುವನು' ಎಂದರು. ಮರುದಿವಸ ಅವನು ಆ ಜಲಕನ್ನಿಕೆಯರಿಗೆ ವಂದಿಸಿ, ರೋವಣ ನದಿಯ ಕಡಲ್ಗರೆಯನ್ನು ಸಂಜೆಯಾಗುವಾಗ ಮುಟ್ಟಿ, ಅಲ್ಲಿಯೇ ಜಲದೇವರ ಬರ ವನ್ನು ಹಾರೈಸುತ್ತಾ ಬಂಡೆಕಲ್ಲುಗಳ ಮರೆಯಲ್ಲಿ ಕುಳಿತನು, ಸ್ವಲ್ಪ ಹೊತ್ತಿ ನಲ್ಲಿ ಚಂದ್ರೋದಯವಾಯಿತು. ಆಗ ಒಬ್ಬ ವಿಕಾರ ಸ್ವರೂಪಿಯಾದ ಮುದುಕನು ನೀರಿನಿಂದ ಮೇಲೆ ಬಂದು, ತೀರದ ಮಳಲಿನಲ್ಲಿ ಮಲಗಿದನು. ಅವನ ತಲೆಯಲ್ಲಿ ಕೊಂಬುಗಳಿದ್ದುವು. ಮೈಮೇಲೆಲ್ಲಾ ಉದ್ದವಾದ ಕೂದಲು ಗಳು ತುಂಬಿದ್ದುವು. ಅವನ ಗಡ್ಡದ ಕೂದಲುಗಳು ಕಡಲ್ಕಳೆಗಳಂತೆ ಹಬ್ಬಿ

ಕೊಂಡಿದ್ದವು. ಅವನೇ ಜಲದೇವನಾಗಿರಬಹುದೆಂದು ಊಹಿಸಿ, ಅವನು ನಿದ್ದೆ ಹೋದಾಗ ಹರಿಕುಲಿಶನು ಅವನನ್ನು ಗಟ್ಟಿಯಾಗಿ ಹಿಡಿದುಕೊಂಡನು. ಕೂಡಲೇ ಜಲದೇವನು ತನ್ನ ಸ್ವರೂಪವನ್ನು ಬದಲಾಯಿಸಿದನು. ಆ ಮುದುಕನು ಜಿಂಕೆಯಾಕಾರವನ್ನು ತಳೆದನು. ಜಿಂಕೆಯು ಕಡಲ್ಕಾಗೆಯಾಯಿತು; ಕಡಲ್ಕಾಗೆಯು ಮೂದಲೆಯ ನಾಯಿಯಾಯಿತು; ಗೇರಿಯಾ ರಾಕ್ಷಸನಾಯಿತು; ಆ ಮೇಲೆ ಹೆಬ್ಬಾವಾಯಿತು. ಆದರೆ ಹರಿಕುಲಿಶನು ತನ್ನ ಕೈಯನ್ನು ಸಡಿಲಿಸಲೇ ಇಲ್ಲ. ಆಗ ಆ ಜಲದೇವನು ಹರಿಕುಲಿಶನ ಧೈರ್ಯವನ್ನು ಕಂಡು ಪೂರ್ವರೂಪವನ್ನೇ ತಾಳಿ ಅವನಿಗೇನಾಗಬೇಕೆಂದು ಕೇಳಿದನು. ಆ ಯುವನ ವೀರನು ತನ್ನ ಕೆಲಸದ ವಿಷಯ ತಿಳಿಸಿದನು. ಜಲದೇವನು ಅವನು ಹೇಳಿದ ವಿಷಯವನ್ನೆಲ್ಲಾ ಕೇಳಿ, 'ನಿನ್ನ ಕೆಲಸವು ಕಷ್ಟದಾಯಕವಾದುದು. ನೀನು ಆಫ್ರಿಕಾ ಖಂಡದ ದಕ್ಷಿಣಕ್ಕೆ ಹೋಗು. ಅಲ್ಲಿ ಅತ್ಲಾಸನೆಂಬ ರಾಕ್ಷಸನು ಭೂಮಿಯನ್ನು ಹೊತ್ತುಕೊಂಡಿರುವನು. ನೀನು ಭೂಮಿಯನ್ನು ಸ್ವಲ್ಪಕಾಲ ಹೊತ್ತುಕೊಂಡರೆ ಅವನೇ ಹೋಗಿ ಚಿನ್ನದ ಸೇಬುಗಳನ್ನು ತಂದುಕೊಡುವನು. ಆ ಸೇಬಿನ ತೋಟವನ್ನು ಕಾಯುತ್ತಿರುವವರು ಅವನ ಸೊಸೆಯಂದಿರು' ಎಂದನು.

ಹರಿಕುಲಿಶನು ಜಲದೇವತೆಗೆ ವಂದಿಸಿ ಆಫ್ರಿಕಾಖಂಡಕ್ಕೆ ಕಾಲಿಟ್ಟನು. ಕೂಡಲೇ ಒಬ್ಬ ರಾಕ್ಷಸನು ಅವನನ್ನು ಎದುರಿಸಿದನು. ಅವನ ಹೆಸರು ಅಂತೇಯು; ಭೂದೇವಿಯ ಪುತ್ರ. ಅವನನ್ನು ಸೋಲಿಸಲು ಮರ್ತ್ಯರಿಂದ ಅಸಾಧ್ಯ. ಅವನು ಭೂಮಿಯನ್ನು ಮುಟ್ಟಿದ ಕೂಡಲೇ ಅವನ ಶಕ್ತಿಯು ಇಮ್ಮಡಿಯಾಗುತಿತ್ತು. ಆ ಹಾದಿಯಾಗಿ ಹೋಗುತ್ತಿದ್ದ ಪ್ರಯಾಣಿಕರನ್ನು ಕೊಲ್ಲುವುದು ಅವನ ಕೆಲಸವಾಗಿತ್ತು. ಹರಿಕುಲಿಶನು ಅವನೊಡನೆ ಬಹಳ ಹೊತ್ತು ಕಾದಾಡಿದರೂ ಪ್ರಯೋಜನವಾಗಲಿಲ್ಲ. ಅಂತೇಯನು ಸೋಲಲಿಲ್ಲ. ಅವನ ಶಕ್ತಿ ಹೆಚ್ಚಾಗುತ್ತಾ ಬರುತಿತ್ತು. ಅದನ್ನು ಕಂಡು ಹರಿಕುಲಿಶನು ಅವನನ್ನು ಮೇಲಕ್ಕೆತ್ತಿ ಹಿಡಿದನು. ಸ್ವಲ್ಪ ಹೊತ್ತಿನಲ್ಲಿ ಅವನು ನಿಶ್ಚೇಷ್ಟಿತನಾಗಿ ಬಿದ್ದುಬಿಟ್ಟನು.

ರಾಕ್ಷಸನೊಡನೆ ಕಾದಾಡಿದುದರಿಂದ ಹರಿಕುಲಿಶನಿಗೆ ತುಂಬಾ ಆಯಾಸವಾಯಿತು. ಯುದ್ಧದಲ್ಲಿ ಜಯಶೀಲನಾದ ಮೇಲೆ ಅವನು ನೆಲದ ಮೇಲೆ ಮಲಗಿ ನಿದ್ದೆ ಹೋದನು. ಆದರೆ ಸ್ವಲ್ಪ ಹೊತ್ತಿನಲ್ಲಿ ಅವನಿಗೆ ಇರುವೆಗಳು

ಕಚ್ಚಿದಂತಾಯಿತು. ಅವನೆದ್ದು ನೋಡುವಾಗ, ಹೆಬ್ಬೆರಳು ತೋರದ ಲಕ್ಷಾನುಲಕ್ಷ ಮನುಷ್ಯರು ಅವನನ್ನು ಈಟಿಯಿಂದ ಇರಿಯುತ್ತಿದ್ದರು. ಅವರೇ ಪಿಗ್ಮಿಗಳು. ಅವರ ಯುದ್ಧಕ್ರಮವನ್ನು ನೋಡಿ ಆವನಿಗೆ ಬೆರಗಾಯಿತು. ಅವರಲ್ಲಿ ಕೆಲವರನ್ನು ಹಿಡಿದು ತಾನು ಹೊದೆದಿದ್ದ ಸಿಂಹದ ಚರ್ಮದ ಒಂದು ಮೂಲೆಯಲ್ಲಿ ಕಟ್ಟಿಕೊಂಡನು. ಆ ಮೇಲೆ ಇಡೀ ಆಫ್ರಿಕಾ ಖಂಡದಲ್ಲಿ ಅತ್ಲಾಸನನ್ನು ಹುಡುಕುತ್ತಾ ಅಲೆದಾಡಿದನು. ಕೊನೆಗೆ ಅವನಿದ್ದ ಸ್ಥಳವು ಕಾಣ ಸಿಕ್ಕಿತು.

ಅತ್ಲಾಸನು ಭೂಮಿಯನ್ನು ಹೊತ್ತು ತುಂಬಾ ಬಳಲಿದ್ದನು. ಅವನನ್ನು ಕಂಡು ಹರಿಕುಲಿಶನು ವಂದಿಸಿ, ಚಿನ್ನದ ಸೇಬುಗಳನ್ನು ತಂದು ಕೊಟ್ಟರೆ ಭೂಮಿಯನ್ನು ತಾನು ಹೊತ್ತುಕೊಳ್ಳುವೆನೆಂದು ಹೇಳಿದನು. ಅತ್ಲಾಸನಿಗೆ ಸಂತೋಷವಾಯಿತು. "ಕಡೆಗಂತೂ ಸ್ವಲ್ಪ ವಿಶ್ರಾಂತಿಗೆಡೆಯಾಯಿತಲ್ಲಾ" ಎಂದು ಹೇಳಿಕೊಂಡನು. "ಆ ತೋಟದಲ್ಲಿದ್ದ ಅಪ್ಸರೆಯರು ನನ್ನ ಸೊಸೆಯರೇ ಆಗಿರುವರು. ಸೇಬುಗಳನ್ನು ತರುವುದು ಕಷ್ಟದ ಕೆಲಸವಲ್ಲ" ಎಂದನು.

ಹರಿಕುಲಿಶನು ಭೂಮಿಯನ್ನು ಹೊತ್ತುಕೊಂಡು ಬಿಟ್ಟು ಅತ್ಲಾಸನನ್ನು ಸಂಧ್ಯಾಪುತ್ರಿಯರಿದ್ದ ಸೇಬಿನ ತೋಟಕ್ಕೆ ಕಳುಹಿಸಿಕೊಟ್ಟನು. ಸ್ವಲ್ಪ ಸಮಯದಲ್ಲಿಯೇ ಅತ್ಲಾಸನು ಹಿಂದಿರುಗಿದನು. ಅವನ ಕೈಯಲ್ಲಿ ಮೂರು ಚಿನ್ನೇಬುಗಳು ಇದ್ದುವು. ಆದರೆ ಅವನಿಗೆ ಈಗ ಭೂಮಿಯನ್ನು ಹೊರುವ ಕೆಲಸ ಬೇಸರತೋರಿತು. ಆದರೆ ಹರಿಕುಲಿಶನಿಗೆ ಭೂಮಿಯ ಭಾರವು ಹೆಚ್ಚಾಗುತ್ತಾ ಬರುತಿತ್ತು. ಅದನ್ನೊಮ್ಮೆ ಅತ್ಲಾಸನಿಗೊಪ್ಪಿಸಿಬಿಡಲು ಅವನು ಕಾದುಕೊಂಡಿದ್ದನು. ಆದರೆ ಅತ್ಲಾಸನು "ಹರಿಕುಲಿಶಾ, ನಾನೇ ಈ ಸೇಬಿನ ಹಣ್ಣುಗಳನ್ನು ಯೂರಿಸ್ತೇಯುಸಿಗೆ ಕೊಟ್ಟುಬಿಡುತ್ತೇನೆ. ಅಲ್ಲಿ ಆಸ್ಥಾನದಲ್ಲಿದ್ದು ನನ್ನ ಆರೋಗ್ಯವನ್ನು ಸ್ವಲ್ಪ ಸುಧಾರಿಸಿಕೊಂಡು ಬರುತ್ತೇನೆ," ಎಂದನು. ಹರಿಕುಲಶನಿಗೆ ಬಿಕ್ಕಟ್ಟಿನ ಪರಿಸ್ಥಿತಿಯೊದಗಿತು. ಅವನು ಒಡನೆಯೇ ಒಂದು ಉಪಾಯವನ್ನು ಹೂಡಿದನು.

"ಓ ಅತ್ಲಾಸಾ! ನೀನು ಹೇಳುವ ಮಾತಿಗೆ ನನ್ನ ಒಪ್ಪಿಗೆ. ಆದರೆ ಇನ್ನೂ ಸ್ವಲ್ಪ ಹೆಚ್ಚುಕಾಲ ಈ ಭೂಮಿಯನ್ನು ಹೊರಬೇಕಾದರೆ ನನಗೊಂದ್ದು ಸಿಂಬೆ ಬೇಕು. ನಾನು ಒಂದು ಸಿಂಬೆ ತರುತ್ತೇನೆ. ಆ ಸೇಬುಹಣ್ಣು

ಗಳನ್ನು ಕೆಳಗಿಟ್ಟು ಈ ಭೂಮಿಯನ್ನು ಸ್ವಲ್ಪ ಹಿಡಿದುಕೋ. ಈಗಲೇ ಬರು ತ್ತೇನೆ” ಎಂದನು. ಅತ್ಲಾಸನು ಹರಿಕುಲಿಶನ ಮಾತಿನಂತೆ, ಸೇಬುಹಣ್ಣು ಗಳನ್ನು ಕೆಳಗಿರಿಸಿ, ಭೂಮಿಯನ್ನು ಎತ್ತಿಕೊಂಡನು. ಕೂಡಲೇ ಹರಿಕುಲಿ ಶನು ಆ ಹಣ್ಣುಗಳನ್ನು ತೆಗೆದುಕೊಂಡು ಕಾಲಿಗೆ ಬುದ್ಧಿ ಹೇಳಿದನು. ಅತ್ಲಾ ಸನು ಅವನ ಉಪಾಯವನ್ನು ತಿಳಿದು ಹಿಂದಕ್ಕೆ ಬರುವಂತೆ ಹೇಳಿದನು. ಹರಿಕುಲಿಶನು ಕಿವಿಮುಚ್ಚಿ, ವಾಯುವೇಗದಿಂದ ಓಡಿಹೋಗಿ, ಮೈಸಿನಿ ಯನ್ನು ಸೇರಿ, ಸೇಬುಹಣ್ಣುಗಳನ್ನು ಯೂರಿಸ್ತೇಯನಿಗೆ ಒಪ್ಪಿಸಿದನು.

ಇನ್ನೊಂದು ಕೆಲಸಮಾಡಿದರೆ ಹರಿಕುಲಿಶನು ಬಿಡಿಯಾಳಾಗುವನು. ಆ ಮೇಲೆ ಅವನಿಗೆ ಯೂರಿಸ್ತೇಯನ ಹಂಗೇನೂ ಇರಲಾರದು. ಅದನ್ನು ಆ ದಾಯಾದಿಯು ತಿಳಿದು ಬಹು ಅಪಾಯಕರವಾದ ಕೆಲಸವನ್ನು ಅವನಿಗೆ ಕೊಟ್ಟನು. ಪಾತಾಳಲೋಕಕ್ಕೆ ಹೋಗಿ ಅದರ ಬಾಗಿಲನ್ನು ಕಾಯು ತ್ತಿದ್ದ ಸೆರ್ಬೆರ ಎಂಬ ಮೂರು ತಲೆಯ ನಾಯಿಯನ್ನು ಮೈಸಿನಿಗೆ ತರಬೇ ಕೆಂದು ಅವನು ಹರಿಕುಲಿಶನಿಗೆ ಅಪ್ಪಣೆಕೊಟ್ಟನು. ಯೂರಿಸ್ತೇಯನ ಅಭಿ ಪ್ರಾಯದ ಪ್ರಕಾರ ಇದು ಹರಿಕುಲಿಶನಿಗೆ ಅಸಾಧ್ಯ. “ಇಲ್ಲವೇ ಒಂದು ವೇಳೆ ಸಾಧ್ಯವಾದರೂ ಪಾತಾಳಲೋಕಕ್ಕೆ ಹೋದ ಮೇಲೆ ಯಮನು ಬಿಡುವನೇ? ಹರಿಕುಲಿಶನು ಬರಲಾರ,” ಎಂದು ಅವನು ಗ್ರಹಿಸಿದನು.

ಅಪ್ಪಣೆಯಾದ ಕೂಡಲೇ ಹರಿಕುಲಿಶನು ಕಾರ್ಯೋನ್ಮುಖನಾದನು. ಅವನು ಸಿಂಹದ ತೊಗಲನ್ನು ಹೊದ್ದು, ತನ್ನ ಗದೆಯನ್ನೂ, ಬಿಲ್ಲು ಬಾಣ ಗಳನ್ನೂ ಹಿಡಿದು ಪಶ್ಚಿಮಾಭಿಮುಖವಾಗಿ ಹೊರಟು, ಸಂಧ್ಯಾಪುತ್ರಿಯರಿದ್ದ ತೋಟವನ್ನು ದಾಟಿ ಮುಂದೆ ಹೋದನು. ಅಲ್ಲಿ ಎರಡು ಬಂಡೆಕಲ್ಲುಗಳ ಮಧ್ಯೆ ಒಂದು ರಂಧ್ರವಿತ್ತು. ಇಣಿಕಿ ನೋಡಿದರೆ ಮಸಿಯಂತೆ ಕಪ್ಪಾದ ನೀರು ಕಾಣುತಿತ್ತು. ಆದರೆ ಆದರೊಳಗೆ ಬಿದ್ದವರಿಗೆ ಅಧೋಗತಿಯೇ ಸರಿ. ಅವರೆಂದೂ ಮೇಲೆ ಬರಲು ಸಾಧ್ಯವಿರಲಿಲ್ಲ. ಆದರೆ ಪಾತಾಳಲೋಕಕ್ಕೆ ಹೋಗಲು ಅದೊಂದು ದಾರಿಯಾಗಿತ್ತು.

ಹರಿಕುಲಿಶನು ಹೆದರಿಕೆಯೆಂಬುದೇನೆಂದು ಅರಿಯನು. ಅವನು ರಂಧ್ರಕ್ಕಾಗಿ ಕೆಳಗಿಳಿದು ಬಹುದೂರ ಹೋದನು. ಮುಂದೆ ಒಂದು ಕತ್ತ ಲಿನ ಹಾದಿಯು ತೋರಿತು. ಆ ಹಾದಿಹಿಡಿದು ಮುಂದೆ ನಡೆದುಹೋಗಲು ಬಾಗಿಲು ಕಾಯುತ್ತಿದ್ದ ಮೂರು ತಲೆಯ ನಾಯಿಯು ಕಾಣಸಿಕ್ಕಿತು. ಅದರ

ರೂಪ ಭಯಂಕರವಾಗಿದ್ದರೂ, ಹರಿಕುಲಿಶನನ್ನು ನೋಡಿ, ಅದು ಬಾಲವನ್ನು ಅಲ್ಲಾಡಿಸುತ್ತಾ ಮುಂದೆ ಬಂದು ಸ್ವಾಗತೀಕರಿಸಿತು. ಆ ವೇಳೆ ಅವನು ನರಕದ ಬಾಗಿಲನ್ನು ದಾಟಿ ಮುಂದೆ ಯಮಧರ್ಮರಾಯನ ಆಸ್ಥಾನವನ್ನು ಸೇರಿ, ಸರ್ಬರನನ್ನು ತನ್ನೊಡನೆ ಕಳುಹಿಸಿಕೊಡಬೇಕೆಂದು ಕೇಳಿಕೊಂಡನು. ಯಮಧರ್ಮರಾಯನು, ಅವನ ಮುಖವನ್ನು ನೋಡಿ, ಹರ್ಷಚಿತ್ತನಾಗಿ, ಅವನು ಮಾಡಿದ ಮಹತ್ಕಾರ್ಯಗಳನ್ನು ನೆನಪಿಗೆ ತಂದು "ವೀರಾಗ್ರಣಿಯೇ ನಿನ್ನ ಬಯಕೆಯನ್ನು ಸಲ್ಲಿಸಿರುವೆನು. ಆದರೆ ನಾಯಿಯನ್ನು ಮಾತ್ರ, ಶಸ್ತ್ರಾಸ್ತ್ರಗಳನ್ನುಪಯೋಗಿಸದೆ ನೀನೇ ಹಿಡಿದುಕೊಂಡು ಹೋಗಬೇಕು" ಎಂದನು.

ಆ ಯವನ ವೀರನು ತುಂಬಾ ಸಂತೋಷದಿಂದ ಪಾತಾಳ ಲೋಕದ ಹೆಬ್ಬಾಗಿಲಿಗೆ ಬಂದನು. ಅಷ್ಟರಲ್ಲಿ ಸಾಧುವಾಗಿದ್ದ ನಾಯಿಯು ಕೂಡಲೇ ಭಯಂಕರ ರೂಪನ್ನು ತಾಳಿತು. ಅದರ ಕಿವಿಗಳು ನೆಟ್ಟಗೆ ನಿಂತವು. ಅದು ಭಯಂಕರವಾದ ಹಲ್ಲುಗಳನ್ನು ತೋರುತ್ತ ಕಚ್ಚಲು ಬಂತು. ಆಗ ಹರಿಕುಲಿಶನು ತನ್ನ ಕೈಗಳಿಂದ ಅದರ ಕೊರಳನ್ನು ಒತ್ತಿ ಹಿಡಿದುಕೊಂಡನು. ಬಂದ ದಾರಿಯನ್ನೇ ಹಿಡಿದು, ನಾಯಿಯನ್ನು ದರದರನೆ ಎಳೆದುಕೊಂಡೇ ಅವನು ನಡೆದುಬಿಟ್ಟನು. ಪಾತಾಳ ಲೋಕದ ಗಡಿಯನ್ನು ದಾಟಿದ ಮೇಲೆ ಅದರ ಅಬ್ಬರ ನಿಂತಿತು. ಅದು ತೊಂದರೆ ಮಾಡದೆ ಹರಿಕುಲಿಶನನ್ನು ಅನುಸರಿಸಿತು.

ಹರಿಕುಲಿಶನು ಹಲವು ದಿನ ಪಯಣ ಬೆಳಸಿ, ಮೈಸಿನಿಯನ್ನು ತಲುಪಿದನು. ನಾಯಿಯನ್ನು ಎಳೆದುಕೊಂಡು ಹೋಗಿ ಯೂರಿಸ್ತೇಯನ ಮುಂದೆ ನಿಲ್ಲಿಸಿದನು. ಅವನು ನಾಯಿಯ ಭೀಕರ ರೂಪವನ್ನು ನೋಡಿ, ಸಿಂಹಾಸನದಿಂದ ಉರುಳಿ ಬಿದ್ದುಬಿಡುವುದರಲ್ಲಿದ್ದನು. ಆದರೆ ಅವನ ದಾಯಾದಿಯು ಅವನನ್ನು ಹಿಡಿದು ನಿಲ್ಲಿಸಿದನು. ಕೂಡಲೇ ಯವನರ ಪದ್ಧತಿಯಂತೆ ಹನ್ನೆರಡು ಕೆಲಸಗಳನ್ನು ಸರಿಯಾಗಿ ಮಾಡಿದ ಮೇಲೆ ಅಡಿಯಾಳುಗಳನ್ನೆಲ್ಲಾ ಬಿಡುಗಡೆ ಮಾಡಬೇಕಾಗಿತ್ತು. ಅದರಂತೆ ಅವನು ಹರಿಕುಲಿಶನನ್ನು ಬಿಡಿ ಆಳಾಗಿ ಮಾಡಿದನು. ಆದರವನು ಮೈಸಿನಿಗೆ ಕಾಲಿಡಕೂಡದೆಂದು ಹೇಳಿದನು. ಕೂಡಲೇ ಹರಿಕುಲಿಶನು ಬಿಡಿಯಾಳಾಗಿ ಮೈಸಿನಿಯನ್ನು ಬಿಟ್ಟು ನಡೆದನು.

ಅಷ್ಟರಲ್ಲಿ ಅವನ ಕೀರ್ತಿಯು ಯವನ ರಾಜ್ಯದಲ್ಲೆಲ್ಲಾ ಹರಡಿತ್ತು. ಅನೇಕ ರಾಜಪುತ್ರರು ತಮ್ಮ ಹಗೆಗಳೂ, ಕಳ್ಳರೂ, ಭಯಂಕರ ಪ್ರಾಣಿಗಳೂ ಕೊಡುವ ಕಷ್ಟಗಳನ್ನು ನಿವಾರಿಸಿಕೊಳ್ಳಲು ಅವನ ಸಹಾಯವನ್ನು ಕೋರಿದರು. ಹರಿಕುಲಿಶನು ದುಷ್ಟನಿಗ್ರಹ, ಶಿಷ್ಟಪರಿಪಾಲನೆಯಲ್ಲಿ ತನ್ನ ಸಮಯವನ್ನು ಕಳೆದನು. ಸ್ವಲ್ಪ ಸಮಯದಲ್ಲಿ ಅವನು ದಯಾನೀರ ಎಂಬ ಕನ್ನಿಕೆಯನ್ನು ಮದುವೆಯಾದನು. ಅವಳನ್ನು ಒಂದು ದಿನ ತನ್ನ ಸಂಗಡ ಕರೆದುಕೊಂಡು ಹೋಗುತ್ತಿದ್ದಾಗ, ದಾರಿಯಲ್ಲಿ ಒಂದು ಹೊಳೆಯು ಸಿಕ್ಕಿತು. ಆ ಹೊಳೆಯು ನೆರೆಯ ನೀರಿನಿಂದ ತುಂಬಿತ್ತು. ಅದನ್ನು ದಾಟಲು ದೋಣಿಗಳಿರಲಿಲ್ಲ. ಅವನು ಅದನ್ನು ದಾಟುವ ಉಪಾಯವನ್ನು ಆಲೋಚಿಸುತ್ತಿದ್ದಾಗ, ಒಬ್ಬ ಕಿಂಪುರುಷನು ಆ ದಾರಿಗಾಗಿ ಬಂದನು. ಅವರನ್ನು ತನ್ನ ಬೆನ್ನ ಮೇಲೇರಿಸಿಕೊಂಡು ಹೊಳೆಯನ್ನು ದಾಟಿಸಲು ಆ ಕಿಂಪುರುಷನು ಒಪ್ಪಿಕೊಂಡನು. ಮೊದಲು ಹರಿಕುಲಿಶನು ಹೊಳೆ ದಾಟಿದನು. ಆ ಮೇಲೆ ಕಿಂಪುರುಷನು ಅವನ ಹೆಂಡತಿಯನ್ನು ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಹೊಳೆ ದಾಟಿದನು. ಆದರೆ ಅವಳನ್ನು ಕೆಳಗಿಳಿಸದೆ ಹರಿಕುಲಿಶನ ಸತ್ವವನ್ನು ತಿಳಿಯದೆ, ಕಾಲಿಗೆ ಬುದ್ಧಿ ಹೇಳಿದನು; ಆಗ ಅವನು ಉಪಾಯಕಾಣದೆ, ವಿಷದಲುಗಿನ ಬಾಣವನ್ನು ಹೂಡಿದನು. ಆ ಬಾಣಕ್ಕೆ ಕಿಂಪುರುಷನು ಆಹುತಿಯಾದನು. ಆದರೆ ಅವನು ಸಾಯುವುದಕ್ಕಿಂತ ಮುಂಚಿತವಾಗಿ, ತನ್ನ ನೆತ್ತರಿನಲ್ಲಿ ಒಂದು ಮಂತ್ರೌಷಧವನ್ನು ಅದ್ದಿ "ನಿನ್ನ ಗಂಡನ ಪ್ರೇಮ ಕಡಿಮೆಯಾದಾಗ, ನೀನಿದನ್ನು ಅವನು ಉಪಯೋಗಿಸುವ ವಸ್ತ್ರಗಳಿಗೆ ಸವರಿದರೆ ಅವನು ನಿನ್ನನ್ನು ಮರೆಯನು" ಎಂದನು. ಆದರೆ ನಿಜವಾಗಿಯೂ ಆ ಮಂತ್ರೌಷಧಿಯು ವಿಷವೇ ಆಗಿತ್ತು. ಆ ಕಿಂಪುರುಷನು ಮುಯ್ಯಿ ತೀರಿಸಲು ಹೂಡಿದ ಉಪಾಯವದು.

ಆ ಮೇಲೆ ಹರಿಕುಲಿಶನು ತನ್ನ ಪತ್ನಿಯೊಡನೆ ಬಹುಕಾಲ ಸುಖದಿಂದ ಕಾಲಕಳೆದನು. ಒಮ್ಮೆ ಅವನು ಆಯತಪರ್ವತದಲ್ಲಿ ಒಂದು ಯಜ್ಞವೇದಿಕೆಯನ್ನು ನಿರ್ಮಿಸಿ, ಯಜ್ಞ ಮಾಡಲು ಸನ್ನಾಹಮಾಡಿದನು, ಅದಕ್ಕಾಗಿ ಸ್ವಲ್ಪ ಕಾಲ ಅವನು ಹೆಂಡತಿಯಿಂದ ದೂರವಾಗಿರಬೇಕಾಗಿತ್ತು. ಆದರೆ ಅವನ ಹೆಂಡತಿಗಾದರೋ, ಹರಿಕುಲಿಶನು ತನ್ನನ್ನಗಲುವನೆಂದು ಭೀತಿಯುಂಟಾಯಿತು. ಅವಳು ಅವನ ಯಜ್ಞವಸ್ತ್ರಗಳಿಗೆಲ್ಲಾ ಆ ಕಿಂಪುರುಷನು ಸಾಯು

ವಾಗ ಕೊಟ್ಟ ಮಂತ್ರೌಷಧವನ್ನು ಹಚ್ಚಿದಳು. ಹರಿಕುಲಿಶನು ಅದನ್ನು ಯಜ್ಞಾರಂಭದಲ್ಲಿ ತರಹೇಳಿದನು. ಆದರೆ ಅದನ್ನು ತೊಟ್ಟುಕೊಂಡು ಕೂಡಲೇ ಅವನ ಮೈಯೆಲ್ಲಾ ಸುಟ್ಟುಹೋಯಿತು. ಸಹಿಸಲಸಾಧ್ಯವಾದ ನೋವು ಅವನ ಮೈಯನ್ನು ಆವರಿಸಿತು. ನೋವಿನಿಂದ ಅವನು ಹುಚ್ಚು ಹುಚ್ಚಾದನು. ಅವನು ಯಜ್ಞವೇದಿಕೆಯಿಂದ ಕೆಳಗೆ ಹಾರಿ, ಮರಗಳನ್ನು ಬೇರು ಸಹಿತ ಕಿತ್ತೆಸೆದನು. ಆ ವಸ್ತ್ರಗಳನ್ನು ತಂದ ದೂತನನ್ನೇ ಸಮುದ್ರಕ್ಕೆ ಬಿಸಾಡಿಬಿಟ್ಟನು. ನೋವು ಕಮ್ಮಿಯಾದ ಮೇಲೆ ಅವನಿಗೆ ಮೈಮೇಲೆ ಪ್ರಜ್ಞೆ ಉಂಟಾಯಿತು. ಆಗ ಅವನು ತನ್ನ ಅವಸಾನಕಾಲವು ಸನ್ನಿಹಿತವಾಯಿತೆಂದು ಎಣಿಸಿದನು. ಕೂಡಲೇ ತಾನು ಮೊದಲು ಕಿತ್ತೆಸೆದಿದ್ದ ದೊಡ್ಡ ಮರಗಳ ತುಂಡುಗಳನ್ನು ಜೋಡಿಸಿ, ಅಟ್ಟಳಿಗೆ ಮಾಡಿದನು. ಆ ಮೇಲೆ ತನ್ನ ಸಿಂಹದ ಚರ್ಮವನ್ನು ಅದರ ಮೇಲೆ ಹಾಸಿದನು. ಅದನ್ನೇರಿ ಮಲಗಿಕೊಂಡು ಬಿಟ್ಟನು. ಆ ಮೇಲೆ ತನ್ನ ಗದೆಯನ್ನು ತಲೆಯಡಿಯಲ್ಲಿಟ್ಟುಕೊಂಡನು. ಅಷ್ಟರಲ್ಲಿ ಆಯುತಪರ್ವದಲ್ಲುಂಟಾದ ಗದ್ದಲವನ್ನು ಕೇಳಿ ಜನರು ಗುಂಪುಗುಂಪಾಗಿ ಬಂದು ಅಲ್ಲಿ ನೆರೆದರು. ಅವರಲ್ಲಿ ಆಪ್ತನಾದವನೊಬನನ್ನು ಹರಿಕುಲಿಶನು ಕರೆದು, ಅಟ್ಟಳಿಗೆಗೆ ಬೆಂಕಿಹಚ್ಚಲು ಕೇಳಿಕೊಂಡನು. ಆ ಮಿತ್ರನು ಬಹಳ ವ್ಯಸನದಿಂದ ಚಿತೆಗೆ ಬೆಂಕಿಹಚ್ಚಿದನು. ಬೆಂಕಿಯು ಚಿತೆಯನ್ನು ವ್ಯಾಪಿಸಿತು. ಆದರೆ ಆಶ್ಚರ್ಯ! ಬೆಂಕಿಯು ಅವನ ದೇಹವನ್ನು ಆವರಿಸಿ ತಣ್ಣಗಾಯಿತು. ಅವನ ಶರೀರವು ನವತೇಜಸ್ಸಿನಿಂದ ಕೂಡಿ ಬೆಳಗಿತು. ಸರ್ಪವು ಹೆರೆಯನ್ನು ಕಳೆಯುವಂತೆ, ಭೌತಿಕ ಶರೀರವನ್ನು ತೊರೆದು ಹರಿಕುಲಿಶನು, ದಿವ್ಯ ತೇಜಸ್ಸಿನಿಂದ ಕೂಡಿದವನಾಗಿ ಚಿತೆಯಿಂದ ಹೊರಗೆಬಂದನು. ಆಗ ಸಪ್ತವರ್ಣದ ಕಾಮನಬಿಲ್ಲು ಕಾಣಿಸಿಕೊಂಡು, ಆಕಾಶವನ್ನು ಭೂಮಿಯೊಡನೆ ಜೋಡಿಸಿತು. ದೇವಗಡಣವು ಆ ಸೇತುವೆಗಾಗಿ ಭೂಮಿಗಿಳಿದು ಅಮರನಾದ ಹರಿಕುಲಿಶನನ್ನು ದೇವಭೂಮಿಯಾದ ಅಲಿಂಪಿಯಾ ಪರ್ವತಾಗ್ರಕ್ಕೆ ಕರೆದೊಯ್ದಿತು.

ಯವನರ ಹರಿಕುಲಿಶನಿಗೂ, ಭರತಖಂಡದ ಹರಿಕುಲಕ್ಕೂ ಸಂಬಂಧ ವಿರಬಹುದೇ? ಹರಿಕುಲಿಶನನ್ನು ಹರ್ಕ್ಯುಲಿಸ್ ಎಂದು ಯವನರು ಕರೆಯುತ್ತಾರೆ. ಅವನಿಗೂ ಕೃಷ್ಣನಂತೆ ಒಬ್ಬ ಸಹೋದರನಿದ್ದನು. ಅವನೂ ಗೋಪಾಲಕರೊಡನೆ ಕೃಷ್ಣನಂತೆ ಕಾಲಕಳೆದಿದ್ದಾನೆ. ಅಷ್ಟೇ ಅಲ್ಲ. ಲೇರ್ನೀ

ಯಾದ ನೀರ್ವಾಣವನ್ನು ಸದೆಬಡೆದಂತೆ, ಕೃಷ್ಣನು ಕಾಳಿಂದಿಮರ್ದನನಾಗಿದ್ದಾನೆ. ಬಹುಶಃ ಯವನರ ಹರಿಕುಲಿಶನಿಗೆ ಭರತಖಂಡದ ಹರಿಕುಲದ ಸಂಬಂಧವಿದ್ದಿರಬೇಕು!

Printed by the Jaya Bharath Press. Mangalore

ಜುರಾಮುಕ್ಕೆಗಾಗಿ